ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟ್ರಂಪ್ ಜತೆ ತೈವಾನ್ ತಗಾದೆ

ಚೀನಾಕ್ಕೆ ಮೂರು ದಿನಗಳ ಭೇಟಿಗೆ ಆಗಮಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅದ್ದೂರಿ ಸ್ವಾಗತ ಕೋರಲಾಯಿತು. ಬೀಜಿಂಗ್‌ನ ಗ್ರೇಟ್ ಹಾಲ್ ಆಫ್ ದಿ ಪೀಪಲ್‌ನಲ್ಲಿ ನಡೆದ ದ್ವಿಪಕ್ಷೀಯ ಶೃಂಗಸಭೆಯಲ್ಲಿ ಮಾತನಾಡಿದ ಚೀನಾ ತೈವಾನ್ ವಿಚಾರವನ್ನು ಪ್ರಮುಖವಾಗಿ ಪ್ರಸ್ತಾಪಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಬೆಂಗಳೂರು ನಗರ ಪಾಲಿಕೆಗಳು

• ಉತ್ತರ • ದಕ್ಷಿಣ • ಪೂರ್ವ • ಪಶ್ಚಿಮ • ಕೇಂದ್ರ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ನನ್ನ ಇ-ಖಾತಾ ನನ್ನ ಹಕ್ಕು

ಅಭಿಯಾನ 16ನೇ ಮೇ, 2026 ರಿಂದ

ಬೆಂಗಳೂರು ನಗರದ ಭೂಮಾಲೀಕರ ಹಿತಕ್ಕಾಗಿ ಸರ್ಕಾರದ 6ನೇ ಗ್ಯಾರಂಟಿ - "ಭೂ ಗ್ಯಾರಂಟಿ" ಯೋಜನೆ

'ಬಿ' ಖಾತಾದಿಂದ 'ಎ' ಖಾತಾ ಪರಿವರ್ತನೆ ಅಭಿಯಾನ
(ಪ್ರತಿ ಶನಿವಾರ ಬೆಂಗಳೂರಿನ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ತಲಾ 10 ರಂತೆ 50 ಸ್ಥಳಗಳಲ್ಲಿ)

ಮಾರ್ಗಸೂಚಿ ಬೆಲೆ 5% ಬದಲಿಗೆ ಈಗ 2% ಮಾತ್ರ ಪಾವತಿಸಿ.

ಈ ಅವಕಾಶ **ಕೇವಲ 100 ದಿನಗಳು ಮಾತ್ರ,** ಸದುಪಯೋಗಪಡಿಸಿಕೊಳ್ಳಿ

ನಿಮ್ಮ 'ಬಿ' ಖಾತೆಯನ್ನು **'ಎ' ಖಾತೆಯಾಗಿ** ಪರಿವರ್ತಿಸಿಕೊಳ್ಳಿ.

ಬೆಂಗಳೂರು ನಗರವು ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆದಿದ್ದರೂ ನಾಗರಿಕರ ಆಸ್ತಿ ದಾಖಲೆಗಳ ನಿರ್ವಹಣೆ ಕಾಗದ ಪತ್ರಗಳ ಮೂಲಕವೇ ನಡೆಯುತ್ತಿತ್ತು. ಜೊತೆಗೆ ನಕಲಿ ದಾಖಲೆಗಳ ಸೃಷ್ಟಿ, ವಂಚನೆ ಯಥೇಚ್ಛವಾಗಿ ನಡೆಯುತ್ತಿತ್ತು. ಇದನ್ನು ಮನಗಂಡು ನಿಮ್ಮ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣ ಮಾಡಿ, ಉಚಿತವಾಗಿ ನಿಮ್ಮ ಮನೆ ಬಾಗಿಲಿಗೆ ತಲುಪಿಸುವುದಾಗಿ ಹಾಗೂ ಆ ಮೂಲಕ ವಂಚನೆ ತಪ್ಪಿಸುವುದಾಗಿ ಭರವಸೆ ನೀಡಲಾಗಿತ್ತು.

ಬೆಂಗಳೂರಿನಲ್ಲಿದ್ದ 23 ಲಕ್ಷಕ್ಕೂ ಅಧಿಕ ಆಸ್ತಿ ದಾಖಲೆಗಳನ್ನು ಸ್ಕ್ಯಾನ್ ಹಾಗೂ ಡಿಜಿಟಲೀಕರಣ ಮಾಡಲಾಗಿದೆ. ಅವುಗಳಿಗೆ ಇ-ಖಾತೆಗಳನ್ನು ಸಿದ್ಧಪಡಿಸಿ, ವಿತರಿಸಲಾಗುತ್ತಿದೆ.

ಜಿಬಿಎ ಅಧಿಕಾರಿಗಳು ಅಥವಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರು ನಿಮ್ಮ ಮನೆ ಬಾಗಿಲಿಗೆ ಬಂದು ಇ-ಖಾತೆಗಳನ್ನು ಉಚಿತವಾಗಿ ವಿತರಿಸಲಿದ್ದಾರೆ.

ಬೆಂಗಳೂರಿನ 23 ಲಕ್ಷಕ್ಕೂ ಅಧಿಕ ಇ-ಖಾತೆಗಳು ನಿಮ್ಮ ಮನೆ ಬಾಗಿಲಿಗೆ ಉಚಿತವಾಗಿ ತಲುಪಲಿವೆ.

ಯಾವುದೇ ಇ-ಖಾತಾ ದೂರುಗಳಿದ್ದಲ್ಲಿ, ಇಲ್ಲಿ ಸಂಪರ್ಕಿಸಿ:

'ನನ್ನ ಖಾತಾ ನನ್ನ ಹಕ್ಕು' ಅಭಿಯಾನದ ಸ್ಥಳಗಳ ವಿವರಗಳಿಗೆ ಸಂಪರ್ಕಿಸಿ:

ರಾಷ್ಟ್ರೀಯ ಇ-ಆಡಳಿತ ಪ್ರಶಸ್ತಿ (ಚಿನ್ನ) ವಿಜೇತ - 2025

'ಬೆಂಗಳೂರಿನ ಅಭಿವೃದ್ಧಿಯ ಹೊಸಯುಗಕ್ಕೆ ಮುನ್ನುಡಿ'

ಇ-ಖಾತಾ ಸಹಾಯವಾಣಿ: 94806 83695

ಸಮಾಚಾರ ಸಣ್ಣದಲ್ಲ

ಇ-ಆಸ್ತಿ: ದಾಖಲೆ ಸಲ್ಲಿಕೆಗೆ ಸೂಚನೆ

ತುಮಕೂರು: ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಸಾರ್ವಜನಿಕರು ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 30-40 ವರ್ಷಗಳಿಂದ ಸರಕಾರಿ/ಪಾಲಿಕೆ/ಸ್ವತ್ತುಗಳಲ್ಲಿ ಮನೆ ನಿರ್ಮಿಸಿಕೊಂಡು ಪಾಲಿಕೆಗೆ ತೆರಿಗೆ ಪಾವತಿಸಿ/ಪಾವತಿಸದೇ ಇರುವ ಸ್ವತ್ತುಗಳಿಗೆ ಇ-ಆಸ್ತಿ ದಾಖಲಿಸಲು ದಾಖಲೆಗಳನ್ನು ಸಲ್ಲಿಸಬೇಕೆಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ವತ್ತುಗಳಿಗೆ ಸಂಬಂಧಿಸಿದಂತೆ ಅವರ ಬಳಿ ಹಕ್ಕುಪತ್ರ ವಿದ್ದು, ಇ-ಆಸ್ತಿ ಮಾಡಿಸಲು ಹಕ್ಕುಪತ್ರದ ನೈಜತೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳಿಲ್ಲದೆ ಇರುವ ನಿವಾಸಿಗಳು ತಮ್ಮಲ್ಲಿರುವ ಹಕ್ಕುಪತ್ರ, ತಹಸೀಲ್ದಾರ ವರಿಂದ ಪಡೆದಿರುವ ವಾಸಸ್ಥಳ ದೃಢೀಕರಣ ಪತ್ರ, ವಿದ್ಯುಚ್ಛಕ್ತಿ ಬಿಲ್, ತೆರಿಗೆ ಪಾವತಿಸಿದ ರಶೀದಿ ಇತ್ಯಾದಿ ಸರ್ಕಾರಿ ದಾಖಲೆಗಳನ್ನು ಪಾಲಿಕೆಗೆ ಹಾಜರುಪಡಿಸಿದ್ದಲ್ಲಿ ಸದರಿ ಸ್ವತ್ತುಗಳಿಗೆ ಇ-ಆಸ್ತಿ ದಾಖಲಿಸುವ ಬಗ್ಗೆ ನಗರ ಆಶ್ರಯ ಸಮಿತಿಯಲ್ಲಿ ವಿಷಯವನ್ನು ಮಂಡಿಸಿ ನಿಯಮಾನುಸಾರ ಕ್ರಮ ಜರುಗಿಸಲು ಪಾಲಿಕೆ ಮುಂದಾಗಿದೆ. ಸಾರ್ವಜನಿಕರು ತಮ್ಮಲ್ಲಿರುವ ದಾಖಲೆಗಳನ್ನು ಜೂನ್ 14ರೊಳಗೆ ಪಾಲಿಕೆಯ ಆಶ್ರಯ ಶಾಖೆಯನ್ನು ಸಂಪರ್ಕಿಸಿ ನಿಗದಿತ ನಮೂನೆಯೊಂದಿಗೆ ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: ಕೈಮಗ್ಗ ಉತ್ಪನ್ನಗಳ ಅಭಿವೃದ್ಧಿಗಾಗಿ ಕೈಮಗ್ಗ ನೇಯ್ಗೆ ವೃತ್ತಿಯಲ್ಲಿ ನೈಪುಣ್ಯತೆ,ಶ್ರೇಷ್ಠತೆ,ತಾಂತ್ರಿಕತೆ,ಉತ್ಕೃಷ್ಠತೆ ಹೊಂದಿರುವ ಉತ್ಪನ್ನಗಳ ಉತ್ಪಾದನೆಯಲ್ಲಿ ತೊಡಗಿರುವ ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲು ಉದ್ದೇಶಿಸಲಾಗಿರುತ್ತದೆ. ಸದರಿ ಪ್ರಶಸ್ತಿಯು ನಗದು ಬಹುಮಾನ, ಒಂದು ನೆನಪಿನ ಕಾಣಿಕೆ, ಒಂದು ಶಾಲು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ. ಆದ್ದರಿಂದ ಅರ್ಹ ಕೈಮಗ್ಗ ನೇಕಾರರು 2025ರ ಮೇ 14ರಿಂದ ಖುದ್ದಾಗಿ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೊಠಡಿ ಸಂಖ್ಯೆ: ಎಸ್.ಎ-14, 2ನೇ ಮಹಡಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಈ ಕಚೇರಿಗೆ ಭೇಟಿ ನೀಡಿ ಅರ್ಜಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಮೇ 26 ರೊಳಗಾಗಿ ಸಲ್ಲಿಸಬಹುದು.ರೇಷ್ಮೆ ಪ್ರಥಮ 25,000- ದ್ವಿತೀಯ 20,000- ಹತ್ತಿ ಪ್ರಥಮ 20,000, ದ್ವಿತೀಯ 15,000- ಉಣ್ಣೆ 15,000- ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ದೂರವಾಣಿ ಸಂಖ್ಯೆ: 08372-259664, 9945594959, 8971754927 , 9986392953ಗಳಿಗೆ ಸಂಪರ್ಕಿಸಬಹುದೆಂದು ಕೈಮಗ್ಗ ಮತ್ತು ಜವಳಿಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

18ರಿಂದ ಎಸೆಸ್ಸೆಲ್ಸಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

ತುಮಕೂರು: ತುಮಕೂರು ಜಿಲ್ಲೆಯಾದ್ಯಂತ 14 ಪರೀಕ್ಷಾ ಕೇಂದ್ರಗಳಲ್ಲಿ ಮೇ 18 ರಿಂದ 25ರವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ-2 ನಡೆಯಲಿದ್ದು, ಪರೀಕ್ಷೆಯನ್ನು ಯಾವುದೇ ಲೋಪದೋಷವಿಲ್ಲದಂತೆ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀ. ವ್ಯಾಪ್ತಿಯೊಳಗಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶುಭ ಕಲ್ಯಾಣ್ ಅವರು ಆದೇಶ ಹೊರಡಿಸಿದ್ದಾರೆ. ನಿಷೇಧಾಜ್ಞೆಯು ಮೇ 18 ರಿಂದ 25ರವರೆಗೆ ಸರಕಾರಿ ರಜೆ ಮತ್ತು ಪರೀಕ್ಷೆ ನಡೆಯದೆ ಇರುವ ದಿನಗಳನ್ನು ಹೊರತುಪಡಿಸಿ) ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ಈ ನಿಷೇಧಾಜ್ಞೆಯನ್ವಯ ಪರೀಕ್ಷೆ ನಡೆಯುವ ದಿನಾಂಕದಅದು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಕಂಪ್ಯೂಟರ್/ಸೈಬರ್,ಬೆರಳಚ್ಚು ಅಂಗಡಿಗಳನ್ನು ಮುಚ್ಚತಕ್ಕದ್ದು. ನಿಷೇಧಾಜ್ಞೆ ಜಾರಿಯಲ್ಲಿರುವ ಅವಧಿಯಲ್ಲಿ ಅನಧಿಕೃತ ವ್ಯಕ್ತಿಗಳು ಯಾರೂ ನಿರ್ಬಂಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಹಾಗೂ ನಿಷೇಧಾಜ್ಞೆಯನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ.

ಪರಿಷ್ಕೃತ ವೇತನ ಮಂಜೂರಿಗೆ ಆಗ್ರಹ

ಚಿಂತಾಮಣಿ: ಚಿಮುಲ್ ಮೆಗಾಡೇರಿ ಗುತ್ತಿಗೆ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಚಿಮುಲ್ ನಿರ್ದೇಶಕ ಕೆ.ಎನ್.ಅವುಲಪ್ಪ ನಿವಾಸಕ್ಕೆ ಭೇಟಿ ನೀಡಿ ಗುತ್ತಿಗೆ ನೌಕರರ ವೇತನ ಪರಿಷ್ಕೃತ ಮಾಡುವಂತೆ ಮನವಿ ಸಲ್ಲಿಸಿದರು. ಜೆಡಿಎಸ್ ಯುವ ಮುಖಂಡ ಜಂಗಮಪುರ ನಾರಾಯಣಮೂರ್ತಿ ನೇತೃತ್ವದಲ್ಲಿ ಚಿಮುಲ್ ಮೆಗಾಡೇರಿ ಗುತ್ತಿಗೆ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮಾತನಾಡಿ ಜಿಲ್ಲಾ ಹಾಲು ಒಕ್ಕೂಟದ ಮೆಗಾಡೇರಿಯಲ್ಲಿನ ಎಲ್ಲ ವಿಭಾಗಗಳಲ್ಲಿ ಹಾಗೂ ಜಿಲ್ಲೆ ತಾಲೂಕಿನ ಶಿಬಿರಗಳಲ್ಲಿ ಪ್ರತಿದಿನ ಅಂದಾಜು 300ಕ್ಕೂ ಹೆಚ್ಚಿನ ಗುತ್ತಿಗೆ ಕಾರ್ಮಿಕರು ಕಾರ್ಯನಿರ್ವ ಹಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಚಿಮುಲ್ ಮೆಗಾಡೇರಿ ಗುತ್ತಿಗೆ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವೆಂಕಟೇಶಪ್ಪ, ಪದಾಧಿಕಾರಗಳಾದ ಗಿರೀಶ್,ರಾಮಚಂದ್ರ, ವೆಂಕಟೇಶ್, ಸುನೀಲ್, ಹರೀಶ್,ನಾಗೇಶ್,ರವಿ, ಆದಿನಾರಾಯಣ ಇದ್ದರು.

{ಬಿ.ವೈ.ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯದಲ್ಲಿ ಮಾಡಬೇಕಾದ ಸಾಕಷ್ಟು ಕೆಲಸಗಳಿವೆ. ಸರಕಾರ ನಿರ್ಧಾರಕ್ಕೆ ಮುಂದಿನ ದಿನಗಳಲ್ಲಿ ರಾಜ್ಯದ ಜನ ಉತ್ತರ ಕೊಡುತ್ತಾರೆ. ಹಿಜಾಬ್ ವಿಚಾರ ಇನ್ನೂ ಕೋರ್ಟ್‌ನಲ್ಲಿದೆ. ಅಲ್ಪಸಂಖ್ಯಾತರನ್ನು ಓಲೈಸಲು ಕಾಂಗ್ರೆಸ್ ಯಾವ ಮಟ್ಟಕ್ಕೂ ಹೇಸುವುದಿಲ್ಲ ಎಂದು ತೋರಿಸಿದ್ದಾರೆ. ಹಿಂದೂಗಳಿಗೆ ಕಾಂಗ್ರೆಸ್ ಸರಕಾರ ನಿರಂತರ ಅಪಮಾನ ಮಾಡುತ್ತಿದೆ.



ಚಿಕ್ಕಬಳ್ಳಾಪುರ ನಗರ ಸಭೆಗೆ ಡಿಸಿ ಪ್ರಭು ಭೇಟಿ। ಪೌರಾಯುಕ್ತ ಮನ್ಸೂರ್ ಅಲಿ ವಿರುದ್ಧ ಕೆಂಡಾಮಂಡಲ

ಕರ್ತವ್ಯ ಲೋಪ ಕಂಡುಬಂದರೆ ಸಹಿಸಲ್ಲ

ಚಿಕ್ಕಬಳ್ಳಾಪುರ: ಜಿಲ್ಲಾ ಕೇಂದ್ರದಲ್ಲಿನ ನಗರಸಭೆಗೆ ಗುರುವಾರ ದಿಢೀರ್‌ಭೇಟಿ ನೀಡಿದ ಜಿಲ್ಲಾಧಿಕಾರಿ ಜಿ.ಪ್ರಭು ಅಧಿಕಾರಿಗಳ ಕಾರ್ಯವೈಖರಿಯನ್ನು ಕಣ್ಣಾರೆ ಕಂಡು ಕೆಂಡಾಮಂಡಲವಾದರು.

ಹೌದು ಗುರುವಾರ ಮಧ್ಯಾಹ್ನ ನಗರಸಭೆಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಜಿ.ಪ್ರಭು ಪೌರಾಯುಕ್ತ ಮನ್ಸೂರ್ ಅಲಿ ವಿರುದ್ಧ ಕೆಂಡಾಮಂಡಲವಾದರು. ಆಯುಕ್ತರಾಗಿ ನೀವು ಜಿಲ್ಲಾ ಕೇಂದ್ರದಲ್ಲಿ ವಾಸ್ತವ್ಯ ಇರಬೇಕು. ನೀವು ಬೆಂಗಳೂರಿನಿಂದ ಪ್ರಯಾಣ ಮಾಡುವುದಾದರೆ ಜನರ ಕಷ್ಟಗಳನ್ನು ಯಾವಾಗ ಪರಿಹರಿಸುತ್ತೀರಿ ಎಂದು ತರಾಟೆಗೆ ತೆಗೆದುಕೊಂಡರು.

ಸಮಗ್ರ ಸುಧಾರಣೆ ಅಗತ್ಯ: ನಗರಸಭೆಯ ಎಲ್ಲಾ ಅಧಿಕಾರಿ ನೌಕರ ವರ್ಗದ ಕಾರ್ಯವೈಖರಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು ನಗರಸಭೆಗೆ ಸಾರ್ವಜನಿಕರಿಂದ ಬರುವ ಯಾವುದೇ ದೂರುಗಳನ್ನು ವೈಜ್ಞಾನಿಕವಾಗಿ ದಾಖಲಿಸಿಕೊಂಡು ಅರ್ಜಿದಾರರಿಗೆ ಸ್ವೀಕೃತಿ ನೀಡಬೇಕು ಎಂದು ಸೂಚನೆ ನೀಡಲಾಗಿತ್ತು. ಆದರೆ ನೀವು ಇದನ್ನು ಪಾಲಿಸುತ್ತಿಲ್ಲ ಎಂದರೆ ಏನರ್ಥ.ನಿಮ್ಮ ಅನೀತಿಯ ನಡೆವಳಿಕೆಯ ವಿರುದ್ಧ ಸಾರ್ವಜನಿಕರಿಂದ ನಿರಂತರವಾಗಿ ದೂರುಗಳು ಬರುತ್ತಿವೆ. ನಿಮ್ಮ ನಡವಳಿಕೆ ಸುಧಾರಿಸಲಿಲ್ಲ ಎಂದರೆ ಕಠಿಣ ಕ್ರಮ ತೆಗೆದುಕೊಳ್ಳ

ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿನ ನಗರ ಸಭೆಗೆ ಜಿಲ್ಲಾಧಿಕಾರಿ ಜಿ.ಪ್ರಭು ಅವರು ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸ್ವೀಕೃತಿ ಕಡ್ಡಾಯ: ನಗರಸಭೆಯ ಸ್ವೀಕೃತಿ ವಿಭಾಗ, ಕಂದಾಯ ಶಾಖೆ, ಆರೋಗ್ಯ ಶಾಖೆ, ಪರಿಸರ ಶಾಖೆಗಳಿಗೆ ಭೇಟಿ ನೀಡಿ ಕಡತಗಳ ಪರಿಶೀಲನೆ ನಡೆಸಿದ ಜಿ.ಪ್ರಭು ಅವರು ಯಾವುದೇ ಇಲಾಖೆಗಳಲ್ಲಿ ಪೂರ್ಣಪ್ರಮಾಣದಲ್ಲಿ ಸಾರ್ವಜನಿಕರ ಕೆಲಸ ಮಾಡುತ್ತಿಲ್ಲ ಎಂಬುದನ್ನು ಪತ್ತೆ ಹಚ್ಚುವ ಮೂಲಕ ಸಂಬಂಧಪಟ್ಟ ಅಧಿಕಾರಿಗಳ ಕಾರ್ಯವೈಖರಿಯನ್ನು ಮಾಧ್ಯಮದ ಎದುರು ಎಳೆ ಎಳೆಯಾಗಿ ಬಿಚ್ಚಿಟ್ಟರು.

ತ್ಯಾಜ್ಯ ವಿಲೇಗೆ ತಾಕೀತು: ಜಿಲ್ಲಾ ಕೇಂದ್ರವಾದ ಚಿಕ್ಕಬಳ್ಳಾಪುರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳ ಇಕ್ಕೆಲಗಳಲ್ಲಿ ಕಸದ ರಾಶಿ ರಾರಾಜಿಸುತ್ತಿದ್ದರೂ ನಗರಸಭೆ ಆಡಳಿತವಾಗಲಿ ಆಯುಕ್ತರಾಗಲಿ ಗಮನ ಹರಿಸುವಲ್ಲಿ ವಿಫಲವಾಗಿದ್ದಾರೆ.ಐತಿಹಾಸಿಕವಾದ ಜಿಲ್ಲೆಗೆ ಬರುವ ಜನತೆ, ಈಶಾ

ನಗರಸಭೆಯಲ್ಲಿ ಭ್ರಷ್ಟಾಚಾರ

ನಗರಸಭೆಯಲ್ಲಿ ನಡೆಯುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಸಾರ್ವಜನಿಕರಿಂದ ಜಿಲ್ಲಾಧಿಕಾರಿಗಳಿಗೆ ನಿರಂತರವಾಗಿ ಪತ್ರಗಳ ಬಂದ ಹಿನ್ನೆಲೆಯಲ್ಲಿ ದಿಢೀರ್‌ಭೇಟಿ ನೀಡಿದ್ದರು.ಈ ವೇಳೆ ಖಾರವಾಗಿಯೇ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಜಿಲ್ಲಾಧಿಕಾರಿಗಳು ನಗರಸಭೆಯನ್ನು ಜನಸ್ನೇಹಿಯಾಗಿ ಬದಲಾಯಿಸಬೇಕು. ಇಲ್ಲವಾದಲ್ಲಿ ನಿರ್ಧಾಕ್ಷಿಣ್ಯವಾಗಿ ಕ್ರಮವಹಿಸಲಾಗುವುದು. ಸಮಸ್ಯೆಹೊತ್ತು ಬರುವ ಜನರಿಗೆ ಕಷ್ಟಕೊಡದೆ ಅವರಕಷ್ಟ ಪರಿಹಾರ ಮಾಡಬೇಕು.ಭ್ರಷ್ಟಾಚಾರದ ಮನಸ್ಥಿತಿಗೆ ಅಂಕುಶ ಹಾಕಲಾಗುವುದು.ಸೇವೆಯನ್ನು ಪರಮಗುಣವಾಗಿ ಬೆಳೆಸಿಕೊಳ್ಳಿ ಎನ್ನುನ ಸಂದೇಶವನ್ನು ಜಿಲ್ಲಾಧಿಕಾರಿಗಳು ದಿಢೀರ್‌ಭೇಟಿಯ ಮೂಲಕ ರವಾನೆ ಮಾಡಿದರು.

ಕೇಂದ್ರಕ್ಕೆ ಭೇಟಿ ನೀಡುವ ಪ್ರವಾಸಿಗರು ಈ ಕಸದ ದರ್ಶನ ಮಾಡಿಕೊಂಡು ಮುಂದೆ ಸಾಗುವಂತಾಗಿದೆ. ಇದರಿಂದ ಜಿಲ್ಲೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಲು ಹೇಗೆ ಸಾಧ್ಯ.ಮಾಧ್ಯಮಗಳಲ್ಲಿ ಕೂಡ ಈ ಬಗ್ಗೆ ವರದಿಯಾದರೂ ತಲೆಕೆಡಿಸಿಕೊಳ್ಳದಿದ್ದರೆ ಏನು ಮಾಡಬೇಕು. ತಪ್ಪಿತಸ್ಥರ ವಿರುದ್ಧ ಕ್ರಮವಹಿಸಬೇಕಲ್ಲ ಎಂದರು ಆಯುಕ್ತರ ವಿರುದ್ಧ ಗರಂ ಆದರು.

ಕರ್ತವ್ಯ ಲೋಪ ಸಹಿಸಲ್ಲ: ಪರಿಸರ ಅಧಿಕಾರಿ ಉಮಾಶಂಕರ್‌ಅವರ ವಿಭಾಗದಲ್ಲಿ ಕುಳಿತ ಜಿಲ್ಲಾಧಿಕಾರಿ ಗಳು ನೋಡಿ ನಿತ್ಯವೂ ನನಗೆ ಈ ನಗರಸಭೆ ಬಗ್ಗೆ ದೂರುಗಳು ಬರುತ್ತಿವೆ.ದೂರುಗಳನ್ನು ಕೇಳಿಕೊಂಡು ಸುಮ್ಮನಿರಬೇಕಾ? ನಾಗರೀಕರ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇ ಮಾಡಲೇಬೇಕಿದೆ.ಯಾರೂ ಕೂಡ ಕಡತವನ್ನು ಹಾಗೇ ಉಳಿಸಿಕೊಂಡು ಸುಖಾಸುಮ್ಮನೆ ಅವರನ್ನು ಅಲೆಸುವುದನ್ನು ಸಹಿಸುವುದಿಲ್ಲ.30 ದಿನಗಳ ಒಳಗೆ ಕಡತ ವಿಲೇ ಆಗಬೇಕು. ಅಧಿಕಾರಿಗಳು ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಸುಧಾರಣೆ ಮಾಡುವ ವಿಚಾರವಾಗಿದ್ದರೆ ಸುಧಾರಣೆಗೆ ಅವಕಾಶ ನೀಡಲಾಗುವುದು.ಆದರೆ ತೀವ್ರತರವಾದ ಕರ್ತವ್ಯ ಲೋಪವಾಗಿದ್ದರೆ ಯಾವ ಕಾರಣಕ್ಕೂ ಸಹಿಸುವ ಮಾತೇ ಇಲ್ಲ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಈ ನಿಯಮ ಜಿಲ್ಲೆಯ ಎಲ್ಲಾ ನಗರಸಭೆ, ಕಂದಾಯ ಇಲಾಖೆಗೆ ಎಚ್ಚರಿಕೆ ನೀಡಿದರು.

ಬುಗುಡನಹಳ್ಳಿಗೆ ಹರಿದ ಹೇಮಾವತಿ ನೀರು

ತುಮಕೂರು: ನಗರದ ಕುಡಿಯುವ ನೀರಿನ ದಾಹ ನೀಗಿಸುವ ಬುಗಡನಹಳ್ಳಿ ಜಲಸಂಗ್ರಹಾಗಾರಕ್ಕೆ ಹೇಮೆ ನೀರು ತಲುಪಿದೆ.

ಬೇಸಿಗೆ ಹಿನ್ನೆಲೆ ತೀವ್ರ ಕುಡಿಯುವ ನೀರಿನ ಸಮಸ್ಯೆ ಎದುರಾಗಿರುವ ಜಿಲ್ಲಾ ಕೇಂದ್ರಕ್ಕೆ ನೀರು ಪೂರೈಸುವ ಬುಗಡನಹಳ್ಳಿ ಜಲಸಂಗ್ರಹಾಗಾರಕ್ಕೆ ಹೇಮೆ ನೀರು ಹರಿದು ಬಂದಿದ್ದು 7 ದಿನದೊಳಗೆ ತುಂಬಲಿದೆ.

ಹಾಸನ ಜಿಲ್ಲೆ ಗೊರೂರು ಹೇಮಾವತಿ ಜಲಾಶಯದಿಂದ ತುಮಕೂರಿಗೆ ಮೇ 10 ರಂದು ನೀರು ಬಿಡಲಾಗಿದ್ದು ಬುಧವಾರ ಬೆಳಗ್ಗೆ ತುಮಕೂರು ತಲುಪಿದೆ.

ಮೇ 20ರವರೆಗೆ ಹೇಮೆ ನೀರು ಹರಿಸಲಾಗುವುದು. ತುಮಕೂರು ಶಾಖಾ ನಾಲೆಯಲ್ಲಿ 1200 ಕ್ಯುಸೆಕ್ನಷ್ಟು ಪ್ರಮಾಣ ದಲ್ಲಿ ನೀರು ಹರಿದುಬರುತ್ತಿದೆ. ಬುಗಡನ ಹಳ್ಳಿ ಜಲಸಂಗ್ರ ಹಾಗಾರದವರೆಗೆ 124 ಕಿ.ಮೀ., ನಾಲೆ ಉದ್ದವಿದ್ದು ತುಮಕೂರಿಗೆ ನೀರು ತಲುಪಲು 3 ದಿನ ಬೇಕಾಯಿತು.

ಬುಗಡನಹಳ್ಳಿ ಭರ್ತಿಗೆ 7 ದಿನ:

ಹೇಮಾ ವತಿ ಶಾಖಾ ನಾಲೆಯಲ್ಲಿ 1200 ಕ್ಯುಸೆಕ್ನಷ್ಟು ಪ್ರಮಾಣದಲ್ಲಿ ನೀರು



ತುಮಕೂರು ನಗರದ ಕುಡಿಯುವ ನೀರಿನ ದಾಹ ನೀಗಿಸುವ ಬುಗಡನಹಳ್ಳಿ ಜಲಸಂಗ್ರಹಾಗಾರಕ್ಕೆ ಹೇಮೆ ನೀರು ತಲುಪಿದೆ.

ಹರಿದುಬರುತ್ತಿದೆ ಯಾದರೂ ಬುಗಡನಹಳ್ಳಿ ಜಲಸಂಗ್ರ ಹಾಗಾರಕ್ಕೆ 650 ಕ್ಯುಸೆಕ್ ಪ್ರಮಾಣದ ನೀರು ಹರಿಯುತ್ತಿದೆ. ಹಾಗಾಗಿ, ಜಲಸಂಗ್ರಹಾಗಾ ರ ತುಂಬಲು 6-7 ದಿನಗಳು ಬೇಕಿದೆ. ಸದ್ಯ ಜಲಸಂಗ್ರ ಹಾಗಾರದಲ್ಲಿ ಇರುವ ನೀರನ್ನು ಇನ್ನೂ 15 ದಿನಗಳ ವರೆಗೆ ಪೂರೈಸಬಹು ದಾಗಿದೆ.

366 ಎಂಸಿಎಫ್ ಟಿ ಸಾಮರ್ಥ್ಯದ ಬುಗಡನಹಳ್ಳಿ ಜಲಸಂಗ್ರಹಗಾರವನ್ನು ಒಮ್ಮೆ ತುಂಬಿಸಿಕೊಂಡರೆ ಇನ್ನೂ 5 ತಿಂಗಳವರೆಗೆ ತುಮಕೂರು ನಗರವು ನೀರಿನ ಸಮಸ್ಯೆಯಿಂದ ಮುಕ್ತಿ ಹೊಂದಲಿದೆ.

ಹೆಚ್ಚುವರಿ ಯಾಗಿ 192 ಎಂಸಿಎಫ್ ಟಿ ಸಾಮರ್ಥ್ಯದ ಹೆಬ್ಬಾಕ ಕೆರೆಯನ್ನು ತುಂಬಿಸಿಕೊಳ್ಳಬಹುದು.

ಪ್ರತಿನಿತ್ಯ 66-70 ಎಂಎಲ್‌ಡಿ ನೀರಿನ ಅವಶ್ಯ ಕತೆ ಇದ್ದು ಜತೆಗೆ ಕೊಳವೆಬಾವಿಗಳಿಂದ ಪ್ರತಿ ನಿತ್ಯ 16 ಎಂಎಲ್‌ಡಿ ನೀರು ಲಭ್ಯವಿರಲಿದೆ.

ನಗರದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ತಲೆದೋರಿತ್ತು. ಹಾಸನ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಮನವಿ ಮಾಡಿಕೊಂಡ ಹಿನ್ನೆಲೆ ಹೇಮಾವತಿ ಜಲಾಶಯದಿಂದ ಭಾನುವಾರದಿಂದ ತುಮಕೂರು ಬ್ರಾಂಚ್ ಚಾನೆಲ್ ನೀರು ಬಿಡಲಾಗಿದ್ದು ಬುಧವಾರ ಬುಗಡನಹಳ್ಳಿಗೆ ನೀರು ತಲುಪಿದೆ. 5 ತಿಂಗಳು ಇನ್ನು ನೀರಿನ ಸಮಸ್ಯೆ ಇರುವುದಿಲ್ಲ.

ಒಕ್ಕಲಿಗರು ಎಲ್ಲ ರಂಗದಲ್ಲೂ ಮುಂದಿದ್ದಾರೆ: ಸಚಿವ

ಚಿಕ್ಕಬಳ್ಳಾಪುರ: ಒಕ್ಕಲಿಗ ಸಮುದಾಯ ಕೇವಲ ಒಕ್ಕಲುತನ ಮಾಡಿಕೊಂಡು ಇಲ್ಲ. ಇಂದು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿರುವ ಒಕ್ಕಲಿಗರು ಎಲ್ಲಾ ರಂಗಗಳಲ್ಲಿಯೂ ಮುಂದುವರೆದಿದ್ದು ಉದ್ಯಮ ಕ್ಷೇತ್ರದಲ್ಲೂ ಸಹ ತಮ್ಮ ಛಾಪು ಮೂಡಿಸಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್‌ತಿಳಿಸಿದರು.

ನಗರದ ಬಿಬಿ ರಸ್ತೆಯ ಒಕ್ಕಲಿಗರ ಕಲ್ಯಾಣ ಮಂಟಪದ ಆವರಣದಲ್ಲಿ ಒಕ್ಕಲಿಗರ ಸಂಘದ ವತಿಯಿಂದ ಬುಧವಾರ ನಡೆದ ಶ್ರೀ ಕೆಂಪೇಗೌಡ ವಾಣಿಜ್ಯ ಸಂಕೀರ್ಣ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ವಕ್ಕಲಿಗ ಮಹಿಳೆಯರಂತೂ ಉದ್ಯಮ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಸಾಧನೆ ಮಾಡಿರುವುದು ಅಭಿನಂದನೀಯ. ವಕ್ಕಲಿಗರ ವೃತ್ತಿ ಯಾವುದಾದರೂ ಗೌರವಹಿತವಾದ ಬದುಕನ್ನು ಬದುಕಿ ಮಕ್ಕಳನ್ನು ಉತ್ತಮ ವಿದ್ಯಾಭ್ಯಾಸ ನೀಡುತ್ತಾ ಮತ್ತು ಅವರಿಂದ ಸಮಾಜಕ್ಕೆ ಉತ್ತಮ ಸಮಾಜಕ್ಕೆ ಮತ್ತು ಸಮುದಾಯಕ್ಕೆ ಉತ್ತಮ ಕೊಡುಗೆ ನೀಡುತ್ತಿದ್ದಾರೆಂದರು.

ಬಹಳಷ್ಟು ಹಿರಿಯರ ಪರಿಶ್ರಮದಿಂದ ಚಿಕ್ಕಬಳ್ಳಾಪುರ ವಕ್ಕಲಿಗರ ಸಂಘ ಉದ್ಭವವಾಗಿದ್ದು, ಅದರ ಫಲವನ್ನು ಇಂದು ನಾವು ಅನ್ನುತ್ತಿದ್ದೇವೆ. ಇಂತಹ ಕಟ್ಟಡ ಆಗಲು ಕಾರಣವಾಗಿದೆ ಎಂದರು.

ನಗರದ ಬಿಬಿ ರಸ್ತೆಯ ಒಕ್ಕಲಿಗರ ಕಲ್ಯಾಣ ಮಂಟಪದ ಆವರಣದಲ್ಲಿ ಶ್ರೀ ಕೆಂಪೇಗೌಡ ವಾಣಿಜ್ಯ ಸಂಕೀರ್ಣ ವನ್ನು ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ, ಶಾಖಾ ಮಠದ ಕಾರ್ಯದರ್ಶಿ ಮಂಗಳಾನಾಥಸ್ವಾಮೀಜಿ, ಸಂಸದ ಡಾ. ಕೆ.ಸುಧಾಕರ್,ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಡಾ.ರಮೇಶ್. ಯಲುವಹಳ್ಳಿ ಎನ್. ರಮೇಶ್, ಕೋನಪ್ಪರೆಡ್ಡಿ, ಬೀಜನಿಗಮದ ಅಧ್ಯಕ್ಷ ಎಂ. ಆಂಜಿನಪ್ಪ, ಮಾಜಿ ಶಾಸಕ ಕೆ.ಪಿ.ಬಚ್ಚೇಗೌಡ, ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಎನ್.ಕೇಶವರೆಡ್ಡಿ, ಕಾರ್ಯದರ್ಶಿ ಚನ್ನಪ್ಪ ರೆಡ್ಡಿ, ನಿರ್ದೇಶಕರಾದ ಎಂ.ಪ್ರಕಾಶ್, ಚದಲಪುರ ನಾರಾಯಣಸ್ವಾಮಿ, ಬಿ.ಎಂ.ರಾಮಸ್ವಾಮಿ, ಬಿ.ಕೆ.ಮಂಜುನಾಥ್, ಎ.ವಿ.ಬೈರೇಗೌಡ,ಕೆ.ಪಿ.ಶ್ರೀನಿವಾಸಮೂರ್ತಿ,ವಿ.ನಂಜುಂಡಪ್ಪ, ನಾರಾಯಣಸ್ವಾಮಿ, ನಾಗರಾಜ್,ಮುಖಂಡ ಕೆ.ವಿ.ನಾಗರಾಜ್, ಮರಳಕುಂಟೆ ಕೃಷ್ಣಮೂರ್ತಿ,ಎ.ಗಜೇಂದ್ರ ಇದ್ದರು.

ನೊಳಂಬ ಸಂಸ್ಕೃತಿ ಬಗ್ಗೆ ಅಧ್ಯಯನದ ಅಗತ್ಯವಿದೆ

ತುಮಕೂರು: ನೊಳಂಬ ಸಮುದಾಯದ ಚರಿತ್ರೆ ಮತ್ತು ಸಂಸ್ಕೃತಿ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯುವ ಅಗತ್ಯವಿದೆ ಎಂದು ತಿಪಟೂರು ಶಾಸಕ ಕೆ. ಷಡಕ್ಷರಿ ಅಭಿಪ್ರಾಯ ವ್ಯಕ್ತಪಡಿಸಿದರು.

ತುಮಕೂರು ವಿಶ್ವವಿದ್ಯಾನಿಲಯದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಸಭಾಂಗಣದಲ್ಲಿ ತುಮಕೂರು ವಿವಿ ಮತ್ತು ಬೆಂಗಳೂರಿನ ನೊಳಂಬ ಲಿಂಗಾಯತ ಸಂಘದ ಜಂಟಿ ಆಶ್ರಯದಲ್ಲಿ ಏರ್ಪಡಿಸಿದ್ದ ನೊಳಂಬ ಪೀಠದ ಉದ್ಘಾಟನಾ ಕಾರ್ಯಕ್ರಮ, ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ನೊಳಂಬರ ಚರಿತ್ರೆ, ಸಂಸ್ಕೃತಿಯ ಹಾಗೂ ಸಮುದಾಯದ ಇತಿಹಾಸದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳ ಮೂಲಕ ಜನರಿಗೆ ತಲುಪಿಸುವ ಕಾರ್ಯ ಅತ್ಯಗತ್ಯ ಎಂದ ಅವರು, ನೊಳಂಬರ ಇತಿಹಾಸದ ಬಗ್ಗೆ ಇಂದಿನ ಪೀಳಿಗೆಗೆ ಮಾತ್ರವಲ್ಲದೆ ಸ್ವತಃ ಸಮುದಾಯದವರಿಗೂ ಹೆಚ್ಚಿನ ಅರಿವಿಲ್ಲದಿರುವುದು ವಿಷಾದನೀಯ ಸಂಗತಿ ಎಂದರು.

ತುಮಕೂರು ವಿಶ್ವವಿದ್ಯಾನಿಲಯದ ಉತ್ತಮ ಪರಿಸರದಲ್ಲಿ ಇಂತಹ ಅರ್ಥಪೂರ್ಣ ವಿಚಾರಗಳು ಚರ್ಚೆಯಾಗುತ್ತಿರುವುದು ಶ್ಲಾಘನೀಯ ಎಂದು ಹರ್ಷ ವ್ಯಕ್ತಪಡಿಸಿದ ಅವರು, ನೊಳಂಬ ಸಂಸ್ಕೃತಿ ಅಧ್ಯಯನ ಪೀಠಕ್ಕೆ 5 ಲಕ್ಷ ರು. ನೀಡುವುದಾಗಿ ಭರವಸೆ ನೀಡಿದರು.

ಅಧ್ಯಯನ ಪೀಠದ ಪ್ರೇರಣಾ ಲಾಂಛನ ಅನಾವರಣಗೊಳಿಸಿದ ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ,

ತುಮಕೂರು ವಿಶ್ವವಿದ್ಯಾನಿಲಯದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಸಭಾಂಗಣದಲ್ಲಿ ನೊಳಂಬ ಪೀಠದ ಕಾರ್ಯಕ್ರಮವನ್ನು ತಿಪಟೂರು ಶಾಸಕ ಕೆ. ಷಡಕ್ಷರಿ ಅವರು ಉದ್ಘಾಟಿಸಿದರು.

ನಮ್ಮ ಸಂಸ್ಕೃತಿ ಮತ್ತು ಇತಿಹಾಸವನ್ನು ಮರೆತು ಬದುಕುತ್ತಿದ್ದೇವೆ. ಇತಿಹಾಸ ಗೊತ್ತಿಲ್ಲದವನು ವಿಜ್ಞಾನ ಓದಲು ಸಾಧ್ಯವಿಲ್ಲ. ಹಾಗಾಗಿ, ನಮ್ಮ ಮಕ್ಕಳಿಗೆ ನಾವು ಯಾರು ಮತ್ತು ನಮ್ಮ ಇತಿಹಾಸವೇನು ಎಂಬ ಅರಿವು ಮೂಡಿಸುವ ನಿಟ್ಟಿನಲ್ಲಿ ನೊಳಂಬ ಅಧ್ಯಯನ ಪೀಠವು ಮಹತ್ವದ ಪಾತ್ರ ವಹಿಸಲಿದೆ ಎಂದರು.

ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್, ತುಮಕೂರು ವಿವಿ ಕುಲಪತಿ ಪ್ರೊ. ವೆಂಕಟೇಶ್ವರಲು, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಡಿ.ವಿ. ಪರಶಿವಮೂರ್ತಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಕೆ. ಚಂದ್ರಶೇಖರ್,ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಆರ್. ಪಾಟೀಲ್, ತುಮಕೂರು ವಿವಿ ಸಲಹಾ ಸಮಿತಿ ಸದಸ್ಯ ಹಾಗೂ ನಿಕಟಪೂರ್ವ ಸಿಂಡಿಕೇಟ್ ಸದಸ್ಯ ಟಿ.ಎಸ್. ಸುನಿಲ್ ಪ್ರಸಾದ್, ಬೇಲೂರು ಮಾಜಿ ಶಾಸಕ ಲಿಂಗೇಶ್, ವಿವಿಯ ನೊಳಂಬ ಸಂಸ್ಕೃತಿ ಅಧ್ಯಯನ ಪೀಠದ ನಿರ್ದೇಶಕ ಡಾ. ನೀಲಕಂಠ ಎನ್.ಟಿ. ಮತ್ತಿತರರು ಉಪಸ್ಥಿತರಿದ್ದರು.

ಸಮುದಾಯ ಭವನಕ್ಕೆ ಧನ ಸಹಾಯ: ಸಂಸದ ಭರವಸೆ

ಗೌರಿಬಿದನೂರು: ತಾಲೂಕಿನ ಮೈಲಗಾನಹಳ್ಳಿ ಗ್ರಾಮದ ಜಟಲಿಂಗೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ನಿರ್ಮಿಸಲಿರುವ ಸಮುದಾಯ ಭವನಕ್ಕೆ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಧನ ಸಹಾಯ ಮಾಡುವುದಾಗಿ ಸಂಸದ ಡಾ.ಕೆ.ಸುಧಾಕರ್‌ಭರವಸೆ ನೀಡಿದರು.

ತೊಂಡೇಬಾವಿ ಹೋಬಳಿಯ ಮೈಲಗಾನಹಳ್ಳಿಯ ಜಟಲಿಂಗೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಏರ್ಪಡಿಸಿದ್ದ ನರಸಮ್ಮದೇವಿ ಮತ್ತು ಮಹಾಗಣಪತಿ ಪ್ರತಿಷ್ಠಾಪನಾ 18ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿ, ಸುಮಾರು 400 ವರ್ಷಗಳಷ್ಟು ಪುರಾತನವಾದ ದೇವಾಲಯದ ಈ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸಲು ಸಂತೋಷವಾಗುತ್ತಿದೆ. ಇದು ಮಹಿಮಾನ್ವಿತವಾದ ಸ್ಥಳ ಸಹ ಆಗಿದೆ. ಇದು ಮತ್ತಷ್ಟು ಅಭಿವೃದ್ಧಿಯಾಗಿ ಈ ಕ್ಷೇತ್ರದ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವಂತಾ ಗಬೇಕಾಗಿದೆ. ಆದ್ದರಿಂದಲೇ ಇದರ ಅಭಿವೃದ್ಧಿಗೆ ಹೆಗಲೆಣೆ ಯಾಗಿರುತ್ತೇನೆ ಎಂದರು.

ಮರಾಠ ಸಮುದಾಯದ ಜನರು ರಾಜ್ಯದಲ್ಲಿ ಅಲ್ಪಸಂಖ್ಯಾತರಾಗಿದ್ದರೂ ದೇಶಭಕ್ತಿ, ನಿಷ್ಠೆ, ಪ್ರಾಮಾಣಿಕತೆಗಳಲ್ಲಿ ಮೊದಲಿಗರಾಗಿದ್ದಾರೆ. ಈ ಸಮುದಾಯದ ಧ್ರುವತಾರೆ ಶಿವಾಜಿ ಮಹಾರಾಜರು ಧೈರ್ಯ ಸಾಹಸಗಳಿಗೆ ಹೆಸರಾಗಿದ್ದರು. ಸೈನ್ಯದ ಸಂಖ್ಯೆ ಕಡಿಮೆ ಇದ್ದರೂ ಧೈರ್ಯವನ್ನೇ ಸೈನ್ಯವಾಗಿಸಿಕೊಂಡು ಶತ್ರುಗಳ ಎದೆಯಲ್ಲಿ ನಡುಕ ಹುಟ್ಟಿಸುತ್ತಿದ್ದ ಧೀರ ಶಿವಾಜಿ ಎಂದು ಬಣ್ಣಿಸಿದರು.

ಮರಾಠ ಸಮುದಾಯದ ಜತೆ ನಾನು ಇದ್ದೇನೆ. ಈ ಸಮುದಾಯ ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿ ಹೊಂದಲು ಅಗತ್ಯವಾದ ನೆರವು ನೀಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರಾದ ರಮೇಶರಾವ್, ಎಚ್‌ಎಸ್ ಮುರಳಿಧರ, ವೇಣುಮಾದವ, ಮಧುಸೂದನರೆಡ್ಡಿ, ದೇವಾಲಯದ ಟ್ರಸ್ಟ್‌ನ ಜಗನ್ನಾಥರಾವ್ ಶೇಳ್ಕೆ, ಜೈಮುನಿರಾವ್ ಶೇಳ್ಕೆ ಹಾಗೂ ಇನ್ನಿತರರು ಭಾಗವಹಿಸಿದ್ದರು.

ತೊಂಡೇಬಾವಿ ಹೋಬಳಿಯ ಮೈಲಗಾನಹಳ್ಳಿಯ ನರಸಮ್ಮದೇವಿಗೆ ಸಂಸದ ಡಾ.ಕೆ. ಸುಧಾಕರ್ ಅವರು ಪೂಜೆ ಸಲ್ಲಿಸಿದರು.

ಮೇ 20ಕ್ಕೆ ತುಮಕೂರಿಗೆ ಸಿಎಂ ಆಗಮನ: ರಾಜಣ್ಣ

ಮಧುಗಿರಿ: ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ತುಮಕೂರಿನಲ್ಲಿ ಮೇ 20 ರಂದು ಕರ್ನಾಟಕ ಸರಕಾರದ ಮೂರು ವರ್ಷಗಳ ಸಾಧನೆ ಸಂಭ್ರಮದ ರಾಜ್ಯ ಮಟ್ಟದ 'ಬೃಹತ್ ಸಮಾವೇಶದ' ಪೂರ್ವಭಾವಿ ಸಭೆಯಲ್ಲಿ ಮಾಜಿ ಸಚಿವರೂ ಹಾಗೂ ಶಾಸಕ ಕೆ.ಎನ್.ರಾಜಣ್ಣ ಭಾಗವಹಿಸಿ ಸಿಎಂ ಕಾರ್ಯಕ್ರ ಮಕ್ಕೆ ಭಾಗವಹಿಸುವ ಫಲಾನುಭವಿಗಳು ಹಾಗೂ ಸಾರ್ವಜನಿಕರಿಗೆ ಯಾವುದೇ ಅನಾನುಕೂಲ ಆಗದಂತೆ ಎಲ್ಲ ರೀತಿಯ ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳುವಂತೆ ಸಲಹೆ ಸೂಚನೆ ನೀಡಿದರು.

ಹೊಲಿಗೆಯಂತ್ರ ವಿತರಣೆ: ಮಧುಗಿರಿ ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿ ಅವರಣದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಮಹಿಳೆಯರಿಗೆ ಸ್ವಾವಲಂಬಿಯಾಗಿ ಸ್ವಯಂ ಉದ್ಯೋಗ ಕಂಡುಕೊಳ್ಳುವ ಉದ್ದೇಶದಿಂದ ಮಹಿಳಾ ಫಲಾನುಭವಿಗಳಿಗೆ ಉಚಿತವಾಗಿ ಹೊಲಿಗೆಯಂತ್ರ ವಿತರಣೆ ಮಾಡಿದರು. ಗೋಟೂರು ಶಿವಪ್ಪ, ತಹಸೀಲ್ದಾರ್‌ಎಚ್. ಶ್ರೀನಿವಾಸ್ ಇ.ಒ. ಲಕ್ಷ್ಮಣ್ ಬಿ.ಎಸ್, ಎ.ಡಿ. ಧನಂಜಯ್, ಜಿಲ್ಲಾ ವ್ಯವಸ್ಥಾಪಕರಾದ ವಿ.ವೆಂಕಟ ರಾಜು, ತಾಲೂಕು ಸಹಾಯಕ ಅಭಿವೃದ್ಧಿ ಅಧಿಕಾರಿ ಕಲ್ಪನಾ ಬಾಯಿ , ತಾಲ್ಲೂಕು ಕಲ್ಯಾಣಾಧಿಕಾರಿ ಜಯರಾಮ್, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ನಾಗೇಶ್ ಬಾಬು ಉಪಸ್ಥಿತರಿದ್ದರು.

ರೆಕಾರ್ಡ್ಸ್ ರೂಂನ ರವಿಕುಮಾರ್- ಸರ್ವೆ ಯರ್ ಮಂಜುನಾಥ್ ವಿರುದ್ಧ ತನಿಖೆಗೆ ಕರವೇ ಸಮರ ಸೇನೆ ಆಗ್ರಹ

ಮಾಲೂರು: ಕಂದಾಯ ಇಲಾಖೆ ದಾಖಲೆಗಳ ಸುತ್ತ ಅನುಮಾನದ ಹುತ್ತ!

ಕೋಲಾರ: ಮಾಲೂರು ತಾಲೂಕು ಕಂದಾಯ ಮತ್ತು ಸರ್ವೆ ಇಲಾಖೆ ಭ್ರಷ್ಟಾಚಾರ ಮುಗಿಲು ಮುಟ್ಟಿದ್ದು ನಕಲಿ ದಾಖಲೆಗಳ ಸಾಮ್ರಾಜ್ಯವೇ ಹರಿದಾಡುತ್ತಿದ್ದರೂ ಜಿಲ್ಲಾಡಳಿತ ಮೌನಕ್ಕೆ ಶರಣಾಗುವ ಮೂಲಕ ಅಕ್ರಮಕ್ಕೆ ಕುಮ್ಮಕ್ಕು ನೀಡುತ್ತಿದೆ. ಬೆಂಗಳೂರಿಗೆ ಸಮೀಪದಲ್ಲಿರುವುದು, ಕಾರಿಡಾರ್ ರಸ್ತೆ ನಿರ್ಮಾಣ, ಇಂಡಸ್ಟ್ರಿಯಲ್ ಎಸ್ಟೇಟ್ ಸ್ಥಾಪನೆ ಹಾಗೂ ರಿಯಲ್ ಎಸ್ಟೇಟ್ ಉದ್ಯಮವಾಗಿರುವ ಕಾರಣಕ್ಕಾಗಿ ಮಾಲೂರು ತಾಲೂಕಿನಲ್ಲಿ ಭೂಮಿಗೆ ಚಿನ್ನದ ಬೆಲೆ ಬಂದಿದ್ದು ಹೀಗಾಗಿ ಬಹುತೇಕರು ಅಕ್ರಮ ದಾಖಲೆಗಳ ಸೃಷ್ಟಿ ಮೂಲಕ ಭೂಮಿ ದಕ್ಕಿಸಿಕೊಳ್ಳಲು ಮುಂದಾಗಿರುವುದು ವಾಸ್ತವ.

ರಾಮನಗರದಲ್ಲಿದ್ದಾಗ ಬಿಡದಿ ಹೋಬಳಿಯ ಹೆಗ್ಗಡಗೆರೆ ಗ್ರಾಮದ ಸರಕಾರಿ ಗೋಮಾಳಕ್ಕೆ ನಕಲಿ ಸ್ಕೆಚ್ ತಯಾರಿಸಿ ಸಿಕ್ಕಿ ಹಾಕಿಕೊಂಡು ಸೇವೆಯಿಂದಲೇ ವಜಾ ಆಗಿ ಕೋರ್ಟ್ ಮೂಲಕ ಬಂದಿರುವ ಎಂ.ಪಿ.ರವಿಕುಮಾರ್‌ಮಾಲೂರು ಸರ್ವೆ ಸೂಪರ್ವೈಸರ್‌ಹಾಗೂ ರೆಕಾರ್ಡ್‌ರೂಂ ಚಾರ್ಜ್ ಆಗಿ ಎರಡು ಕಡೆ ಅಧಿಕಾರ ನಡೆಸುತ್ತಿದ್ದಾರೆ.

8 ವರ್ಷದಿಂದ ಮಾಲೂರಿನಲ್ಲಿ ತಳ ಊರಿರುವ



ರವಿಕುಮಾರ್‌ಮತ್ತು ಮಂಜುನಾಥ್ ವಿರುದ್ಧ ಕರವೇ ಸಮರ ಸೇನೆಯಿಂದ ಹಿರಿಯ ಅಧಿಕಾರಿಗಳಿಗೆ ದೂರು ನೀಡಲಾಗಿದೆ.

ಸರ್ವೆಯರ್‌ಮಂಜುನಾಥ್ ಜತೆ ಸೇರಿಕೊಂಡು ರವಿಕುಮಾರ್‌ನಕಲಿ ಕಡತಗಳನ್ನು ಸೃಷ್ಠಿ ಮಾಡುತ್ತಿದ್ದಾರೆಂಬ ಆರೋಪವಿದೆ. ಇದಕ್ಕೆ ಪುಷ್ಠಿ ನೀಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಕೃಷ್ಣ ಮತ್ತು ಸರ್ವೆಯರ್‌ಅಶೋಕ್ ಅವರು ತಮ್ಮ ಸಹಿ ಪೋರ್ಜರಿ ಮಾಡಿ ನಕ್ಷೆ ತಯಾರಿಸಲಾಗಿದೆ ಎಂದು ಪ್ರತ್ಯೇಕ ದೂರು ನೀಡಿದ್ದರೂ ಮಾಲೂರು ಪೊಲೀಸರು ಎನ್‌ಸಿಆರ್‌ಕೊಟ್ಟು ವಾಪಸ್ ಕಳಿಸಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಪೋರ್ಜರಿ ದಾಖಲೆ ಪ್ರಕರಣಗಳಲ್ಲಿ

ಎಫ್‌ಐಆರ್‌ಹಾಕುವ ಪೊಲೀಸರು ರವಿಕುಮಾರ್ ಮತ್ತು ಮಂಜುನಾಥ್ ಬಗ್ಗೆ ಮಮಕಾರ ತೋರಿಸಿರುವ ರಹಸ್ಯವಾದರೂ ಏನೆಂಬುದು ಅರ್ಥವಾಗುತ್ತಿಲ್ಲವಾದರೂ ಇಬ್ಬರನ್ನು ರಕ್ಷಿಸಲು ಕಾಣದ ಕೈಗಳು ಕೆಲಸ ಮಾಡುತ್ತಿವೆ ಎಂಬುದು ವೇದ್ಯವಾಗುತ್ತದೆ.

ರವಿಕುಮಾರ್ ಕೆಲಸಕ್ಕೆ ಸರಿಯಾಗಿ ಬಾರದೆ ತೊಂದರೆ ಆಗಿದೆ ಎಂದು ಸಾರ್ವಜನಿರು ಖಾಲಿಯಾಗಿರುವ ಸೀಟ್ ಫೋಟೋವನ್ನು ಜಿಪಿಎಸ್ ಸಮೇತ ಹಿರಿಯ ಅಧಿಕಾರಿಗಳಿಗೆ ಕಳುಹಿಸಿ ದೂರು ಕೊಟ್ಟ ನಂತರ ಎಚ್ಚೆತ್ತ ಹಾಗೆ ಮಾಡಿದ ಅಧಿಕಾರಿಗಳು ನೋಟಿಸ್ ನೀಡಿದ್ದರೂ ಕೇರ್‌ಮಾಡದೆ ಹಳೇ ಚಾಳಿ ಮುಂದುವರೆದಿದೆ. ಕಚೇರಿ ಸಿಸಿ ಟಿವಿ ಪರಿಶೀಲಿಸಿದರೆ ಇದೆಲ್ಲವೂ ಬಯಲಾಗುತ್ತದೆ ಎಂದು ಜನತೆ ಹೇಳುತ್ತಾರೆ. ಸರ್ವೆಯರ್ ಮಂಜುನಾಥ್ ಸಹಾ ಕೆಲಸಕ್ಕೆ ಬಂದರೆ ರ್ತಾರೆ ಇಲ್ಲವಾದರೆ ದಿನಗಟ್ಟಲೆ ಅಧಿಕಾರಿ ನೋಡಲು ಕಾಯಬೇಕು ಎಂಬುದು ಸಾರ್ವಜನಿಕರ ಅಳಲಾಗಿದೆ.

ಮಾಲೂರು ಸರಕಾರಿ ಕಚೇರಿಗಳಲ್ಲಿ ಅಕ್ರಮ ತಾಂಡವಾಡುತ್ತಿದ್ದು ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಮಾಜಿ ಶಾಸಕ ಕೆ.ಎಸ್. ಮಂಜುನಾಥಗೌಡರು ಮೈಕ್ ಹಿಡಿದರೂ ಪ್ರಯೋಜನವಾಗಿಲ್ಲ. ಈ ಸಂಬಂಧ ಡಿಡಿಎಲ್ ಆರ್‌ಗೆ ದೂರು ನೀಡಿರುವ ಕರವೇ ಸಮರಸೇನೆ ರಾಜ್ಯಾಧ್ಯಕ್ಷ ಸೋಮಶೇಖರ್ ಅವರು ರವಿಕುಮಾರ್ ಮತ್ತು ಮಂಜುನಾಥ್ ಅವರ ವಿರುದ್ಧ ಇಲಾಖಾ ತನಿಖೆ ನಡೆಸಬೇಕೆಂದು ದೂರು ಸಲ್ಲಿಸಿದ್ದು ಜತೆಗೆ ತೊರ್ನಹಳ್ಳಿ ಜಂಟಿ ನಕ್ಷೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ಮಾಲೂರು ತಾಲೂಕಿನ ನಕಲಿ ದಾಖಲೆಗಳ ಸೃಷ್ಠಿ ಹಿಂದೆ ಸರ್ವೆ ರೆಕಾರ್ಡ್ ರೂಂ ಸೂಪರ್ವೈಸರ್ ಆಗಿರುವ ಎಂ.ಪಿ.ರವಿಕುಮಾರ್‌ಹಾಗೂ ಸರ್ವೆಯರ್‌ಮಂಜುನಾಥ್ ಹೆಸರು ಕೇಳಿ ಬಂದಿದ್ದು ಇಬ್ಬರ ವಿರುದ್ಧ ತನಿಖೆ ನಡೆಸಬೇಕು. ಅಲ್ಲಿಯವರೆಗೂ ಮಾಲೂರಿನಿಂದ ಎತ್ತಂಗಡಿ ಮಾಡಿ ಅಕ್ರಮಕ್ಕೆ ಬ್ರೇಕ್ ಹಾಕಬೇಕು. ತಪ್ಪಿದರೆ ಮಾಲೂರು ತಾಲೂಕು ಕಚೇರಿ ಮತ್ತು ಕೋಲಾರ ಡಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುತ್ತದೆ.

- ಸೋಮಶೇಖರ್,ರಾಜ್ಯಾಧ್ಯಕ್ಷ, ಕರವೇ ಸಮರಸೇನೆ

ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸುಪ್ರೀಂ ಮುಂದೆ ದರ್ಶನ್

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್, ವಿಚಾರಣೆ ವಿಳಂಬವನ್ನು ಕಾರಣವಾಗಿಟ್ಟುಕೊಂಡು ಜಾಮೀನು ಕೋರಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಬೆಂಗಳೂರು ಪೊಲೀಸರು ಅಫಿಡವಿಟ್ ಸಲ್ಲಿಸಿದ್ದು, ಅರ್ಜಿಯ ವಿಚಾರಣೆ ಶುಕ್ರವಾರ ನಡೆಯಲಿದೆ.

ಸೊಂಪಾದ ಪುಟಗಳು

ಸ್ಪರ್ಧೆ ಮುಗಿದ ಮೇಲೆ ನಮಗೆ ಅಲ್ಲೊಬ್ಬ ಸಿಗುತ್ತಾನೆ
ಶಿಶಿರಕಾಲ
ಶಿಶಿರ್ ಹೆಗಡೆ 6

ಕನ್ನಡ ಓದುಗರ ಅಭಿರುಚಿ ಮತ್ತು ಗ್ರಂಥಾಲಯ ಖರೀದಿ
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಎಲ್ಲವೂ ನಮ್ಮ ಮನಸ್ಸಿನ ಪ್ರತಿಬಿಂಬವಾಗಿರುವುದರಿಂದ, ನಮ್ಮ ಮನಸ್ಸಿನಿಂದ ಎಲ್ಲವನ್ನೂ ಬದಲಾಯಿಸಬಹುದು. ಮನಸ್ಸಿನ ನಿಯಂತ್ರಣ ಮತ್ತು ಇಚ್ಛಾಶಕ್ತಿಗಿಂತ ಮಿಗಿಲಾದುದು ಯಾವುದೂ ಇಲ್ಲ.

ವಕ್ರತುಂಡೋಕ್ತಿ

ನಾನು ಹೇಳೋದನ್ನ ಸ್ವಲ್ಪ 'ಕಿವಿಕೊಟ್ಟು ಕೇಳಿ' ಅಂತ ಹೆಂಡತಿ ಹೇಳಿದರೆ, ಅವಳಿಗೆ 'ಹಿಯರಿಂಗ್ ಏಡ್' ತಂದುಕೊಡಬಹುದು.

ಉ.ಪ್ರದಲ್ಲಿ ಭಾರಿ ಮಳೆಗೆ 100 ಸಾವು

ಲಕ್ನೋ: ಉತ್ತರ ಪ್ರದೇಶದಾದ್ಯಂತ ಭಾರೀ ಮಳೆ ಮತ್ತು ಬಿರುಗಾಳಿಗೆ 100ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಪ್ರಯಾಗ್‌ರಾಜ್‌ನಲ್ಲೇ ಅತ್ಯಧಿಕ 21 ಜನ ಬಲಿಯಾಗಿದ್ದಾರೆ. ಮಳೆ ವಿಕೋಪದಲ್ಲಿ 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

3ನೇ ಹಂತದ ಮತದಾರರ ಪಟ್ಟಿ ಪರಿಷ್ಕರಣೆಗೆ ಚು.ಆಯೋಗ ಚಾಲನೆ
ರಾಜ್ಯದಲ್ಲಿ ಜೂನ್ 30ಕ್ಕೆ ಆರಂಭ, ಅ.7ಕ್ಕೆ ಅಂತಿಮ ಮತಪಟ್ಟಿ ಪ್ರಕಟ

ರಾಜ್ಯದಲ್ಲೂ SIR

ಕರ್ನಾಟಕವೂ ಸೇರಿ 16 ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ಶುರು

ದೆಹಲಿ: ಕರ್ನಾಟಕ ಸೇರಿದಂತೆ 16 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ಮೂರನೇ ಹಂತವನ್ನು ಕೇಂದ್ರ ಚುನಾವಣಾ ಆಯೋಗ ಗುರುವಾರ ಪ್ರಕಟಿಸಿದೆ. ಕರ್ನಾಟಕದಲ್ಲಿ ಜೂನ್ 30ರಿಂದ ಮತದಾರರ ಪಟ್ಟಿ ಪರಿಷ್ಕರಣೆ ಆರಂಭವಾಗಲಿದ್ದು, ಅಕ್ಟೋಬರ್ ಅಂತ್ಯಕ್ಕೆ ಮತದಾರರ ಅಂತಿಮ ಕರಡು ಸಿದ್ಧವಾಗಲಿದೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಮೂರನೇ ಹಂತವು ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೊರತುಪಡಿಸಿ ಪರಿಷ್ಕರಣೆ ಬಾಕಿ ಇರುವ ದೇಶದ ಎಲ್ಲ ರಾಜ್ಯಗಳಲ್ಲಿ ನಡೆಯಲಿದೆ.

ಕರ್ನಾಟಕ, ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಹರಿಯಾಣ, ಜಾರ್ಖಂಡ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರ, ತೆಲಂಗಾಣ ಮತ್ತು ಉತ್ತರಾಖಂಡಗಳಲ್ಲಿ ಎಸ್ ಐಆರ್ ನಡೆಯಲಿದೆ. ಈ ರಾಜ್ಯಗಳ ಜತೆ ದಾದ್ರಾ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ದಿಯು, ಚಂಡೀಗಢ ಮತ್ತು ರಾಷ್ಟ್ರ ರಾಜಧಾನಿ ದೆಹಲಿ ಸೇರಿದಂತೆ ನಾಲ್ಕು ಕೇಂದ್ರಾಡಳಿತ ಪ್ರದೇಶಗಳಲ್ಲೂ ಮತಪಟ್ಟಿ ಪರಿಷ್ಕರಣೆ ಕಾರ್ಯ ನಡೆಯಲಿದೆ. ಈ ಹಂತದಲ್ಲಿ, 3.94 ಲಕ್ಷ ಬೂತ್ ಮಟ್ಟದ ಅಧಿಕಾರಿಗಳು 36.73 ಕೋಟಿ ಮತದಾರರ ಮನೆಗೆ ಭೇಟಿ ನೀಡಲಿದ್ದಾರೆ. ರಾಜಕೀಯ ಪಕ್ಷಗಳು ನೇಮಿಸಿದ 3.42 ಲಕ್ಷ ಬೂತ್ ಮಟ್ಟದ ಏಜೆಂಟ್‌ಗಳು ಈ ಪ್ರಕ್ರಿಯೆಯಲ್ಲಿ ನೆರವಾಗಲಿದ್ದಾರೆ.

ಮೂರನೇ ಹಂತದ ಪ್ರಕ್ರಿಯೆ ಕುರಿತು ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಮತದಾರರು ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮನವಿ ಮಾಡಿದ್ದಾರೆ. ಅರ್ಹ ನಾಗರಿಕರು ಮಾತ್ರ ಪಟ್ಟಿಯಲ್ಲಿ ಉಳಿಯುವಂತೆ ನೋಡಿಕೊಳ್ಳುವ ಮೂಲಕ ನಿಖರವಾದ ಮತದಾರರ ಪಟ್ಟಿಯನ್ನು ನಿರ್ವಹಿಸುವುದು ಮತ್ತು ಅನರ್ಹ ನಮೂದುಗಳನ್ನು ತಡೆಯುವುದು ಈ ಪ್ರಕ್ರಿಯೆಯ ಉದ್ದೇಶವಾಗಿದೆ ಎಂದು ಅವರು ಹೇಳಿದ್ದಾರೆ.

ಈ ಅವಧಿಯಲ್ಲಿ ತೀವ್ರ ಹಿಮಪಾತ ಮತ್ತು ಪ್ರತಿಕೂಲ ಹವಾಮಾನ ಇರುವ ಹಿನ್ನೆಲೆಯಲ್ಲಿ ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಮುಂದೂಡಲು ಆಯೋಗ ನಿರ್ಧರಿಸಿದೆ. ಈ ಪ್ರದೇಶಗಳಿಗೆ ಪ್ರತ್ಯೇಕ ವೇಳಾಪಟ್ಟಿಯನ್ನು ಘೋಷಿಸಲಾಗುವುದು ಎಂದು ಆಯೋಗ ತಿಳಿಸಿದೆ. → 4

ಕರ್ನಾಟಕದಲ್ಲಿ ಯಾವಾಗ?



ತರಬೇತಿ, ಸಿದ್ಧತೆ	ಮೇ 20 – ಮೇ 29
ಮನೆ-ಮನೆ ಭೇಟಿ	ಜೂನ್ 30 – ಜುಲೈ 29
ಕರಡು ಮತದಾರರ ಪಟ್ಟಿ ಪ್ರಕಟಣೆ	ಆಗಸ್ಟ್ 5
ಆಕ್ಷೇಪಣೆ-ತಿದ್ದುಪಡಿ	ಆಗಸ್ಟ್ 5 – ಸೆಪ್ಟೆಂಬರ್ 4

7 ಅಕ್ಟೋಬರ್ ಅಂತಿಮ ಪಟ್ಟಿ ಬಿಡುಗಡೆ

ಒಟ್ಟು ಮತದಾರರು **5,55,74,064**

ಬೂತ್ ಮಟ್ಟದ ಅಧಿಕಾರಿಗಳು **59,050**

ಎಲ್ಲೆಲ್ಲಿ ಎಸ್‌ಐಆರ್?

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಹರಿಯಾಣ, ಪಂಜಾಬ್, ಒಡಿಶಾ, ಜಾರ್ಖಂಡ್, ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಉತ್ತರಾಖಂಡ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಚಂಡೀಗಢ, ದಾದ್ರಾ ಮತ್ತು ನಗರಹವೇಲಿ ಹಾಗೂ ದಮನ್ ಮತ್ತು ದಿಯು.

ಮೇ to ಸೆಪ್ಟೆಂಬರ್

ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು 2026ರ ಮೇ ಮತ್ತು ಸೆಪ್ಟೆಂಬರ್ ನಡುವೆ ನಡೆಯಲಿದೆ. ಒಡಿಶಾ, ಮಿಜೋರಾಂ, ಸಿಕ್ಕಿಂ ಮತ್ತು ಮಣಿಪುರದಲ್ಲಿ ಮೇ 30 ರಿಂದ ಜೂನ್ 28 ರವರೆಗೆ ಮನೆ-ಮನೆಗೆ ಪರಿಶೀಲನಾ ಅಭಿಯಾನವನ್ನು ನಡೆಯಲಿದೆ. ಇದರಲ್ಲಿ ಮನೆ-ಮನೆಗೆ ಪರಿಶೀಲನೆ, ಮತಗಟ್ಟೆಗಳ ಮರುಸಂಘಟನೆ, ಕರಡು ಮತದಾರರ ಪಟ್ಟಿಯ ಪ್ರಕಟಣೆಗಳು ಸೇರಿವೆ.

11 ದಿನಗಳ ಅನಿಶ್ಚಿತತೆ ಅಂತ್ಯ
ವೇಣುಗೆ ಎಐಸಿಸಿ ಅಧ್ಯಕ್ಷತೆ?

ವಿ.ಡಿ.ಸತೀಶನ್ ಕೇರಳದ ಸಿಎಂ



ತಿರುವನಂತಪುರ: ಕೇರಳದ ನೂತನ ಮುಖ್ಯಮಂತ್ರಿಯಾಗಿ ವಿ.ಡಿ.ಸತೀಶನ್ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಅಧಿಕೃತವಾಗಿ ಘೋಷಣೆ ಮಾಡಿದೆ. ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಯವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಕೆ.ಸಿ. ವೇಣುಗೋಪಾಲ್ ಅವರ ಹೆಸರು ಸಿಎಂ ಸ್ಥಾನಕ್ಕೆ ಕೇಳಿಬಂದಿತ್ತು. ಅಂತಿಮವಾಗಿ ಈ ಹಿಂದಿನ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿ ಕೆಲಸ ಮಾಡಿದ್ದ ವಿ.ಡಿ.ಸತೀಶನ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಒಲಿದು ಬಂದಿದೆ. ಈ ಮಧ್ಯೆ ವೇಣುಗೋಪಾಲ್ ಅವರಿಗೆ ಪಕ್ಷದ ರಾಷ್ಟ್ರಾಧ್ಯಕ್ಷ ಸ್ಥಾನ ನೀಡುವ ಬಗ್ಗೆ ಚರ್ಚೆ ನಡೆದಿದೆ ಎನ್ನಲಾಗಿದೆ. ಅಂತಿಮ ಹಂತದವರೆಗೂ ಕೆ.ಸಿ. ವೇಣುಗೋಪಾಲ್ ಮತ್ತು ಇನ್ನೊಬ್ಬ ಪ್ರಭಾವಿ ನಾಯಕ ಚೆನ್ನಿತ್ತಲ ಅವರ ಹೆಸರು ಕೇಳಿಬಂದಿತ್ತು. ಪಕ್ಷದ ಬಹುಸಂಖ್ಯಾತ ಶಾಸಕರು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಅವರಿಗೆ ಬೆಂಬಲ ಸೂಚಿಸಿದ್ದರು. ಆದರೆ ವಿ.ಡಿ. ಸತೀಶನ್ ಕೇರಳದ ಜನಪ್ರಿಯ ನಾಯಕರಾಗಿದ್ದು, ಸ್ಥಳೀಯವಾಗಿ ಪ್ರಭಾವಿ ನಾಯಕರಾಗಿದ್ದಾರೆ. ಮಿತ್ರ ಪಕ್ಷ ಮುಸ್ಲಿಂಲೀಗ್ ಕೂಡ ಸತೀಶನ್ ಉಮೇದುವಾರಿಕೆಗೆ ಬೆಂಬಲ ಘೋಷಿಸಿತ್ತು. 11 ದಿನಗಳ ಅನಿಶ್ಚಿತತೆಯ ನಂತರ, ಹೈಕಮಾಂಡ್ ಈ ಚರ್ಚೆಗಳಿಗೆ ಅಂತ್ಯ ಹಾಡಿದೆ.

ಕೇಸರಿ ಶಾಲಿಗೆ ಅವಕಾಶವಿಲ್ಲ: ಸಿಎಂ
ಅಲ್ಪಸಂಖ್ಯಾತರ ಓಲೈಕೆ: ಬಿಜೆಪಿ ಕಿಡಿ

ರಾಜ್ಯದಲ್ಲಿ ಮತ್ತೆ ಧರ್ಮ ದಂಗಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

2026-27ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭಕ್ಕೆ ಕೇವಲ ಎರಡು ವಾರಗಳ ಮೊದಲು ಶಾಲಾ-ಕಾಲೇಜುಗಳಲ್ಲಿ ಹಿಜಾಬ್, ಕೇಸರಿ ಶಾಲು ಸೇರಿ ಧಾರ್ಮಿಕ ಸಂಕೇತದ ಧಿರಿಸಿನ ಮೇಲೆ ಹೇರಿದ್ದ ನಿರ್ಬಂಧವನ್ನು ರಾಜ್ಯ ಸರಕಾರ ತೆರವು ಮಾಡಿರುವುದು ರಾಜ್ಯದಲ್ಲಿ ಮತ್ತೊಂದು ಧರ್ಮದಂಗಲ್ ಸೃಷ್ಟಿಸುವುದು ಬಹುತೇಕ ನಿಶ್ಚಿತ ಎನಿಸಿದೆ.

- ಶಾಲಾ ಕಾಲೇಜುಗಳ ಆರಂಭದಲ್ಲಿಯೇ ಹೊಸ ಸಂಘರ್ಷ ಸಾಧ್ಯತೆ
- ರಾಜ್ಯವ್ಯಾಪಿ ಪ್ರತಿಭಟನೆ, ಕಾನೂನು ಕ್ರಮಕ್ಕೆ ಬಿಜೆಪಿ ಸಿದ್ಧತೆ

ಗುರುವಾರ ಶಿಕ್ಷಣ ಇಲಾಖೆ ಹೊರಡಿಸಿದ್ದ ಆದೇಶದಲ್ಲಿ ಹಿಜಾಬ್ ಸೇರಿದಂತೆ ಸಾಂಪ್ರದಾಯಿಕ ಹಾಗೂ ಪದ್ಧತಿ ಆಧಾರಿತವಾದ ಸಂಕೇತವಾಗಿ ವಿದ್ಯಾರ್ಥಿಗಳು ಧರಿಸುವ ಪೇಟ, ಜನಿವಾರ, ದಾರ, ಶಿವದಾರ, ರುದ್ರಾಕ್ಷಿ ಸೇರಿದಂತೆ ಯಾವುದೇ ಸಮಾನ ಸ್ವರೂಪದ ಸಾಂಪ್ರದಾಯಿಕ ಹಾಗೂ ಪದ್ಧತಿ ಆಧಾರಿತವಾದ ಸಂಕೇತಗಳನ್ನು ಧರಿಸಲು ಅವಕಾಶ ನೀಡಿ ಆದೇಶ ಹೊರಡಿಸಿತ್ತು. ಆದರೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಕೇಸರಿ ಶಾಲು ಧರಿಸಲು ಅವಕಾಶವಿಲ್ಲ' ಎಂದು ಹೇಳಿಕೆ ನೀಡಿರುವುದು ಇದೀಗ ಹಿಂದು ಸಂಘಟನೆ ಹಾಗೂ ಬಿಜೆಪಿ ನಾಯಕರ ಆಕ್ರೋಶಕ್ಕೆ ಕಾರಣವಾಗಿದೆ. ಮುಸ್ಲಿಮರನ್ನು ಒಲೈಸಲು ಸರಕಾರ ಈ ತೀರ್ಮಾನವನ್ನು ಕೈಗೊಂಡಿದೆ. ಸದ್ಯ ಈ ಪ್ರಕರಣ ಸುಪ್ರೀಂ ಕೋರ್ಟ್ ಮುಂದಿದ್ದರೂ, ಆದೇಶವನ್ನು ಹಿಂಪಡೆದಿರುವುದು ಖಂಡನೀಯ. → 4

> **ಒಂದೆರಡು ಕಡೆಗಳಲ್ಲಿ ಜನಿವಾರ ತೆಗೆಸಿದಾಗ, ಉಡುಪಿಯ ಒಂದೆರಡು ಶಾಲೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಾಗ ಇಡೀ ಕರ್ನಾಟಕಕ್ಕೆ ಕೋಮುದ್ವೇಷದ ಬೆಂಕಿ ಹಚ್ಚಲು ಹೊರಟ ಈ ಬಿಜೆಪಿ ನಾಯಕರಿಗೆ ನೀಟ್ ಪರೀಕ್ಷೆಯ ರದ್ದತಿಯಿಂದ ರೋದಿಸುತ್ತಿರುವ ವಿದ್ಯಾರ್ಥಿಗಳ ಕಣ್ಣೀರು ಕಾಣಿಸುತ್ತಿಲ್ಲವೇ?**
>
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಶ್ರೀ ಎನ್.ಎ. ಹ್ಯಾರಿಸ್
ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ
ಮತ್ತು ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಸ್ಕಂದಗಿರಿ
ಅಪಾರ್ಟ್‌ಮೆಂಟ್‌ಗಳು

15ನೇ ಮೇ, 2026 ರಿಂದ ಬುಕಿಂಗ್ ಪ್ರಾರಂಭ

ಪ್ರೀಮಿಯಂ ಮನೆಗಳು
ಬೆಲೆಕಟ್ಟಲಾಗದ ನೆನಪುಗಳು

3 BHK	1 BHK
ಬಿಲ್ಟ್ ಅಪ್ ಏರಿಯಾ 1,444 sqft	ಬಿಲ್ಟ್ ಅಪ್ ಏರಿಯಾ 635 sqft
ಆರಂಭಿಕ ಬೆಲೆ ₹ 1.44 ಕೋಟಿ	ಆರಂಭಿಕ ಬೆಲೆ ₹ 51 ಲಕ್ಷ

ಹಂತ - 1, ಕೋನದಾಸಪುರ
[ವೈಟ್ ಫೀಲ್ಡ್], ಬೆಂಗಳೂರು

ಸ್ಥಳಕ್ಕಾಗಿ QR ಕೋಡ್ ಸ್ಕ್ಯಾನ್ ಮಾಡಿ

https://flats.bdakarnataka.in 94831 66622

ಹಿಜಾಬ್ V/s ಕೇಸರಿ ಶಾಲು ವಸ್ತ್ರ ಯುದ್ಧ

ಕಾಂಗ್ರೆಸ್‌ನ ಮತೀಯ ಓಲೈಕೆ, ತುಷ್ಟೀಕರಣದ ಪರಕಾಷ್ಠೆ | ಅಹಿತಕರ ಘಟನೆಗಳಿಗೆ ಕೈ ಕಾರಣ: ಬಿಜೆಪಿ ಕಿಡಿ

ಸರಕಾರದ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲು ಹಲವು ಹಿಂದೂಪರ ಸಂಘಟನೆಗಳು ಸಿದ್ಧತೆ

ಬೆಂಗಳೂರು: ಶಾಲಾ ಹಾಗೂ ಕಾಲೇಜುಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡಿ, ಕೇಸರಿ ಧರಿಸಲು ನಿರ್ಬಂಧಿಸಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಆಕ್ರೋಶ ವ್ಯಕ್ತಪಡಿಸಿವೆ. ಸರಕಾರದ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲು ಹಿಂದೂಪರ ಸಂಘಟನೆಗಳು ಮುಂದಾಗಿವೆ. ಮಕ್ಕಳ ಶಿಕ್ಷಣಕ್ಕಿಂತ ವಸ್ತ್ರ ಯುದ್ಧವೇ ಅತಿಯಾಗಿ ಶೈಕಣಿಕ ವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂಬ ಆಕ್ರೋಶವೂ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಅಲ್ಪಸಂಖ್ಯಾತರ ಓಲೈಕೆ ಹಾಗೂ ತುಷ್ಟೀಕರಣಕ್ಕಾಗಿ ಒಂದು ಸಮುದಾಯ ಓಲೈಸಿಕೊಂಡು ಹಿಂದೂ ಸಮಾಜದ ಹೆಮ್ಮೆಯ ಕೇಸರಿ ಶಾಲು ಧರಿಸಲು ಅವಕಾಶ ನೀಡದಿರುವ ಕಾಂಗ್ರೆಸ್‌ಗೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಾಗುವುದು ಎಂದು ಬಿಜೆಪಿ ನಾಯಕರು ಎಚ್ಚರಿಕೆ ನೀಡಿದ್ದು, ಮತೀಯ ಶಕ್ತಿಗಳ ಓಲೈಕೆ ಹಾಗೂ ತುಷ್ಟೀಕರಣಕ್ಕೆ ತಕ್ಕ ಶಿಕ್ಷೆ ಆಗಲಿದೆ ಎಂದು ಸಿಡಿದೆದ್ದಿದೆ.

ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲೇ ಇರುವಾಗ ಕಾಂಗ್ರೆಸ್ ಸರಕಾರ ಏಕಾಏಕಿ ತೀರ್ಮಾನ ತೆಗೆದುಕೊಂಡ ಔಚಿತ್ಯ ಪ್ರಶ್ನಿಸಿರುವ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ, ಮಾಜಿ ಸಚಿವ ಸಿ.ಟಿ.ರವಿ, ವಿ. ಸುನೀಲ್ ಕುಮಾರ್ ಸೇರಿದಂತೆ ಹಲವರು ಸರಕಾರದ ವಿರುದ್ಧ ತಿರುಗಿಬಿದ್ದಿದ್ದಾರೆ. ಇದಕ್ಕೆ ಪೂರಕವಾಗಿ ದಾವಣಗೆರೆ ಉಪ ಚುನಾವಣೆಯ ಫಲಿತಾಂಶ ಹೊರಬಂದ ನಂತರ ಕಾಂಗ್ರೆಸ್ ಪಕ್ಷಕ್ಕೆ ದಿಢೀರ್ ಜ್ಞಾನೋದಯವಾಗಿ ವಿವಾದಿತ ಹಿಜಾಬ್ ವಿಷಯ ಮತ್ತೆ ಮುನ್ನೆಲೆಗೆ ತಂದಿದೆ ಎಂದು ಜೆಡಿಎಸ್ ಕುಟುಕಿದೆ.

ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರಕಾರದ ಅತಿಯಾದ ಓಲೈಕೆ ರಾಜಕಾರಣ ಮಾಡಿ ಯಾವ ದುಃಸ್ಥಿತಿಗೆ ಬಂದಿದೆಯೋ ಅದೇ ರೀತಿ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಗತಿ ಕಾದಿದೆ. ಕರ್ನಾಟಕದಲ್ಲಿ ತುಷ್ಟೀಕರಣದ ಪರಾಕಾಷ್ಠೆ ತಲುಪಿರುವ ಕಾಂಗ್ರೆಸ್ ಪಕ್ಷಕ್ಕೆ ಕನ್ನಡಿಗರು ತಕ್ಕ ಪಾಠ ಕಲಿಸುವುದು ಗ್ಯಾರಂಟಿ. ವೋಟ್‌ಬ್ಯಾಂಕ್ ರಾಜಕಾರಣಕ್ಕಾಗಿ ಸಂವಿಧಾನ ಮತ್ತು ನ್ಯಾಯಾಂಗದ ಆಶಯ ಬಲಿ ಕೊಡುತ್ತಿರುವ ಕಾಂಗ್ರೆಸ್‌ಗೆ ಜನರೇ ಅಂತ್ಯ ಹಾಡಲಿದ್ದಾರೆ. ದಾವಣಗೆರೆ

ಕಾನೂನು ಹೋರಾಟಕ್ಕೆ ಸಿದ್ಧತೆ

ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅವಕಾಶ ನೀಡಿರುವ ಸರಕಾರದ ವಿರುದ್ಧ ಕಾನೂನು ಹೋರಾಟ ನಡೆಸಲು ಹಿಂದೂಪರ ಸಂಘಟನೆಗಳು ಮುಂದಾಗಿವೆ. ಪ್ರಕರಣವು ಸುಪ್ರಿಂಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿರುವಾಗಲೇ ಕಾಂಗ್ರೆಸ್ ನ್ಯಾಯಾಂಗ ಉಲ್ಲಂಘಿಸಿ ಏಕಪಕ್ಷಿಯವಾಗಿ ತೀರ್ಮಾನ ತೆಗೆದುಕೊಂಡಿದೆ ಎಂದು ಹಿಂದೂಪರ ಸಂಘಟನೆಗಳು ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಲು ತೀರ್ಮಾನಿಸಿವೆ. ಹಿಂದೂ ಜಾಗರಣಾ ವೇದಿಕೆ ಸೇರಿದಂತೆ ಕೆಲವು ಸಂಘಟನೆಗಳು ಸರಕಾರದ ಆದೇಶ ಪ್ರಶ್ನಿಸಿ ಕಾನೂನು ಸಮರಕ್ಕೆ ಸಜ್ಜಾಗಿವೆ.

ಉಪಚುನಾವಣೆ ಸುತ್ತ ನಡೆದ ಘಟನೆಗಳ ನಂತರ ಅಲ್ಪಸಂಖ್ಯಾತರ ಆಕ್ರೋಶಕ್ಕೆ ಬೆದರಿರುವ ಕಾಂಗ್ರೆಸ್, ಈಗ ತನ್ನ ಮತಬ್ಯಾಂಕ್ ಉಳಿಸಿಕೊಳ್ಳಲು ಹಿಜಾಬ್ ಅಸ್ತ್ರವನ್ನು ಕೈಗೆತ್ತಿಕೊಂಡಿದೆ ಎಂದು ಆರೋಪಿಸಿದ್ದಾರೆ.

ಎಲ್ಲಿಂದ ಆರಂಭವಾಯ್ತು?

2021 ಡಿಸೆಂಬರ್ ತಿಂಗಳಿನಲ್ಲಿ ಉಡುಪಿಯ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ 6 ವಿದ್ಯಾರ್ಥಿನಿಯರು ಹಿಜಾಬ್ ಅವಕಾಶ ನೀಡುವಂತೆ ಆಗ್ರಹಿಸಿ ವಿವಾದವಾಗಿ ರಾಜ್ಯ ಹಾಗೂ ದೇಶದಾದ್ಯಂತ ಸುದ್ದಿಗೆ ಗ್ರಾಸವಾಗಿತ್ತು. ಈ ಸಂದರ್ಭದಲ್ಲಿ ಕೆಲವು ಮತೀಯ ವಾದಿ ನಿಷೇಧಿತ ಸಂಘಟನೆಗಳು ಹಿಜಾಬ್ ವಿವಾದದ ಮೂಲಕ ಶಾಂತಿ ಸುವ್ಯವಸ್ಥೆಗೂ ಧಕ್ಕೆ ತರುವ ಪ್ರಯತ್ನವಾಗಿತ್ತು. ಈ ಸಂಬಂಧ ಗೊಂದಲ ನಿರ್ಮಾಣವಾಗಿ ಶಿಕ್ಷಣ ವ್ಯವಸ್ಥೆಗೆ ಹಾಗೂ ಕಾನೂನು ವ್ಯವಸ್ಥೆಗೆ ಧಕ್ಕೆ ಉಂಟಾಗಿತ್ತು. ಇದಾದ ನಂತರ ಶಾಲಾ ಕಾಲೇಜು ಗಳಲ್ಲಿ ಹಿಜಾಬ್ ನಿಷೇಧಿಸಿ 2022ರಲ್ಲಿ ಅಂದಿನ ಬಿಜೆಪಿ ಸರಕಾರ ಜಾರಿಗೆ ತಂದಿದ್ದ ವಸ್ತ್ರಸಂಹಿತೆ ಆದೇಶ ಎತ್ತಿ ಹಿಡಿದಿದ್ದ ಹೈಕೋರ್ಟ್, ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಮುಖ್ಯ ಎಂದು ತೀರ್ಪು ನೀಡಿತ್ತು.

ಕೈಗೆ ದಿಢೀರ್ ಜ್ಞಾನೋದಯ

ಉಪ ಚುನಾವಣೆಯ ಫಲಿತಾಂಶ ಹೊರಬಂದ ನಂತರ ಕಾಂಗ್ರೆಸ್ ಪಕ್ಷಕ್ಕೆ ದಿಢೀರ್ ಜ್ಞಾನೋದಯವಾಗಿ ವಿವಾದಿತ ಹಿಜಾಬ್ ವಿಷಯ ಮತ್ತೆ ಮುನ್ನೆಲೆಗೆ ತಂದಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರ ಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲವನ್ನು ರಾಜಕೀಯಕ್ಕಾಗಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಲಾಭದ ದೃಷ್ಟಿ ಬಿಟ್ಟರೆ ಸಮಾಜದ ಶಾಂತಿ ಮುಖ್ಯವಲ್ಲ. ದಾವಣಗೆರೆ ಉಪಚುನಾವಣೆಯಲ್ಲಿ ಒಂದು ಸಮುದಾಯದ ಜನರು ಮತ ಚಲಾವಣೆ ಮಾಡಿರುವ ರೀತಿ ನೋಡಿ, ಗಾಬರಿಗೆ ತುತ್ತಾಗಿ ಈ ರೀತಿ ಮಾಡುತ್ತಿದ್ದಾರೆ. 16ನೇ ತಾರೀಖು ಮುಸ್ಲಿಂ ಸಮಾವೇಶ ಇದೆ. ಅದಕ್ಕೆ ಹೆದರಿ ಈ ನಿರ್ಧಾರ ಮಾಡಿದ್ದಾರೆ. ಅಷ್ಟು ಧೈರ್ಯ ಇದ್ದಿದ್ದರೆ ಅಧಿಕಾರಕ್ಕೆ ಬಂದ ಕೂಡಲೇ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿತ್ತು. 3 ವರ್ಷ ಯಾಕೆ ಸುಮ್ಮನೆ ಇದ್ದರು? ಒಂದು ವರ್ಗದ ಸಮಾಧಾನ, ಓಲೈಕೆ ಮಾಡಲು ಈ ನಿರ್ಧಾರ ಮಾಡಿದ್ದಾರೆ. ಪ್ರಕರಣ ನ್ಯಾಯಾಲಯದಲ್ಲಿದ್ದು ತಡೆಯಾಜ್ಞೆ ಜಾರಿ ಯಲ್ಲಿದೆ. ಅದು ತೆರವಾಗದೇ ಆದೇಶ ಮಾಡುವುದು ನ್ಯಾಯಾಂಗಕ್ಕೂ ಈ ಸರಕಾರ ಅಪಚಾರ ಮಾಡುತ್ತಿದೆ ಎಂದು ಟೀಕಿಸಿದ್ದಾರೆ.

> ಅಕ್ಷರ ಮತ್ತು ಜ್ಞಾನ ಹೆಚ್ಚಿಸಬೇಕಾದ ಶಿಕ್ಷಣ ಸಚಿವರಿಗೆ ಅದರ ಉದ್ದೇಶದ ಬಗ್ಗೆಯೂ ಸ್ಪಷ್ಟತೆ ಇಲ್ಲ. ಅದರ ಇತಿಹಾಸದ ಅರಿವೂ ಇಲ್ಲ. ಕೇವಲ ಮತೀಯ ಓಲೈಕೆಯ ರಾಜನೀತಿಯ ಭಾಗವಾಗಿ ಶಾಲೆಗಳಲ್ಲಿ ಮತೀಯ ಭಾವನೆಗಳಿಗೆ ಜಾತ್ಯತೀತತೆಯ ಹೆಸರಿನಲ್ಲಿ ಅನುಮತಿ ಕೊಟ್ಟಿದ್ದಾರೆ.
> -ಸಿ.ಟಿ.ರವಿ ವಿಧಾನ ಪರಿಷತ್ ಸದಸ್ಯ

> ನಾಲ್ಕು ವರ್ಷಗಳ ನಂತರ ಮತ್ತೆ ಹಿಜಾಬ್‌ಗೆ ಅವಕಾಶ ನೀಡಿ ಕಾಂಗ್ರೆಸ್ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದೆ. ಇಂತಹ ತೀರ್ಮಾನ ಕೈಗೊಂಡು ರಾಜ್ಯಕ್ಕೇ ಬೆಂಕಿ ಹಚ್ಚುತ್ತ ಇದ್ದಾರೆ. ಇಲ್ಲಿ ಅಹಿತಕರ ಘಟನೆ, ಗದ್ದಲ ಆದರೆ ಕಾಂಗ್ರೆಸ್ ಹೊಣೆ.
> -ಛಲವಾದಿ ನಾರಾಯಣಸ್ವಾಮಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

> ಕಾಂಗ್ರೆಸ್ ಮಕ್ಕಳಲ್ಲಿ ಮತೀಯ ವಿಷ ಬೀಜ ಬಿತ್ತಲು ಶುರು ಮಾಡಿದೆ. ಹಿಜಾಬ್ ಸಂಬಂಧ ಹೊರಡಿಸಿದ ನಿರ್ಣಯ ಹಿಂದಕ್ಕೆ ಪಡೆಯಬೇಕು. ನ್ಯಾಯಾಲಯ ಏನು ಹೇಳಿತ್ತೋ ಅದರಂತೆ ನಡೆದುಕೊಳ್ಳಬೇಕು.
> -ಮಹೇಶ್ ಟೆಂಗಿನಕಾಯಿ ಶಾಸಕ

ಯೋಗೇಶ್ ಕೊಲೆ: 26ಕ್ಕೆ ಟಿಂಗರೀಕರ್ ಅರ್ಜಿ ವಿಚಾರಣೆ

ಬೆಂಗಳೂರು: ಧಾರವಾಡದ ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶ ಆರೋಪದಲ್ಲಿ ಏಳು ವರ್ಷಗಳ ಶಿಕ್ಷೆಗೆ ಗುರಿಯಾಗಿರುವ, ಶಿಕ್ಷೆ ಅಮಾನತ್ತಿನಲ್ಲಿಟ್ಟು ಜಾಮೀನು ಮಂಜೂರು ಮಾಡುವಂತೆ ಕೋರಿ ಪೊಲೀಸ್ ಅಧಿಕಾರಿ ಚನ್ನಕೇಶವ ಟಿಂಗರೀಕರ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ಹೈಕೋರ್ಟ್ ಮೇ 26ಕ್ಕೆ ನಿಗದಿಪಡಿಸಿದೆ.

ಶಿಕ್ಷೆ ಅಮಾನತು ಕೋರಿ ಟಿಂಗರೀಕರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ಅವರಿದ್ದ ನ್ಯಾಯಪೀಠ, ಅರ್ಜಿದಾರರ ಶಿಕ್ಷೆ ಅಮಾನತ್ತಿನಲ್ಲಿಡ ಬೇಕಾದರೆ, ಸುದೀರ್ಘ ವಿಚಾರಣೆ ನಡೆಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿದ್ದು, ವಿಚಾರಣೆ ಮುಂದೂಡುತ್ತಿರುವುದಾಗಿ ತಿಳಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಅರ್ಜಿದಾರರ ಪೊಲೀಸ್ ಅಧಿಕಾರಿಯಾಗಿದ್ದು, ಸರಿಯಾಗಿ ತನಿಖೆ ನಡೆಸಿಲ್ಲ ಎಂಬ ಆರೋಪವಿದೆ. ಆದರೆ, ಅವರ ವಿರುದ್ಧದ ಆರೋಪಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ, ಅಲ್ಲದೆ, ಟಿಂಗರೀಕರ್ ಅವರು 90 ದಿನಗಳ ಕಾಲ ಮಾತ್ರ ತನಿಖಾಧಿಕಾರಿಯಾಗಿದ್ದರು. ಸಿಸಿಟಿವಿ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ತನಿಖೆ ನಡೆಸಿದ್ದರು. ಅವರ ವಿರುದ್ಧ ಕೇವಲ ಮೌಖಿಕ ಸಾಕ್ಷ್ಯಗಳು ಮಾತ್ರ ಇವೆ. ಆದ್ದರಿಂದ ಶಿಕ್ಷೆಯನ್ನು ಅಮಾನತ್ತಿನಲ್ಲಿಡಬೇಕು ಎಂದು ಕೋರಿದರು.

ಇದಕ್ಕೆ ಆಕ್ಷೇಪಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್, ಎಸ್.ವಿ. ರಾಜು, ಆರೋಪಿಗೆ ಏಳು ವರ್ಷ ಶಿಕ್ಷೆ ವಿಧಿಸಲಾಗಿದೆ. ಆದರೆ, ಇದೀಗ ಕೇವಲ 73 ದಿನಗಳ ಕಾಲ ಮಾತ್ರ ಜೈಲಿನಲ್ಲಿದ್ದಾರೆ. ಅಲ್ಲದೆ, ರಾಜ್ಯದ ಪೊಲೀಸರು ನ್ಯಾಯದಾನ ಮಾಡುವ ಕೆಲಸ ಮಾಡಬೇಕು. ಆದರೆ, ಅರ್ಜಿದಾರ ಅಧಿಕಾರಿ ಆರೋಪಿಗಳ ಜತೆ ಕೈಜೋಡಿಸಿದ್ದಾರೆ. ನೈಜ ಸಾಕ್ಷ್ಯಗಳನ್ನು ಮರೆಮಾಚಿ ಬದಲಿ ಸಾಕ್ಷ್ಯಗಳನ್ನು ಸಂಗ್ರಹಿಸಿ ತಪ್ಪೆಸಗಿದ್ದಾರೆ. ಘಟನೆ ಸಂಬಂಧ ಪ್ರಮುಖ ಆರೋಪಿಗಳೊಂದಿಗೆ ಕೈಜೋಡಿಸಿದ್ದಾರೆ. ಆದ್ದರಿಂದ ಅವರಿಗೆ ವಿಧಿಸಿರುವ ಶಿಕ್ಷೆ ಸರಿಯಾಗಿದ್ದು, ಯಾವುದೇ ರೀತಿಯ ಪರಿಹಾರ ನ್ಯಾಯಾಲಯ ನೀಡಬಾರದು ಎಂದು ಪೀಠಕ್ಕೆ ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಆಕಾಶದಲ್ಲೇ ಅರ್ಧ ಗಂಟೆ ವಿಮಾನಗಳು ಗಿರಕಿ

ಮಂಗಳೂರು: ಇಲ್ಲಿನ ವಿಮಾನ ನಿಲ್ದಾಣಕ್ಕೆ ಬಂದಿದ್ದ ಎರಡು ವಿಮಾನಗಳು ಹವಾಮಾನ ವೈಪರಿತ್ಯ ದಿಂದಾಗಿ ಅರ್ಧಗಂಟೆ ಕಾಲ ಆಕಾಶದಲ್ಲೇ ಸುತ್ತಾಡಿ, ತಡವಾಗಿ ಲ್ಯಾಂಡ್ ಆಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಮಳೆಯಾಗುತ್ತಿದೆ. ಏರ್‌ಪೋರ್ಟ್ ಬಳಿಯೂ ಮಳೆಯಾಗುತ್ತಿದ್ದು, ವಿಮಾನಗಳು ಲ್ಯಾಂಡ್ ಆಗಲು ಸಾಧ್ಯವಾಗದೆ ಆಕಾಶದಲ್ಲೇ ಸುತ್ತಾಡಿವೆ. ವಿಟ್ಲ ಭಾಗದ ಸುತ್ತಮುತ್ತಲ ಭಾಗಗಳಲ್ಲೇ ಸುತ್ತಾಡಿ ಅರ್ಧಗಂಟೆ ಬಳಿಕ ಎರಡೂ ವಿಮಾನಗಳು ಲ್ಯಾಂಡ್ ಆಗಿವೆ. ತೀರ ಕೆಳಭಾಗದಲ್ಲೇ ವಿಮಾನಗಳು ಹಾರಾಟ ನಡೆಸಿದ್ದರಿಂದ ವಿಟ್ಲದ ಜನರು ಕೆಲಕಾಲ ಆತಂಕಕ್ಕೆ ಒಳಗಾಗಿದ್ದರು.

ಸ್ಕೂಟಿಗೆ ಟ್ರ್ಯಾಕ್ಟರ್ ಡಿಕ್ಕಿ: ಶಿಕ್ಷಕಿ ಸಾವು

ಸಿದ್ದಾಪುರ: ಪಟ್ಟಣದ ಸಿದ್ದಾಪುರ-ಶಿರಸಿ ಮುಖ್ಯ ರಸ್ತೆಯ ಮಳವತ್ತಿ ಹತ್ತಿರ ಟ್ರ್ಯಾಕ್ಟರ್ ಹಾಗೂ ಸ್ಕೂಟಿ ನಡುವೆ ಡಿಕ್ಕಿ ಸಂಭವಿಸಿ ಶಿಕ್ಷಕಿ ಪೂರ್ಣಿಮಾ ಗಣಪತಿ ಭಟ್ಟ(47) ಮೃತಪಟ್ಟ ಘಟನೆ ಗುರುವಾರ ಸಂಭವಿಸಿದೆ. ಪಟ್ಟಣದ ಹೊಸೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿರುವ ಪೂರ್ಣಿಮಾ ಜನಗಣತಿ ಮಾಹಿತಿಯನ್ನು ಪಟ್ಟಣ ಪಂಚಾಯಿತಿಗೆ ನೀಡಲು ಹೋಗುತ್ತಿರುವಾಗ ಈ ಘಟನೆ ನಡೆದಿದೆ. ಗಾಯಗೊಂಡಿದ್ದ ಶಿಕ್ಷಕಿಯನ್ನು ಸಿದ್ದಾಪುರದ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ಪೂರ್ಣಿಮಾ ಪಟ್ಟಣದ ಕೋಲಸಿರ್ಸಿ ಕ್ರಾಸ್ ಹತ್ತಿರದ ಬಸವಗಿರಿ ನಿವಾಸಿಯಾಗಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಫನ್‌ತರಂಗ

– ರಘುಪತಿ ಶೃಂಗೇರಿ –

ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ 'ಕಾಸ್ಮೆಟಿಕ್ ಟಚ್' ಬೇಡ ಎಂದ ಹೈಕಮಾಂಡ್.

ಸುದ್ದಿ



ಬೆಂಗಳೂರು-ಮುಂಬೈ ನಡುವೆ ಮತ್ತೊಂದು ರೈಲು

ಬೆಂಗಳೂರು: ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈಯ ಲೋಕಮಾನ್ಯ ತಿಲಕ್ ಟರ್ಮಿನಲ್ ನಡುವೆ ಹೊಸದಾಗಿ ವಾರಕ್ಕೆರಡು ದಿನ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ರೈಲ್ವೆ ಸಚಿವಾಲಯವು ಅನುಮೋದನೆ ನೀಡಿದೆ. ಮೇ 17ರಂದು ಮೊದಲ ರೈಲು ಸಂಚರಿಸಲಿದೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆ ಪೂರೈಸಲು ಹಾಗೂ ಬೆಂಗಳೂರು, ಉತ್ತರ ಕರ್ನಾಟಕದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಮಹಾರಾಷ್ಟ್ರದ ಪುಣೆ, ಮುಂಬೈ ನಗರಗಳ ನಡುವೆ ಸಂಪರ್ಕವನ್ನು ಸುಧಾರಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಘಾಟನಾ ವಿಶೇಷ ರೈಲು ಮೇ 17ರಂದು ಬೆಳಿಗ್ಗೆ 10ಕ್ಕೆ ಎಸ್‌ಎಂವಿಟಿ ನಿಲ್ದಾಣದಿಂದ ಹೊರಡಲಿದೆ. ಮರುದಿನ ಬೆಳಗ್ಗೆ 10.30ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಸ್ (ಎಲ್‌ಟಿಟಿ) ತಲುಪಲಿದೆ. ಆನಂತರ ನಿಯಮಿತ ರೈಲು ಸಂಚಾರ ಮೇ 23ಕ್ಕೆ ಎಸ್‌ಎಂವಿಟಿಯಿಂದ ಹಾಗೂ ಮೇ 24ಕ್ಕೆ ಎಲ್‌ಟಿಟಿ ಮುಂಬೈಯಿಂದ ಆರಂಭಗೊಳ್ಳಲಿದೆ. ಶನಿವಾರ ಮತ್ತು ಮಂಗಳವಾರ ಎಸ್‌ಎಂವಿಟಿ ಬೆಂಗಳೂರಿನಿಂದ ರಾತ್ರಿ 10.35ಕ್ಕೆ ಹೊರಡುವ ರೈಲು ಮರುದಿನ ರಾತ್ರಿ 10.40ಕ್ಕೆ ಎಲ್‌ಟಿಟಿ ತಲುಪಲಿದೆ. ಪ್ರತಿ ಭಾನುವಾರ ಮತ್ತು ಬುಧವಾರ ರಾತ್ರಿ 21.15ಕ್ಕೆ ಎಕ್‌ಟಿಟಿಯಿಂದ ಹೊರಡಲಿರುವ ರೈಲು ಮರುದಿನ ರಾತ್ರಿ 10.30ಕ್ಕೆ ಎಸ್‌ಎಂವಿಟಿಗೆ ತಲುಪಲಿದೆ. 17 ಎಲ್.ಎಚ್.ಬಿ ಬೋಗಿಗಳನ್ನು ಹೊಂದಿರುವ ಈ ರೈಲುಗಳು ದಾವಣಗೆರೆ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮೀರಜ್ ಜಂಕ್ಷನ್, ಸಾಂಗ್ಲಿ, ಕರಾಡ್, ಸತಾರಾ, ಲೋನಾಂಡ್, ಪುಣೆ, ಲೋನಾವಾಲಾ, ಕರ್ಜತ್, ಕಲ್ಯಾಣ್ ಮತ್ತು ಥಾಣೆ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶಿವಾನಂದ್‌ಗೆ ಸೇರಿದ ದಾಖಲೆಗಳ ಪರಿಶೀಲನೆ

ಬೆಳಗಾವಿ ಜಿಲ್ಲಾಡಳಿತ, ಸಹಕಾರ ಇಲಾಖೆ ಅಧಿಕಾರಿಗಳಿಂದ ಜಂಟಿ ದಾಳಿ

ಬೆಳಗಾವಿ: ತಮ್ಮ ಮಾತಿನ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಜನಪ್ರಿಯತೆ ಗಳಿಸಿದ್ದ ಶಿವಂ ಅಸೋಸಿಯೇಟ್ ಸಂಸ್ಥೆ ಮಾಲೀಕ ಶಿವಾನಂದ ನೀಲಣ್ಣನವರ್‌ಗೆ ಸೇರಿದ ಕಚೇರಿಗಳ ಮೇಲೆ, ಗುರುವಾರ ಬೆಳಗಾವಿ ಜಿಲ್ಲಾಡಳಿತ ಹಾಗೂ ಸಹಕಾರ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ, ಮಹತ್ವದ ದಾಖಲೆಗಳ ಪರಿಶೀಲನೆ ನಡೆಸಿದರು.

ಸುಮಾರು 20 ಸಾವಿರ ಜನ ಸೇರಿಸಿ ಬರುವ ಮೇ 17ರಂದು 'ಸ್ವಚ್ಛ ಬೆಳಗಾವಿ' ಹೆಸರಿನಲ್ಲಿ ಅದ್ದೂರಿ ಕಾರ್ಯಕ್ರಮ ಮಾಡಲು ಶಿವಾನಂದ ನೀಲಣ್ಣನವರ್ ಸಿದ್ಧತೆ ನಡೆಸಿದ್ದರು. ಈ ವ್ಯಕ್ತಿಯ ಕುರಿತು ಸಾರ್ವಜನಿಕರು ಸಾಕಷ್ಟು ಅನುಮಾನ ವ್ಯಕ್ತಪಡಿಸಿದ ಹಿನ್ನೆಲೆ ಅಧಿಕಾರಿಗಳು ಶಿವಬಸವ ನಗರದಲ್ಲಿರುವ ಎರಡು ಕಚೇರಿಗಳ ಮೇಲೆ ದಾಳಿ ನಡೆಸಿ ಹಣಕಾಸು ಮೂಲ ಸೇರಿದಂತೆ ಅನೇಕ ದಾಖಲೆಗಳ ಪರಿಶೀಲನೆ ನಡೆಸಿದರು.

ಬೆಳಗಾವಿ ಉಪವಿಭಾಗಾಧಿಕಾರಿ ಶ್ರವನ್ ನಾಯಕ್ ನೇತೃತ್ವದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳ ತಂಡ ಕಚೇರಿಗೆ ಭೇಟಿ ನೀಡಿ ಹಣಕಾಸು ವ್ಯವಹಾರಗಳು, ಹೂಡಿಕೆ ದಾಖಲೆಗಳು, ಸಾರ್ವಜನಿಕರಿಂದ ಸಂಗ್ರಹಿಸಿರುವ ಹಣಕ್ಕೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆ ನಡೆಸಿತು. ಕೆಲ ದಾಖಲೆಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿರುವ ಮಾಹಿತಿ ಲಭ್ಯವಾಗಿದೆ. ಶಿವಂ ಅಸೋಸಿಯೇಟ್ ಸಂಸ್ಥೆ ಮಾಜಿ ಸೈನಿಕರು ಸೇರಿದಂತೆ ಸಾರ್ವಜನಿಕರಿಗೆ ಹೆಚ್ಚಿನ ಬಡ್ಡಿದರ ನೀಡುವುದಾಗಿ ಭರವಸೆ ನೀಡಿ ದೊಡ್ಡ ಪ್ರಮಾಣದಲ್ಲಿ ಹಣ ಸಂಗ್ರಹಿಸಿರುವ ಆರೋಪ ಕೇಳಿಬಂದಿದೆ. ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಜನರು ಹೂಡಿಕೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಹೂಡಿಕೆದಾರರ ಸಾವಿರಾರು ಕೋಟಿ ರೂಪಾಯಿ ಹಣ ದುರುಪಯೋಗವಾಗಿರುವ ಸಾಧ್ಯತೆಯೂ ಅಧಿಕಾರಿಗಳ ತನಿಖೆಯಲ್ಲಿ ಪರಿಶೀಲನೆಯಲ್ಲಿದೆ ಎನ್ನಲಾಗಿದೆ.

ಈ ನಡುವೆ ಕಚೇರಿಗಳ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಹೊಸ ತಿರುವು ನೀಡಿದ್ದು, ಇನ್ನಷ್ಟು ಮಾಹಿತಿ ಬಹಿರಂಗವಾಗುವ ಸಾಧ್ಯತೆ ಇದೆ. ಜಿಲ್ಲಾಡಳಿತ ಹಾಗೂ ಸಹಕಾರ ಇಲಾಖೆ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ಮುಂದುವರಿಸಿವೆ.

ಬ್ಯಾನರ್ ತೆರವು

ಶಿವಾನಂದ ನೀಲಣ್ಣನವರ್ ನೇತೃತ್ವದಲ್ಲಿ ಮೇ 17ರಂದು 'ಸ್ವಚ್ಛ ಬೆಳಗಾವಿ' ಹೆಸರಿನಲ್ಲಿ ಭಾರಿ ಕಾರ್ಯಕ್ರಮ ಆಯೋಜನೆಗೂ ಸಿದ್ಧತೆ ನಡೆಸಲಾಗಿತ್ತು. ಸುಮಾರು 20 ಸಾವಿರ ಜನರನ್ನು ಸೇರಿಸಿ ಕಾರ್ಯಕ್ರಮ ನಡೆಸುವ ಉದ್ದೇಶ ಹೊಂದಿರುವುದಾಗಿ ಹೇಳಲಾಗಿತ್ತು. ಆದರೆ ಅಧಿಕಾರಿಗಳು ಕಾರ್ಯಕ್ರಮಕ್ಕೆ ಅನುಮತಿ ನಿರಾಕರಣೆ ಮಾಡಿದ್ದಾರೆ. ಜತೆಗೆ ನಗರದಲ್ಲಿ ಅಳವಡಿಸಲಾಗಿದ್ದ ಬ್ಯಾನರ್‌ಗಳನ್ನು ತೆರವು ಮಾಡಲಾಗಿದೆ. ಸಾರ್ವಜನಿಕ ಸಭೆಗಳ ಬಗ್ಗೆ ಜಿಲ್ಲಾಡಳಿತ ಈಗಾಗಲೇ ಕಠಿಣ ನಿಲುವು ತೆಗೆದುಕೊಂಡಿತ್ತು.

15 ಸಾವಿರ ಬಂದೂಕು ಇವೆ ಎಂದಿದ್ದ ಶಿವಣ್ಣ

ಇತ್ತೀಚಿನ ದಿನಗಳಲ್ಲಿ ಶಿವಾನಂದ ನೀಲಣ್ಣನವರ್ ಅವರ ಹಲವು ಹೇಳಿಕೆಗಳು ಹಾಗೂ ಭಾಷಣಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ವ್ಯಾಪಕ ಚರ್ಚೆಗೆ ಕಾರಣವಾಗಿದ್ದವು. ಕಡೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಅವರು, 'ನಮ್ಮ ಬಳಿ 15 ಸಾವಿರ ಬಂದೂಕುಗಳಿವೆ. ದೊಡ್ಡ ಸಾಮ್ರಾಜ್ಯ ಕಟ್ಟಿದ್ದೇನೆ. ನಾನು ಯಾರಿಗೂ ಹೆದರಲ್ಲ. 'ನಿಮ್ಮನ್ನು ಗಂಡಸರನ್ನಾಗಿ ಮಾಡಲು ಬಂದಿದ್ದೇನೆ' ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅದೇ ಭಾಷಣದಲ್ಲಿ '2028ರ ಚುನಾವಣೆಯಲ್ಲಿ 224 ಸ್ಥಾನ ಗೆದ್ದು ಸಿಎಂ ಆಗುತ್ತೇನೆ'' ಎಂಬ ಹೇಳಿಕೆಯೂ ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. ಈ ಹೇಳಿಕೆಗಳ ನಂತರ ಹಲವು ಸಂಘಟನೆಗಳು, ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿತ್ತು.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ
E-mail:dhovijayanagara21@gmail.com. Telephone: 08394-227040
ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ಜಿ.ಆ/03/2025-26 ದಿನಾಂಕ:13.05.2026
ಅಲ್ಪಾವಧಿ ಮರು-ಟೆಂಡರ್ ಪ್ರಕಟಣೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧಿನದ ನೂತನ 250 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆ, ಹೊಸಪೇಟೆಗೆ 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅನುದಾನದಡಿಯಲ್ಲಿ ಕ್ಷ-ಕಿರಣ ಮತ್ತು ಲಾಂಡ್ರಿ ವಿಭಾಗಕ್ಕೆ ಅವಶ್ಯವಿರುವ ವಿವಿಧ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಇ-ಸಂಗ್ರಹಣ ಕೋಶದ ವೆಬ್ ಸೈಟ್ **(https://kppp.karnataka.gov.in)** ಮೂಲಕ ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್ ದಾರರು ದಿನಾಂಕ:13.052026 ರಿಂದ ದಿನಾಂಕ:20.05.2026 ರ ಸಮಯ ಸಾಯಂಕಾಲ 05:00 ಗಂಟೆಯವರೆಗೆ ಟೆಂಡರನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.218.75ಲಕ್ಷ) **(INDENT NUMBER:DHFWS/2025-26/IND2107/CALL-3)**
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394-227040 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.
ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/74

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಕೋಲಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ, ನ್ಯೂ ಕೋಲಾರ ಆಸ್ಪತ್ರೆ ಕಟ್ಟಡ, ಕುವೆಂಪು ನಗರ, ಕೋಲಾರ-563101
ದೂ:08152-229225, Email-cdpoklr@gmail.com
ಸಂಖ್ಯೆ:ಶಿಅಯೋಕೋ:ಬಾ.ಮೂ.ಸಿ:ಟೆಂಡರ್:2026-27
ದಿನಾಂಕ: 13.05.2026
"ಟೆಂಡರ್ ಪ್ರಕಟಣೆ"
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ 2026-27 ನೇ ಸಾಲಿಗೆ ಐ.ಸಿ.ಡಿ.ಎಸ್ ಯೋಜನೆಯಡಿ 04 ಗ್ರೂಪ್ ಡಿ ಹುದ್ದೆಗಳನ್ನು ಹೊರ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆ ಉಳ್ಳವರು **ದಿ: 18.05.2026 ಸಮಯ: ಸಂಜೆ: 05.00 ಗಂಟೆ** ರೊಳಗೆ ಇ-ಟೆಂಡರ್ ಸಲ್ಲಿಸಲು Karnataka Public Procurement Portal Website address: **https://kppp.karnataka.gov.in** ನಲ್ಲಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸ/ **ದೂರವಾಣಿ: 08152-229225** ರವರನ್ನು ಸಂಪರ್ಕಿಸುವುದು.
ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:73/ಕೆಎಸ್‌ಎಂಸಿಎ/2026-27

ರಾಜ್ಯದಲ್ಲಿ 4 ದಿನ ಭಾರಿ ಮಳೆ ಎಚ್ಚರಿಕೆ

ಬೆಂಗಳೂರು: ರಾಜ್ಯದ ಹಲವೆಡೆ ಮುಂದಿನ ನಾಲ್ಕು ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮೇ 15, 16, 17 ಮತ್ತು 18ರಂದು ಬೆಂಗಳೂರು ಸೇರಿ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಮೇ 18ರಂದು ದಕ್ಷಿಣ ಒಳನಾಡಿನ ಭಾಗದಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದ್ದು, ಗಂಟೆಗೆ 30-40 ಕಿ.ಮೀ ವೇಗದಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರವು ಎಕ್ಸ್‌ನಲ್ಲಿ ಮಳೆಯ ಮುನ್ನೆಚ್ಚರಿಕೆ ನೀಡಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ - 562123.
ದೂರವಾಣಿ: 9663046622 ಇ-ಮೇಲ್: nelamangala.pa@gmail.com
ಸಂಖ್ಯೆ: ನೆಯೋಪ್ರಾ/CLU/02/2026-27 ದಿನಾಂಕ: 13-05-2026
ಸಾರ್ವಜನಿಕ ಪ್ರಕಟಣೆ
ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹುರುಳಿಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಹೆಚ್.ಹೆಚ್. ಸೂರಜ್ ಉರುಫ್ ಸೂರಜ್. ಹೆಚ್. ಹರಿಹರ	ನೆಲಮಂಗಲ / ಕಸಬಾ / ಹುರುಳಿಹಳ್ಳಿ	16/3	00-20	ವ್ಯವಸಾಯ	ವಸತಿ

ಷರಾ:- ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಿ/- ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಸಾಸಂಇ/ವಾ.ಪ್ರ/660/ಅಡ್ವರ್ಟೋ/2026-27

ರಾಜ್ಯದಲ್ಲೂ SIR

← ಮೊದಲ ಪುಟದಿಂದ

ಮೊದಲಿಗೆ, ಒಡಿಶಾ, ಮಿಜೋರಾಂ, ಸಿಕ್ಕಿಂ ಮತ್ತು ಮಣಿಪುರದಲ್ಲಿ ಮೇ 30 ರಿಂದ ಜೂನ್ 28 ರವರೆಗೆ ಮನೆ-ಮನೆಗೆ ಪರಿಶೀಲನಾ ಅಭಿಯಾನ ವನ್ನು ನಡೆಸಲಾಗುವುದು. ಮಹಾರಾಷ್ಟ್ರ, ಕರ್ನಾಟಕ, ಜಾರ್ಖಂಡ್, ಮೇಘಾಲಯ ಮತ್ತು ದೆಹಲಿಯಲ್ಲಿ ಈ ಪ್ರಕ್ರಿಯೆಯು ಜೂನ್ ಅಂತ್ಯದಲ್ಲಿ ಪ್ರಾರಂಭವಾಗಿ ಅಕ್ಟೋಬರ್ 7ರಂದು ಕೊನೆಗೊಳ್ಳುತ್ತದೆ.

ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಪುದುಚೇರಿ, ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್, ಛತ್ತೀಸ್‌ಗಢ, ಗೋವಾ, ಅಸ್ಸಾಂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಲಕ್ಷದ್ವೀಪಗಳಲ್ಲಿ ಪರಿಷ್ಕರಣೆ ಕಾರ್ಯ ಪೂರ್ಣಗೊಂಡಿದೆ.

ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಮತದಾರರು: ಅಂಕಿಅಂಶಗಳ ಪ್ರಕಾರ, ಈ ಹಂತದಲ್ಲಿ ಮಹಾರಾಷ್ಟ್ರವು ಅತಿ ಹೆಚ್ಚು ಮತದಾರರನ್ನು ಹೊಂದಿದ್ದು, 9.86 ಕೋಟಿ ಮತದಾರರನ್ನು ಹೊಂದಿದ್ದು, ಅಲ್ಲಿ 97,924 ಬಿಎಲ್‌ಒಗಳು ಮತ್ತು 96,949 ಬಿಎಲ್‌ಎಗಳನ್ನು ನಿಯೋಜಿಸಲಾಗುವುದು. ಕರ್ನಾಟಕದಲ್ಲಿ 5.55 ಕೋಟಿ ಮತದಾರರು; ಆಂಧ್ರಪ್ರದೇಶದಲ್ಲಿ 4.16 ಕೋಟಿ; ಮತ್ತು ತೆಲಂಗಾಣದಲ್ಲಿ 3.39 ಕೋಟಿ ಮತದಾರರು ಈ ಅಭಿಯಾನದ ವ್ಯಾಪ್ತಿಗೆ ಬರಲಿದ್ದಾರೆ.

ರಾಜ್ಯದಲ್ಲಿ ಮತ್ತೆ ಧರ್ಮ ದಂಗಲ್

← ಮೊದಲ ಪುಟದಿಂದ

ಸರಕಾರ ಕೂಡಲೇ ತನ್ನ ಆದೇಶವನ್ನು ಹಿಂಪಡೆಯದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಬಿಜೆಪಿ ನಾಯಕರು ಎಚ್ಚರಿಕೆ ನೀಡಿದ್ದಾರೆ.

ಹೊಸ ಸಂಪ್ರದಾಯಕ್ಕೆ ಅವಕಾಶವಿಲ್ಲ: ಮೈಸೂರಿನಲ್ಲಿ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಲ್ತಿಯಲ್ಲಿರುವ ಸಂಪ್ರದಾಯ ಹಾಗೂ ಧಾರ್ಮಿಕ ಪದ್ಧತಿ ಆಧಾರಿತ ಸಂಕೇತಗಳನ್ನು ಮಾತ್ರ ಶಾಲಾ ಕಾಲೇಜುಗಳಲ್ಲಿ ಸಮವಸ್ತ್ರದೊಂದಿಗೆ ಧರಿಸಲು ಅವಕಾಶವಿದೆ. ಕೇಸರಿ ಶಾಲು ಅಥವಾ ಹೊಸದಾಗಿ ಕೇಸರಿ ಟರ್ಬನ್ ಬಳಸಲು ಅವಕಾಶ ಇಲ್ಲ. ರಾಜ್ಯ ಸರಕಾರದ ಆದೇಶದಲ್ಲಿ ಹಿಜಾಬ್ ಧರಿಸಲು ಮಾತ್ರ ಅವಕಾಶ ನೀಡಿಲ್ಲ, ಪೇಟ-ಟರ್ಬನ್, ಜನಿವಾರ, ಪವಿತ್ರದಾರ, ಶಿವದಾರ, ರುದ್ರಾಕ್ಷಿ, ತಲೆವಸ್ತ್ರ, ಹಿಜಾಬ್ ಧರಿಸಲೂ ಅವಕಾಶ ನೀಡಿದೆ. ಅವರವರ ನಂಬಿಕೆಗೆ ಅನುಗುಣವಾಗಿ ವಿದ್ಯಾರ್ಥಿಗಳು 12ನೇ ತರಗತಿವರೆಗೂ ಧಾರ್ಮಿಕ ಪದ್ಧತಿ ಆಧಾರಿತ ಸಂಕೇತಗಳನ್ನು ಧರಿಸಬಹುದು ಎಂದು ಹೇಳಿದ್ದಾರೆ. ಬಿಜೆಪಿಯವರ ಹೇಳಿಕೆಯಂತೆ ಕೇಸರಿ ಶಾಲು ಅಥವಾ ಕೇಸರಿ ಟರ್ಬನ್ ಹಾಕಲು ಅವಕಾಶ ಇಲ್ಲ. ಈವರೆಗೂ ನಂಬಿಕೆ ಆಧಾರಿತವಾಗಿ ಚಾಲ್ತಿಯಲ್ಲಿರುವ ಸಂಕೇತಗಳನ್ನು ಮಾತ್ರ ಬಳಸಬಹುದು ಎಂದರು.

ಸುಪ್ರೀಂ ಅಂಗಳದಲ್ಲಿದೆ ಹಿಜಾಬ್: 2022ರ ಮಾರ್ಚ್ 15 ರಂದು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನೊಳಗೊಂಡ ತ್ರಿಸದಸ್ಯ ಪೀಠ ಹಿಜಾಬ್ ನಿಷೇಧಿಸಿ ರಾಜ್ಯ ಸರಕಾರ ಹೊರಡಿಸಿದ್ದ ಆದೇಶ ಎತ್ತಿಹಿಡಿದಿತ್ತು. ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಕೆಲವು ಮುಸ್ಲಿಂ ಸಂಘಟನೆಗಳು ಸುಪ್ರಿಂಕೋರ್ಟ್ ಮೆಟ್ಟಿಲೇರಿದ್ದವು. ವಾದ-ಪ್ರತಿವಾದ ನಡೆದು ಸುಪ್ರಿಂಕೋರ್ಟ್ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ನೇತೃತ್ವದ ದ್ವಿಸದಸ್ಯ ಪೀಠ ವಿಭಿನ್ನ ತೀರ್ಪು ನೀಡಿತ್ತು. ನ್ಯಾ. ಹೇಮಂತ್ ಗುಪ್ತಾ ಅವರು ಕರ್ನಾಟಕ ಹೈಕೋರ್ಟ್ ಆದೇಶ ಎತ್ತಿ ಹಿಡಿದರೆ, ನ್ಯಾ. ಸುಧಾಂಶು ಧುಲಿಯಾ ಅವರು ಹೈಕೋರ್ಟ್ ಆದೇಶ ರದ್ದುಗೊಳಿಸಿದ್ದರು. ಅಂತಿಮವಾಗಿ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಸಾಂವಿಧಾನಿಕ ಪೀಠಕ್ಕೆ ಅರ್ಜಿ ವರ್ಗಾವಣೆ ಮಾಡಿದ್ದು, ಪ್ರಕರಣ ಈಗಲೂ ವಿಚಾರಣಾ ಹಂತದಲ್ಲಿದೆ. ಈ ಹಂತದಲ್ಲಿ ಸರಕಾರ ಆದೇಶ ಹಿಂಪಡೆದಿರುವುದು ಚರ್ಚೆಗೆ ಗ್ರಾಸವಾಗಿದೆ.

> ಅಭಿವೃದ್ಧಿ ಮರೆತು ಹಿಂದೂಗಳಿಗೆ ಅಪಮಾನ ಮಾಡಿಕೊಂಡು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರಕಾರದ ಆಡಳಿತಕ್ಕೆ ಇತಿಶ್ರೀ ಹಾಡುವ ದಿನಗಳು ಬಂದೇ ಬರಲಿವೆ. ಹಿಂದೂಗಳಿಗೆ ಅಪಮಾನ ಮಾಡುವ ಕೆಲಸವನ್ನು ಕಾಂಗ್ರೆಸ್ ಸರಕಾರ ನಿರಂತರವಾಗಿ ಮಾಡುತ್ತಿದೆ. ರಾಜ್ಯದ ಜನರೂ ಇದಕ್ಕೆ ಉತ್ತರ ಕೊಡಲಿದ್ದಾರೆ.
> - ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ನಾಲೆಯಲ್ಲಿ ಮುಳುಗಿ ವಿದ್ಯಾರ್ಥಿಗಳಿಬ್ಬರ ಸಾವು

ದಾವಣಗೆರೆ: ಭದ್ರಾ ನಾಲೆಗೆ ಈಜಲು ಇಳಿದ 10 ಮಂದಿ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪೈಕಿ ಇಬ್ಬರು ನೀರುಪಾಲಾದ ಘಟನೆ ಚನ್ನಗಿರಿ ತಾ. ಮರಬನಹಳ್ಳಿ ಬಳಿ ನಡೆದಿದೆ. 10 ಜನ ಎಂಜಿನಿಯರಿಂಗ್ ವಿದ್ಯಾರ್ಥಿ-ವಿದ್ಯಾರ್ಥಿನಿಯರು ವಾಯು ವಿಹಾರಕ್ಕೆಂದು ಹೋಗಿದ್ದರು. ಇಬ್ಬರು ನೀರು ಪಾಲಾಗಿದ್ದು, ಉಳಿದ 8 ಮಂದಿ ಸ್ಥಳೀಯರ ಹರಸಾಹಸದಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಗರದ ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ಐಎಸ್ ವಿದ್ಯಾರ್ಥಿನಿ ಮಾನಸಿ ಸಿಂಧೆ (22), ಎಚ್.ಎಸ್.ವಿವೇಕ್(22) ಮೃತದುರ್ದೈವಿಗಳು. ದಾವಣಗೆರೆಯ ಕಾಲೇಜೊಂದರಲ್ಲಿ ಅಂತಿಮ ಪರೀಕ್ಷೆ ಇನ್ನೊಂದು ತಿಂಗಳಷ್ಟೇ ಇತ್ತು. ಈ ಹಿನ್ನೆಲೆ ವಿದ್ಯಾರ್ಥಿನಿಯರು ವಿಹಾರಕ್ಕೆಂದು ಚನ್ನಗಿರಿ ತಾ.ಬಸವಾಪಟ್ಟಣ ಸಮೀಪದ ಮರಬನಹಳ್ಳಿ ಸಮೀಪದ ಭದ್ರಾ ನಾಲೆಯ ಬಳಿ ತೆರಳಿದ್ದರು. ನೀರಿನಲ್ಲಿ ಆಟವಾಡುತ್ತಿದ್ದ ವಿದ್ಯಾರ್ಥಿಗಳ ಪೈಕಿ ಓರ್ವ ವಿದ್ಯಾರ್ಥಿ ಕಾಲು ಜಾರಿ ನೀರಿನ ಸೆಳೆತಕ್ಕೆ ಸಿಲುಕಿದ್ದಾರೆ. ಆಗ ಆ ವಿದ್ಯಾರ್ಥಿ ರಕ್ಷಣೆಗೆ ಬಂದ ಇನ್ನೊಬ್ಬರು ಸೆಳವಿಗೆ ಸಿಕ್ಕಿದ್ದಾರೆ. ಈ ವೇಳೆ ಇಬ್ಬರು ಮೃತಪಟ್ಟಿದ್ದಾರೆ.

ತೇಗದ ಮರ ಅಕ್ರಮ ಸಾಗಣೆ ಜಾಲ ಪತ್ತೆ

ವಿಜಯನಗರ: ಜಿಲ್ಲೆಯ ಅರಣ್ಯ ಇಲಾಖೆ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದ್ದ ಕೋಟ್ಯಂತರ ರು. ಮೌಲ್ಯದ ತೇಗದ ಮರ ಹಾಗೂ ಸೀಸನ್ ಕಟ್ಟಿಗೆಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಹೊಸಪೇಟೆಯ ಆಜಾದ್ ನಗರದ ನಿವಾಸಿಗಳಾದ ಇಬ್ರಾಹಿಂ ಮತ್ತು ಮುನೀರ್ ಎಂಬುವವರು ಈ ಅಕ್ರಮ ಜಾಲದ ಪ್ರಮುಖ ಆರೋಪಿಗಳೆಂದು ಗುರುತಿಸಲಾಗಿದೆ. ಹೊಸಪೇಟೆಯ ಸಾಯಿಬಾಬಾ ಸರ್ಕಲ್ ಸಮೀಪದ ಲೇಔಟ್ ಒಂದರಲ್ಲಿ ಅಕ್ರಮವಾಗಿ ಮರಗಳನ್ನು ಸಂಗ್ರಹಿಸಿಡಲಾಗಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದರು. ಈ ವೇಳೆ ದೊಡ್ಡ ಪ್ರಮಾಣದ ತೇಗ ಹಾಗೂ ಸೀಸನ್ ಮರದ ತುಂಡುಗಳು ಪತ್ತೆಯಾಗಿವೆ. ಆರೋಪಿಗಳು ಮುಂಬೈನಿಂದ ಹೊಸಪೇಟೆಗೆ ಅಕ್ರಮವಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮರಗಳನ್ನು ತರಿಸಿಕೊಳ್ಳುತ್ತಿದ್ದರು ಎನ್ನಲಾಗಿದೆ. ವಶಪಡಿಸಿಕೊಳ್ಳಲಾದ ಕಟ್ಟಿಗೆಗಳ ಮೌಲ್ಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೋಟ್ಯಂತರ ರುಪಾಯಿಗಳಾಗಬಹುದು ಎಂದು ಅಂದಾಜಿಸಲಾಗಿದೆ. ಈ ಅಕ್ರಮ ಮಾರಾಟ ಜಾಲದಲ್ಲಿ ಹಲವರು ಭಾಗಿಯಾಗಿರುವ ಶಂಕೆಯಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ತನಿಖೆ ತೀವ್ರಗೊಳಿಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
15.05.2026
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ

ಶ್ರೀ. ನಂದೀಶ್ ಪಿ.ಕೆ
ವಿಷಯ
ಅರವಿಂದರ ಸಾವಿತ್ರಿ 24

vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಮಳಖೇಡ, ಕಲಬುರಗಿ

ಸಮಸ್ಯೆಯೇನು..? : ಇತಿಹಾಸ ಪ್ರಸಿದ್ಧ ರಾಷ್ಟ್ರಕೂಟಕ ಕೋಟೆ ಹಾಳಾಗುತ್ತಿರುವ ಬಗ್ಗೆ.

- **ಪರಿಹಾರ:** ಕಲಬುರಗಿ ಜಿಲ್ಲೆಯ ಮಳಖೇಡದ ರಾಷ್ಟ್ರಕೂಟರ ಕೋಟೆ ಗೋಡೆಗಳು ಸಂರಕ್ಷಣೆ ಇಲ್ಲದೆ ಹಾಳಾಗುತ್ತಿವೆ ಎಂದು ಸಾರ್ವಜನಿಕರೊಬ್ಬರು ದೂರು ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿರುವ ಸರಕಾರ ಕೋಟೆ ದುರಸ್ತಿ ಕಾಮಗಾರಿ ಪ್ರಾರಂಭಿಸಲು ಟೆಂಡರ್ ಪ್ರಕ್ರಿಯೆ ಮುಗಿಸಿದೆ.

ದಿನ ವಿಶೇಷ

15 ಮೇ 2026 ಶುಕ್ರವಾರ

» ಸೂರ್ಯೋದಯ	: 5-47
» ಸೂರ್ಯಾಸ್ತ	: 6-59
» ತಿಥಿ	: ತ್ರಯೋದಶಿ
» ನಕ್ಷತ್ರ	: ಚತುರ್ದಶಿ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ವೈಶಾಖ
» ಪಕ್ಷ	: ಕೃಷ್ಣಪಕ್ಷ

ಹಿಜಾಬ್, ಶಿವದಾರ, ಜನಿವಾರ, ರುದ್ರಾಕ್ಷಿ ಹಾಕಿಕೊಳ್ಳಲು ಅವಕಾಶ | ಸಮವಸ್ತ್ರದಲ್ಲಿ ಹೊಸ ಪದ್ಧತಿ ಮಾಡಲು ವಿದ್ಯಾರ್ಥಿಗಳಿಗೆ ಅನುಮತಿ ಇಲ್ಲ: ಸಿಎಂ ಸಿದ್ದರಾಮಯ್ಯ

ಕೇಸರಿ ಶಾಲು ಹಾಕಿದರೆ ಪ್ರವೇಶವಿಲ್ಲ

ಮೈಸೂರು: ನಮ್ಮಲ್ಲಿ ಸದ್ಯಕ್ಕೆ ಆಚರಣೆಯಲ್ಲಿ ಇರುವ ಪದ್ಧತಿಗಳನ್ನು ಅನುಕರಣೆ ಮಾಡಲು ಅವಕಾಶ ಇದೆ. ಹೊಸ ಪದ್ಧತಿಗಳಿಗೆ ಅವಕಾಶವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಹಿಜಾಬ್ ಮರುಸ್ಥಾಪನೆ ಕುರಿತು ಮೈಸೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಹಿಜಾಬ್ ಒಂದೇ ಅಲ್ಲ, ಜನಿವಾರ, ಶಿವವಾರ, ರುದ್ರಾಕ್ಷಿ ಎಲ್ಲವನ್ನು 12ನೇ ತರಗತಿವರೆಗೆ ಮಾತ್ರ ಹಾಕಲು ಅವಕಾಶ ಇದೆ. ಆದರೆ, ಕೇಸರಿ ಶಾಲು ಹಾಕಿಕೊಳ್ಳಲು ಅವಕಾಶ ಇಲ್ಲ. ಆದರೆ, ಕೇಸರಿ ಪೇಟ ಹಾಕಿಕೊಳ್ಳಲು ಅವಕಾಶ ಇದೆ ಎಂದರು.

ಶಾಲೆಗಳಿಗೆ ಕೇಸರಿ ಶಾಲು ಹಾಕಿಕೊಂಡು ಬರುವಂತಿಲ್ಲ. ಕೇಸರಿ ಪೇಟಕ್ಕೂ ಕೂಡ ಅವಕಾಶ ಇಲ್ಲ. ಮೊದಲಿನಿಂದ ಯಾವ ಪೇಟಗಳಿವೆ ಆ ಪೇಟಗಳಿಗಷ್ಟೇ ಅವಕಾಶ. ಈಗ ಪೇಟಕ್ಕೆ ಬಣ್ಣದ ಬದಲಾವಣೆ ಮಾಡಿಕೊಂಡರೆ ಅವಕಾಶ ಮಾಡಿಕೊಡುವುದಿಲ್ಲ. ನಾವು ಹಿಜಾಬ್‌ಗೆ ಮಾತ್ರ ಅವಕಾಶ ಕೊಟ್ಟಿಲ್ಲ. ಜನಿವಾರ, ಶಿವದಾರ ಪೇಟಕ್ಕು ಅವಕಾಶ ಕೊಟ್ಟಿದ್ದೇವೆ. ಆದರೆ ಹೊಸ ರೂಪದ ಪೇಟಕ್ಕೆ ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದರು.

ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಿತ ಬಳಕೆ ಹಿನ್ನೆಲೆ ಪ್ರಧಾನಿಯವರು ತಮ್ಮ ಬೆಂಗಾವಲು ವಾಹನ ಕಡಿಮೆ ಮಾಡಿರುವ ಕುರಿತು ರಾಜ್ಯದಲ್ಲಿ ಇದನ್ನು ಬೆಂಬಲಿಸುವ ಬಗ್ಗೆ ಮಾತನಾಡಿದ ಅವರು, ಈ ಬಗ್ಗೆ ಬೇರೆ ರಾಜ್ಯಗಳಲ್ಲಿನ ಪ್ರಕ್ರಿಯೆಗಳನ್ನು ಪರಿಶೀಲನೆ ಮಾಡುತ್ತೇವೆ. ಆದರೆ, ಪ್ರಧಾನಿಯವರ ಮಿತ ಬಳಕೆ ಹೇಳಿಕೆ ಸರಿಯಲ್ಲ. ಇದೊಂದು ತಾತ್ಕಾಲಿಕ ಪರಿಹಾರ. ಸದ್ಯ ಈ ಪರಿಸ್ಥಿತಿಯಲ್ಲಿ ಪ್ರಧಾನಿ ಬೇರೆ ದೇಶಗಳ ಜತೆ ಮಾತನಾಡಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ: ಸಿಇಟಿಯನ್ನು ನಾವು ಜವಾಬ್ದಾರಿಯುತವಾಗಿ ಮಾಡಿದ್ದೇವೆ. ಅಷ್ಟೇ ಜವಾಬ್ದಾರಿಯಿಂದ ಇವರು ನೀಟ್ ಪರೀಕ್ಷೆ ಮಾಡಬೇಕಿತ್ತು. ಇವರು ಮಕ್ಕಳ ಪರೀಕ್ಷೆಯನ್ನೂ ಹಾಳು ಮಾಡಿದ್ದಾರೆ. ಎಲ್ಲಾ ಮಾಧ್ಯಮಗಳು ಮೊದಲು ಕೇಂದ್ರ ಸರಕಾರವನ್ನು ಟೀಕಿಸಬೇಕು. ನೀಟ್ ಪರೀಕ್ಷೆಯನ್ನು ಸರಿಯಾಗಿ ಮಾಡಿಲ್ಲ. ಕಷ್ಟಪಟ್ಟು ಓದಿ ಬರೆದ ವಿದ್ಯಾರ್ಥಿಗಳ ಭವಿಷ್ಯ ಹಾಳು ಆಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> ಕೇರಳ ಸಿಎಂ ರೇಸ್‌ನಲ್ಲಿ ವೇಣುಗೋಪಾಲ್ ಸೇರಿದಂತೆ ಹಲವರು ಇದ್ದರು. ಹೈಕಮಾಂಡ್ ಎಲ್ಲವನ್ನೂ ಅಳೆದು ತೂಗಿ ಸತೀಶನ್ ಅವರನ್ನು ಸಿಎಂ ಆಗಿ ಆಯ್ಕೆ ಮಾಡಿದೆ. ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ಹೈಕಮಾಂಡ್ ತೀರ್ಮಾನವೇ ಅಂತಿಮ. ಹೈಕಮಾಂಡ್ ನಿರ್ಧಾರವನ್ನು ನಾನು ಸ್ವಾಗತಿಸುತ್ತೇನೆ.
> -ಸಿದ್ದರಾಮಯ್ಯ, ಸಿಎಂ

ಬಿಜೆಪಿ ಕೊಡುಗೆ ಏನೂ ಇಲ್ಲ: ನಮ್ಮ ಕಾಲದಲ್ಲೇ ಮೈಸೂರಿನಲ್ಲಿ ಅತಿ ಹೆಚ್ಚು ಅಭಿವೃದ್ಧಿಯಾಗಿದೆ. ಮೊದಲ ಅವಧಿಯಲ್ಲಿ ಅತಿ ಹೆಚ್ಚಿನ ಅಭಿವೃದ್ಧಿ ಮಾಡಿದ್ದೇನೆ. ಈಗಲೂ ನಾವೇ ಅಭಿವೃದ್ಧಿ ಮಾಡುತ್ತಿದ್ದೇವೆ. ಬಿಜೆಪಿಯವರು ಬರೀ ಸುಳ್ಳು ಹೇಳಿಕೊಂಡು ಓಡಾಡುತ್ತಾರೆ. ಬಿಜೆಪಿಯವರು ಮೈಸೂರಿಗೆ ಯಾವ ಕೊಡುಗೆಯನ್ನು ಕೊಡಲಿಲ್ಲ. ಸುಳ್ಳು ಹೇಳುವುದಷ್ಟೇ ಬಿಜೆಪಿಯವರ ಕೆಲಸ. ಮೈಸೂರಿನ ಎಲ್ಲಾ ಅಭಿವೃದ್ಧಿ ಮಾಡಿದ್ದು ನಾವೇ. ಮುಂದೆಯೂ ನಾವೇ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದರು.

15ಕ್ಕೆ ರಚನೆ ನಿಶ್ಚಿತ ಎನ್ನಲು ನೀವ್ಯಾರು?

ಸಂಪುಟ ಪುನಾರಚನೆ ವಿಚಾರವಾಗಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ನನ್ನನ್ನು ಹೈಕಮಾಂಡ್ ಕರೆದಿಲ್ಲ. ಹೀಗಾಗಿ ಸದ್ಯಕ್ಕೆ ನಾನು ದೆಹಲಿಗೆ ಹೋಗುವುದಿಲ್ಲ. ನಾನು 15ರಂದು ದೆಹಲಿಗೆ ಹೋಗುತ್ತೇನೆಂದು ಹೇಳಿದವರು ಯಾರು. 15ರಂದೇ ಎಂಬ ನಿಶ್ಚಿತ ದಿನಾಂಕವನ್ನು ನೀವೆ ಯಾಕೆ ನಿಗದಿ ಮಾಡಿದ್ದೀರಾ?. ಹೈಕಮಾಂಡ್ ಕರೆದಾಗ ಹೋಗುತ್ತೇನೆ. ಸಂಪುಟ ಪುನಾರಚನೆ ಮಾಡುತ್ತೇನೆ. ಆ ಬಗ್ಗೆ ಚರ್ಚಿಸಲು ಹೈಕಮಾಂಡ್ ಕರೆದಾಗ ಹೋಗುತ್ತೇನೆ ಎಂದರು.

ನೀರು ಬೇಡ, ಎಳೆನೀರು ಕೊಡಿ: ಸಿದ್ದರಾಮಯ್ಯ

ವಿವಿಧ ಕಾಮಗಾರಿಗಳ ಅಭಿವೃದ್ಧಿ ವೀಕ್ಷಣೆ ಮಾಡಲು ಮೈಸೂರಿಗೆ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರಿಗಳ ಮೇಲೆ ಸಿಡಿಮಿಡಿಗೊಂಡರು. 'ಏ ಇವನ್ಯಾವನೋ ಬಿಸಿಲಲ್ಲಿ ಎಳನೀರು ತರಬೇಕಲ್ವಾ' ನೀರು ಕೊಡಲು ಬಂದಿದ್ದೀಯಾ ಎಂದು ಗದರಿದರು. ಎಂಜಿನಿಯರ್ ಒಬ್ಬರು ನೀರು ಕೊಡಲು ಬಂದಿದ್ದು, ಆಗ ಸಿಎಂ ಏ ಜ್ಯೂಸ್ ಇಲ್ವೇನಯ್ಯ ಎಂದು ಕೇಳಿದ್ದಾರೆ. ಏ ಇವನ್ಯಾವನೋ ಬಿಸಿಲಲ್ಲಿ ಎಳನೀರು ತರಬೇಕಲ್ವಾ ಎಂದು ಗರಂ ಆಗಿದ್ದಾರೆ. ಜ್ಯೂಸ್ ಇಲ್ಲದ್ದಕ್ಕೆ ಕೊನೆಗೆ ಸಿಎಂ ನೀರನ್ನು ಕುಡಿಯದೇ ಹಾಗೇ ಮುಂದೆ ಸಾಗಿದರು.

ಕೇಸರಿ ಶಾಲು ಧಾರ್ಮಿಕ ಸಂಕೇತವಲ್ಲ

ಮಡಿಕೇರಿ: ರಾಜ್ಯ ಸರಕಾರ ಹಿಜಾಬ್‌ಗೆ ಅವಕಾಶ ನೀಡಿದ ವಿಚಾರದ ಬಗ್ಗೆ ಪರ ವಿರೋಧಿಗಳು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ, ಕೇಸರಿ ಶಾಲು ಯಾವುದೇ ಧಾರ್ಮಿಕ ಮೌಲ್ಯಗಳ ಸಂಕೇತವಾಗಿ ಹಿಂದೂಗಳು ಯಾವತ್ತು ಬಳಸಲ್ಲಿಲ್ಲ ಎಂಬ ವಿವಾದಾತ್ಮಕ ಹೇಳಿಕೆಯನ್ನು ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್ ಪೊನ್ನಣ್ಣ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಧಾರ್ಮಿಕ ಮೌಲ್ಯಗಳನ್ನು ಪಾಲಿಸಿಕೊಂಡು ಬರಬಹುದು. ಆದರೆ ಶಿಕ್ಷಣ ಸಂಸ್ಥೆಗಳಲ್ಲಿ ಹೊಸ ಪರಂಪರೆಗಳನ್ನು ಪ್ರಾರಂಭಿಸಲು ಅವಕಾಶ ಇರಬಾರದು ಎಂಬುದಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಯ ಭದ್ರತೆಯನ್ನು ಕಾಪಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂದು ಸರಕಾರ ತೀರ್ಮಾನ ಮಾಡಿದೆ ಎಂದು ಸಮರ್ಥನೆ ಮಾಡಿಕೊಂಡರು.

ಮೊನ್ನೆ ಪರೀಕ್ಷೆ ಬರೆಯಲು ಹೋದ ಸಂದರ್ಭದಲ್ಲಿ ಜನಿವಾರದ ವಿಚಾರದಲ್ಲಿ ಗಲಾಟೆ ಆಯ್ತು. ಜನಿವಾರ ಹಾಕಿಕೊಂಡು ಹೋಗುವವರನ್ನು ಬಿಡಬೇಕಾ ಬೇಡ್ವಾ? ಜನಿವಾರಕ್ಕೂ ಶಿಕ್ಷಣ ಭದ್ರತೆಗೂ ಯಾವುದೇ ಸಂಬಂಧ ಇಲ್ಲ. ಜನಿವಾರಕ್ಕೂ ಅವಕಾಶ ನೀಡಬೇಕು ಎಂದು ಆದೇಶ ಮಾಡಿದ್ದೇವೆ. ರುದ್ರಾಕ್ಷಿ ಮಾಲೆ ಹಾಕಿಕೊಂಡು ಬಂದವರನ್ನು ತಡೆಯಬಾರದು ಎಂದು ಆದೇಶ ಮಾಡಿದ್ದೇವೆ. ಹೀಗಿರುವಾಗ ಹಿಜಾಬ್ ಮಾತ್ರ ಬಿಡಬೇಕಾ? ಎಂದು ಪ್ರಶ್ನಿಸಿದರು.

ಸದನ ಕೇಸರಿಮಯ ಆಗಲಿದೆ

ಶಿವಮೊಗ್ಗ: ಹಿಜಾಬ್ ವಿಚಾರದಲ್ಲಿ ರಾಜ್ಯ ಸರಕಾರ ಹೈಕೋರ್ಟ್ ತೀರ್ಪನ್ನು ಉಲ್ಲಂಘನೆ ಮಾಡಿದ್ದು, ಶಾಲಾ-ಕಾಲೇಜಿಗೆ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದರೆ ರಾಜ್ಯದ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಮಾತ್ರವಲ್ಲದೆ ಕರ್ನಾಟಕದ ವಿಧಾನ ಮಂಡಲ ಕೂಡ ಕೇಸರಿಮಯವಾಗಲಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಎಚ್ಚರಿಕೆ ನೀಡಿದರು.

ರಾಜ್ಯ ಸರಕಾರ ಹೈಕೋರ್ಟ್‌ನ ಸ್ಪಷ್ಟವಾದ ತೀರ್ಪನ್ನು ಗಾಳಿಗೆ ತೂರಿದೆ. ಸಂವಿಧಾನ ಮತ್ತು ಕಾನೂನಿನ ಬಗ್ಗೆ ಸದಾ ಮಾತನಾಡುವ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಈಗ ಏನು ಮಾಡುತ್ತಿದ್ದಾರೆ? ಒಂದು ಕಡೆ ಸರ್ವ ಜನಾಂಗದ ಶಾಂತಿಯ ತೋಟ ಎಂದು ಹೇಳುತ್ತಲೇ, ಶಾಂತವಾಗಿರುವ ರಾಜ್ಯದಲ್ಲಿ ಹಿಂದೂ-ಮುಸ್ಲಿಂ ನಡುವೆ ಗೊಂದಲ ಸೃಷ್ಟಿಸಿ ಕೋಮು ಘರ್ಷಣೆಗೆ ಪ್ರಚೋದನೆ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ದಾವಣಗೆರೆ ಚುನಾವಣೆ ಸಂದರ್ಭದಲ್ಲಿ ಟಿಕೆಟ್ ಹಂಚಿಕೆ ವಿಚಾರವಾಗಿ ಅಸಮಾಧಾನಗೊಂಡಿದ್ದ ಮುಸ್ಲಿಂ ಸಮುದಾಯವನ್ನು ತೃಪ್ತಿಪಡಿಸಲು ಸರಕಾರ ಈ ನಿರ್ಧಾರ ಮಾಡಿದೆ. ಬಿಜೆಪಿ ಸರಕಾರದ ಸಮವಸ್ತ್ರ ನೀತಿಯನ್ನು ಹೈಕೋರ್ಟ್ ಸ್ವಾಗತಿಸಿತ್ತು. ಆದರೆ ಈಗಿನ ಸರಕಾರ ಮುಸ್ಲಿಮರ ಓಲೈಕೆಗಾಗಿ ಹಳೇ ಆದೇಶವನ್ನು ಹಿಂಪಡೆದು ನ್ಯಾಯಾಂಗದ ಆದೇಶ ಉಲ್ಲಂಘಿಸಿದೆ. ಈ ಓಲೈಕೆಯ ನೀಚ ವ್ಯವಸ್ಥೆಯಿಂದಾಗಿಯೇ ಡಿಎಂಕೆ ಮಾದರಿಯಲ್ಲಿ ಕಾಂಗ್ರೆಸ್ ಸರಕಾರ ಕೂಡ ಪತನವಾಗಲಿದೆ ಎಂದು ಎಚ್ಚರಿಕೆ ನೀಡಿದರು.

ಮುಸ್ಲಿಂ ಓಲೈಕೆ ರಾಜಕಾರಣ

ಕಾರ್ಕಳ: ರಾಜ್ಯ ಕಾಂಗ್ರೆಸ್ ಸರಕಾರ ತನ್ನ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳಲು ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡಿ ಸಂವಿಧಾನ ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಅವಮಾನಿಸುತ್ತಿದೆ ಎಂದು ಮಾಜಿ ಸಚಿವ, ಶಾಸಕ ವಿ.ಸುನೀಲ್ ಕುಮಾರ್ ಸರಕಾರದ ವಿರುದ್ಧ ಕಿಡಿಕಾರಿದರು.

ಈ ಸಂಬಂಧ ಸುದ್ದಿಗಾರರ ಜತೆ ಮಾತನಾಡಿದ ಅವರು, ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ನಿಷೇಧದ ಆದೇಶವನ್ನು ವಾಪಸ್ ಪಡೆದ ಸರಕಾರದ ನಡೆಯನ್ನು ಕಟುವಾಗಿ ಟೀಕಿಸಿ, ಇದು ಕೇವಲ ಓಲೈಕೆ ರಾಜಕಾರಣದ ಪರಮಾವಧಿ. 2022ರಲ್ಲಿ ಜಾರಿಗೆ ತಂದಿದ್ದ ವಸ್ತ್ರಸಂಹಿತೆಯ ವಿಚಾರವು ಸದ್ಯ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಇಂತಹ ಸಂದರ್ಭದಲ್ಲಿ ತರಾತುರಿಯಲ್ಲಿ ಆದೇಶ ವಾಪಸ್ ಪಡೆದಿರುವುದು ಸಂವಿಧಾನ ವಿರೋಧಿ ಮಾತ್ರವಲ್ಲ, ನ್ಯಾಯಾಂಗ ನಿಂದನೆಯೂ ಹೌದು ಎಂದು ಕಿಡಿಕಾರಿದ್ದಾರೆ.

ದಾವಣಗೆರೆ ಉಪಚುನಾವಣೆ ಸಂದರ್ಭದಲ್ಲಿ ಮುಸ್ಲಿಂ ಸಮುದಾಯ ಕಾಂಗ್ರೆಸ್‌ಗೆ ಕೊಟ್ಟ ಕಪಾಳಮೋಕ್ಷದ ನೋವನ್ನು ಮರೆಯುವುದಕ್ಕಾಗಿ ಸಿದ್ದರಾಮಯ್ಯ ಸರಕಾರ ಈಗ ಒಂದಾದ ಮೇಲ್ಲೊಂದರಂತೆ ಮುಸ್ಲಿಂ ತುಷ್ಟೀಕರಣ ನಡೆಸುತ್ತಿದೆ. ಕಳೆದ ಬಾರಿ ಕ್ಯಾಬಿನೆಟ್ ಸಭೆಯಲ್ಲಿ ಮುಸ್ಲಿಂ ಕಾಲೋನಿಗಳ ಅಭಿವೃದ್ಧಿಗೆ ಕೋಟ್ಯಂತರ ರು.ಅನುದಾನ ಕೊಡಲಾಗಿತ್ತು. ಅದರ ಬೆನ್ನಲ್ಲೇ ಈಗ ಹಿಜಾಬ್‌ಗೆ ಅವಕಾಶ. ತನ್ನ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳುವುದಕ್ಕಾಗಿ ದೇಶದ ಸಮಗ್ರತೆ ಹಾಗೂ ಸಂವಿಧಾನವನ್ನು ಒತ್ತೆ ಇಡುವುದಕ್ಕೆ ಹೇಸದ ಕಾಂಗ್ರೆಸಿಗರಿಗೆ ಈಗ ಮತ್ತೆ ಹಿಜಾಬ್ ಧ್ಯಾನ ಶುರುವಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಇತ್ತೀಚೆಗೆ ನಡೆದ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಉಮೇಶ್ ಮೇಟಿ ಹಾಗೂ ಸಮರ್ಥ್ ಶಾಮನೂರು ಅವರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ವಿಧಾನಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ವೇಳೆ ಸಭಾಧ್ಯಕ್ಷ ಯು.ಟಿ.ಖಾದರ್, ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ, ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

ಯಾದಗಿರಿ ಜಿಲ್ಲೆಯಲ್ಲಿ ಮಳೆ: ಜನ ನಿಟ್ಟುಸಿರು

ಯಾದಗಿರಿ: ಜಿಲ್ಲೆಯ ಹಲವೆಡೆ ಗುರುವಾರ ಸಂಜೆ ಗಾಳಿ ಸಹಿತ ಭಾರೀ ಮಳೆ ಆಗಿದ್ದು, ಹಲವಾರು ಅವಾಂತರಗಳು ಸೃಷ್ಟಿ ಆಗಿವೆ.

ಬೇಸಿಗೆ ಬೇಸಿಲಿನ ತಾಪಕ್ಕೆ ಕಂಗೆಟ್ಟಿದ ಜನತೆ ತಂಪಿನ ವಾತಾವರಣದಿಂದಾಗಿ ಜನರು ನಿಟ್ಟಿಸಿರು ಬಿಟ್ಟಿದ್ದಾರೆ. ಶಹಾಪುರ, ಸುರಪುರ, ನಾರಾಯಣಪುರ, ವಡಗೇರಾ, ಸೈದಾಪುರ, ಗುರುಮಠಕಲ್ ತಾಲೂಕಿನಲ್ಲಿ ಮಳೆ ಆಗಿದೆ. ಗುಡುಗು ಸಿಡಿಲಿನ ಅರ್ಭಟದೊಂದಿಗೆ ಶಹಾಪುರದಲ್ಲಿಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು. ಚರಂಡಿ ನೀರು ರಸ್ತೆ ಮೇಲೆ ಹರಿದಿದ್ದರಿಂದ ವಾಹನ ಸವಾರರು ಹೈರಾಣಾದರು. ಇಂದು ಕೂಡ ಮಳೆ ಆಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಡತಗಳ ವಿಲೇವಾರಿಯಲ್ಲಿ ಮುಂಚೂಣಿ: ಸರಕಾರ ಸ್ಪಷ್ಟನೆ

ಬೆಂಗಳೂರು: ಗೃಹ, ಹಣಕಾಸು, ಕಂದಾಯ, ಆರ್‌ಡಿಪಿಆರ್ ಮತ್ತು ನಗರಾಭಿವೃದ್ಧಿಯಂತಹ ಇಲಾಖೆಗಳಲ್ಲಿ ಶೀಘ್ರದಲ್ಲೆ ಕಡತ ವಿಲೇವಾರಿ ಪ್ರಕ್ರಿಯೆ ನಡೆಯುತ್ತಿದೆ ಎಂದು ರಾಜ್ಯ ಸರಕಾರ ಸ್ಪಷ್ಟನೆ ನೀಡಿದೆ.

'ಚುರುಕಾಗದ ಆಡಳಿತ ಯಂತ್ರ ಜನ ಹೈರಾಣ' ಎಂಬ ಶೀರ್ಷಿಕೆಯಡಿ ದಿನಾಂಕ 14/05/2027 ರಂದು ವಿಶ್ವವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಗೆ ಪ್ರತಿಕ್ರಿಯೆ ನೀಡಿರುವ ರಾಜ್ಯ ಸರಕಾರ, ಶೇ.95ಕ್ಕೂ ಹೆಚ್ಚು ಕಡತಗಳು ಸಾಕಷ್ಟು ಇಲಾಖೆಗಳಲ್ಲಿ ವಿಲೇವಾರಿಯಾಗಿವೆ. ಕಡತಗಳ ವಿಲೇವಾರಿ ಮಾಡುವ ಪ್ರಕ್ರಿಯೆ ಹಲವು ಆಯಾಮಗಳನ್ನು ಒಳಗೊಂಡಿರುತ್ತದೆ. ಹಂತ ಹಂತವಾಗಿ ಕಡತಗಳು ವಿಲೇ ಮಾಡುವ ಪ್ರಕ್ರಿಯೆ ಸಕ್ರಿಯವಾಗಿರುತ್ತದೆ. ವಿಲೇವಾರಿ ಸಮಯ, ಫೈಲ್ ರಚನೆ ಆಧಾರದ ಮೇಲೆ ಕಡತಗಳನ್ನು ನಿಭಾಯಿಸಲಾಗುತ್ತದೆ. ಇ-ಆಫೀಸ್ ವ್ಯವಸ್ಥೆಯು ಕರ್ನಾಟಕದ ಆಡಳಿತ ಇತಿಹಾಸದಲ್ಲಿ ಮೊದಲ ಬಾರಿಗೆ ಫೈಲ್ ಚಲನೆ, ಸಂಸ್ಕರಣಾ ಸಮಯ ಸೂಚಿಗಳು ಮತ್ತು ಬಾಕಿ ಇರುವ ಕಡತಗಳ ಸಂಖ್ಯೆ ಗುರುತಿಸುವಿಕೆ ಮಾಡಲಾಗುತ್ತಿದೆ. ಹಿಂದಿನ ಕಾಗದ ಆಧಾರಿತ ವ್ಯವಸ್ಥೆಯ ಅಡಿಯಲ್ಲಿ, ಅಂತಹ ಯಾವುದೇ ಡೇಟಾ ಅಸ್ತಿತ್ವದಲ್ಲಿಲ್ಲ. ಅಥವಾ ಪ್ರಕಟಿಸಲು ಸಾಧ್ಯವಾಗಲಿಲ್ಲ ಎಂದು ಸ್ಪಷ್ಟನೆ ನೀಡಿದೆ.

ಚಿನ್ನ ಖರೀದಿಸಬೇಡಿಎಂಬ ಮೋದಿ ಹೇಳಿಕೆ ವಿರುದ್ಧ ಕಿಡಿ

ಹೆಣ್ಣುಮಕ್ಕಳು ಅರಿಶಿಣ ಕೊಂಬು ಧರಿಸಬೇಕೇ?: ವಿ.ಎಸ್.ಉಗ್ರಪ್ಪ

ರಾಮನಗರ: ಪ್ರಧಾನಿ ಮೋದಿ ಹೇಳಿದ್ದಾರೆಂದು ನಮ್ಮ ಹೆಣ್ಣು ಮಕ್ಕಳು ಚಿನ್ನದ ತಾಳಿ ಬದಲು ಅರಿಶಿಣದ ಕೊಂಬು ಧರಿಸಬೇಕೇ? ತನ್ನ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಮೋದಿ ದೇಶದ ಜನರಿಗೆ ಚಿನ್ನ ಖರೀದಿಸಬೇಡಿ ಎಂಬುದು ಸೇರಿದಂತೆ ಮಿತವ್ಯಯದ ಪಾಠ ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಕಿಡಿಕಾರಿದರು.

ಮದುವೆ ಸೇರಿದಂತೆ ಇತರ ಸಮಾರಂಭಗಳಿಗೆ ಹೆಣ್ಣು ಮಕ್ಕಳು ಚಿನ್ನ ಖರೀದಿಸುವುದು ಸಾಮಾನ್ಯ. ಆದರೆ, ನಮ್ಮ ಪ್ರಧಾನಿಗೆ ಹೆಣ್ಣು ಮಕ್ಕಳ ಸ್ಥಿತಿಯೇ ಅರ್ಥವಾಗುವುದಿಲ್ಲ ಬಿಡಿ ಎಂದು ನಗರದ ಚೈತನ್ಯ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

ಕೋವಿಡ್ ನಿರ್ವಹಣೆಯಲ್ಲೂ ವಿಫಲರಾಗಿದ್ದ ಮೋದಿ, ಆಗ ಜನರಿಗೆ ದೀಪ ಹಚ್ಚಲು ಮತ್ತು ತಟ್ಟೆ ಬಡಿಯಲು ಹೇಳಿ ನಗೆಪಾಟಲಿಗೆ ಈಡಾಗಿದ್ದರು. ಈಗ ಡಾಲರ್ ಎದುರು ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ ಕಂಡಿದೆ. ಚಿನ್ನ ಮತ್ತು ಇಂಧನ ದರ ಗಗನಕ್ಕೇರಿದೆ. 11 ವರ್ಷಕ್ಕೆ ಮುಂಚೆ 52 ಲಕ್ಷ ಕೋಟಿ ಇದ್ದ ದೇಶದ ಸಾಲ, ಮೋದಿ ಪ್ರಧಾನಿಯಾದ ಬಳಿಕ 216 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇದ್ದಕ್ಕಿದ್ದಂತೆ ಪ್ರಧಾನಿ ಮಿತವ್ಯಯದ ಸಂದೇಶ ನೀಡಲು ಕಾರಣವೇನು? ಅದಕ್ಕೆ ಮುಂಚೆ ಸಂಸತ್ತಿನಲ್ಲಿ ಈ ಬಗ್ಗೆ ವಿಶೇಷ ಅಧಿವೇಶನ ಕರೆಯಬೇಕಿತ್ತು. ಸರ್ವಪಕ್ಷಗಳ ಜೊತೆ ಚರ್ಚಿಸಬೇಕಿತ್ತು. ಆರ್ಥಿಕ ತಜ್ಞರ ಜೊತೆ ಸಮಾಲೋಚನೆ ನಡೆಸಬೇಕಿತ್ತು. ಅದ್ಯಾವುದನ್ನೂ ಮಾಡದ ಪ್ರಧಾನಿ, ನಾಗಪುರದ ಆರ್‌ಎಸ್‌ಎಸ್ ಕಚೇರಿಯಿಂದ ಬಂದ ಸೂಚನೆ ಹೇಳಿದರೆ ಎಂದು ಕುಹುಕವಾಡಿದರು.

ಮದರಸಾದಲ್ಲಿ ಮಕ್ಕಳಿಗೆ ಹಿಂಸೆ

ತುಮಕೂರು: ಮದರಸಾದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಬಿಹಾರ ಮೂಲದ 24 ಮಕ್ಕಳನ್ನು ಕಟ್ಟಡ ಕಟ್ಟುವ ಕೆಲಸಕ್ಕೆ ಬಳಸಿಕೊಂಡು ದೈಹಿಕ ಹಿಂಸೆ ನೀಡಿದ ಆರೋಪದ ಮೇರೆಗೆ ತಾಲೂಕಿನ ಅಮಲಾಪುರದ ಜಾಮೀಯಾ ಅರೇಬಿಯಾ ಹಸೀನಿಯಾ ಟ್ರಸ್ಟ್ (ಮದರಸಾ) ಶಿಕ್ಷಕ ಮೌಲಾಲಿ ವಿರುದ್ಧ ಪ್ರಕರಣ ದಾಖಲಾಗಿದೆ.

ಮದರಸಾದಲ್ಲಿ ಶಿಕ್ಷಣ ಕೊಡುವ ಉದ್ದೇಶದಿಂದ ಬಿಹಾರ ಮೂಲದ 8 ರಿಂದ 14 ವರ್ಷದ 24 ಮಕ್ಕಳನ್ನು ಕರೆದುಕೊಂಡು ಬರಲಾಗಿತ್ತು. ಅಲ್ಲಿ ಸರಿಯಾಗಿ ಮಕ್ಕಳನ್ನು ನೋಡಿಕೊಳ್ಳುತ್ತಿರಲಿಲ್ಲ. ಗುಣಮಟ್ಟದ ಆಹಾರ ನೀಡುತ್ತಿರಲಿಲ್ಲ, ಹಲ್ಲೆ ನಡೆಸುತ್ತಿದ್ದರು ಎಂಬ ಆರೋಪ ಕೇಳಿ ಬಂದಿದೆ. ಕಳೆದ ಏ. 19ರಂದು 24 ಮಕ್ಕಳು ಮದರಸಾದಿಂದ ತಪ್ಪಿಸಿಕೊಂಡು ಹೋಗಿದ್ದರು. ಬೆಂಗಳೂರಿನ ಕೆಆರ್‌ಎಸ್ ರೈಲು ನಿಲ್ದಾಣದಲ್ಲಿ ರೈಲ್ವೆ ಪೊಲೀಸರು ಅವರನ್ನು ರಕ್ಷಿಸಿ, ಮಕ್ಕಳ ಸಹಾಯವಾಣಿ ಕೇಂದ್ರದ ಸಿಬ್ಬಂದಿಗೆ ಒಪ್ಪಿಸಿದ್ದರು. ಅಲ್ಲಿಂದ ಅವರನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸೇರಿಸಲಾಗಿತ್ತು. ಏ.23 ರಂದು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಆಪ್ತ ಸಮಾಲೋಚನೆ ನಡೆಸಿದಾಗ ಮದರಸಾದಲ್ಲಿ ಹಿಂಸೆ ನೀಡುತ್ತಿದ್ದ ವಿಚಾರ ತಿಳಿದುಬಂದಿದೆ.

ನಿರಂತರ ಕಿರುಕುಳ: ಮಕ್ಕಳು ಅಳಲು

ಮದರಸಾದಲ್ಲಿ ಗೋಡೆ ಕಟ್ಟುವ ಕೆಲಸ ನಡೆಯುತ್ತಿದ್ದು, ನಮ್ಮಿಂದ ಕೆಲಸ ಮಾಡಿಸುತ್ತಿದ್ದರು. ನಮಗೆ ಹುಳು ಇರುವ ಅನ್ನ ಕೊಡುತ್ತಿದ್ದರು. ಊರಿಗೆ ಹೋಗುತ್ತೇವೆ ಎಂದರೆ ಹೊಡೆಯುತ್ತಿದ್ದರು. ಇದನ್ನು ತಡೆಯಲಾಗದೆ ಅಲ್ಲಿಂದ ಓಡಿ ಬಂದಿದ್ದೇವೆ ಎಂದು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳ ಮುಂದೆ ಮಕ್ಕಳು ಅಳಲು ತೋಡಿಕೊಂಡಿದ್ದಾರೆ.

ಬೆಂಗಳೂರು ರೈಲು ನಿಲ್ದಾಣದ ಮಕ್ಕಳ ಸಹಾಯವಾಣಿ ಕೇಂದ್ರದ ಮೇಲ್ವಿಚಾರಕ ನಾಗಭೂಷಣ್ ನೀಡಿದ ದೂರಿನ ಮೇರೆಗೆ ಬೆಂಗಳೂರು ರೈಲ್ವೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ನಂತರ ಪ್ರಕರಣವನ್ನು ತುಮಕೂರು ಗ್ರಾಮಾಂತರ ಠಾಣೆಗೆ ವರ್ಗಾಯಿಸಲಾಗಿದೆ.

ಸುದೀರ್ಘ ಐದು ಗಂಟೆ ವಿಚಾರಣೆಯಲ್ಲಿ 50ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದ ವಚನಾನಂದ ಸ್ವಾಮೀಜಿ

ಪೋಕ್ಸೊ ಪ್ರಕರಣ, ವಿಚಾರಣೆಗೆ ಹಾಜರಾದ ವಚನಶ್ರೀ

ಹರಿಹರ: ಇಲ್ಲಿನ ಪಂಚಮಸಾಲಿ ಪೀಠದ ವಚನಾನಂದ ಶ್ರೀಗಳ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಶ್ರೀಗಳು ಗುರುವಾರ ಹರಿಹರ ಗ್ರಾಮೀಣ ಪೊಲೀಸ್ ಠಾಣೆಗೆ ಹಾಜರಾಗಿ, ಐದು ಗಂಟೆಗಳ ಪೊಲೀಸರು ಕೇಳಿದ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸಿದರು. ಗ್ರಾಮೀಣ ಪೊಲೀಸರು ವಿಚಾರಣೆ ನಡೆಸಿ, ನಂತರ ನಗರದ ಸರಕಾರಿ ಆಸ್ಪತ್ರೆಗೆಯಲ್ಲಿ ವೈದ್ಯಕೀಯ ತಪಾಸಣೆಗೊಳಪಡಿಸಿ ಮರಳಿ ಮಠಕ್ಕೆ ಕಳುಹಿಸಿದರು.

2024ರ ಮಾರ್ಚ್ 20 ರಂದು ಮಠದ ವಿದ್ಯಾರ್ಥಿ ನಿಲಯದಲ್ಲಿನ ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಆರೋಪಿಸಿ, ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಶ್ಯಾಬಳ ಗ್ರಾಮದ ರೇಖಾ ನಾಗನಗೌಡ ಮರಿಗೌಡ್ರ ಅವರು ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಮೇ 8 ರಂದು ನೀಡಿದ್ದ ದೂರಿನನ್ವಯ, ಗುರುವಾರ ವಚನಾನಂದ ಸ್ವಾಮೀಜಿ ಅವರನ್ನು ಪೊಲೀಸರು ಠಾಣೆಗೆ ಕರೆತಂದು ವಿಚಾರಣೆ ನಡೆಸಿದರು. ಪೋಕ್ಸೊ ಸಂಬಂಧಿಸಿದ ಪ್ರಕರಣವಾಗಿರುವ ಕಾರಣ ಲಕ್ಷ್ಮೇಶ್ವರದಿಂದ ಹರಿಹರ ಠಾಣೆಗೆ ಪ್ರಕರಣ ವರ್ಗವಾಗಿದ್ದು, ದಾವಣಗೆರೆ ಗ್ರಾಮೀಣ ಡಿವೈಎಸ್‌ಪಿ ಜಿ.ಎಸ್.ಬಸವರಾಜ್, ಗ್ರಾಮೀಣ ವೃತ್ತ ನಿರೀಕ್ಷಕ ಸುರೇಶ್ ಸಗರಿ, ಮಹಿಳಾ ಪಿಎಸ್‌ಐ ಮಂಜುಳಾ ಅವರು ಕೇಳಿದ ಸುಮಾರು 50ಕ್ಕೂ ಅಧಿಕ ಪ್ರಶ್ನೆಗಳಿಗೆ ಶ್ರೀಗಳು ಉತ್ತರಿಸಿದ್ದಾರೆಂದು ತಿಳಿದುಬಂದಿದೆ.

ಸರಕಾರಿ ಆಸ್ಪತ್ರೆಗೆಯಲ್ಲಿ ವೈದ್ಯಕೀಯ ತಪಾಸಣೆಗೆ ಹಾಜರಾದ ವಚನಾನಂದ ಶ್ರೀ.

ಸತತ 5 ಗಂಟೆ ವಿಚಾರಣೆ: ಪೀಠದಿಂದ ಕೂಗಳತೆಯ ದೂರದ ಹನಗವಾಡಿ ಸರಕಾರಿ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಾಗಿ ಸೇರ್ಪಡೆಗೊಂಡು, 2021 ರಿಂದ 2024 ರ ಅವಧಿಯಲ್ಲಿ ಪೀಠದ ವಿದ್ಯಾರ್ಥಿನಿಲಯದಲ್ಲಿದ್ದ ಬಾಲಕರು ನಿತ್ಯ ಜಳಕ ಮಾಡುವ ಸಮಯದಲ್ಲಿ, ಅವರೊಂದಿಗೆ ಶ್ರೀಗಳು ಜಳಕಕ್ಕೆ ತೆರಳಿ ವಿದ್ಯಾರ್ಥಿಗಳ ಖಾಸಗಿ ಅಂಗಾಂಗ ಮುಟ್ಟುತ್ತಿದ್ದರಲ್ಲದೆ, ಅವರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದರೆಂದು ದೂರಿನಲ್ಲಿ ಧಾಖಲಾಗಿದೆ. ಗುರುವಾರ ಬೆಳಗ್ಗೆ 9 ಗಂಟೆಗೆ ಠಾಣೆಗೆ ಶ್ರೀಗಳನ್ನು ಕರೆತಂದಿದ್ದ ಪೊಲೀಸರು ಮಧ್ಯಾಹ್ನ 2-30 ರವರೆಗೆ ಸುದೀರ್ಘವಾಗಿ ವಿಚಾರಣೆ ನಡೆಸಿದರು. ಗುತ್ತೂರು ಗ್ರಾಮೀಣ ಠಾಣೆಗೆ ವಿಚಾರಣೆಗಾಗಿ ಶ್ರೀಗಳನ್ನು ಕರೆತಂದಿರುವ ಸುದ್ದಿ ಹಬ್ಬುತ್ತಿದಂತೆ ಠಾಣೆಯ ಎದುರು ಶ್ರೀಗಳ ಪರವಾಗಿ ಜಯಘೋಷ ಹಾಕಿ, ಟ್ರಸ್ಟ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷ ಗಂಗಾಧರಪ್ಪ, ಜಿ.ನಂಜಪ್ಪ, ನ್ಯಾಯವಾದಿ ರುದ್ರಗೌಡ, ಶಿವಕುಮಾರ, ರಾಣಿಬೆನ್ನೂರಿನ ಸಿದ್ದು ಚಿಕ್ಕಬಿದರಿ, ಗಿರೀಶ್ ಬುಡ್ಡನಗೌಡ್ರ, ಮಹೇಶ್ ಬನ್ನಿಕೊಡು, ಸಿದ್ದೇಶ್ ಬನ್ನಿಕೊಡು, ರಾಗಿಣ, ಜಿಗಳಿ ಮಂಜುನಾಥ, ಶಿಕ್ಷಕ ಮುದ್ದಿಹನುಮಂತಪ್ಪ, ದೀಟೂರು ಕಲ್ಲೇಶಪ್ಪ ಇತರರು ಟ್ರಸ್ಟಿಗಳ ವಿರುದ್ಧ ಧಿಕ್ಕಾರ ಕೂಗಿದರು.

ಟ್ರಸ್ಟಿಗಳು ನಡೆಸಿರುವ ಷಡ್ಯಂತ್ರಕ್ಕೆ ಇದು ಸಾಕ್ಷಿ

ಪೀಠದಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಭಂದಿಸಿದಂತೆ ಭಕ್ತರು, ದಾನಿಗಳು, ಸಮಾಜ ಬಾಂಧವರು ಟ್ರಸ್ಟಿಗಳ ವಿರುದ್ಧ ಲೆಕ್ಕ ಕೊಡಿ ಚಳವಳಿ ಆರಂಭಿಸಿದ್ದೇವೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀಗಳು ನಮ್ಮನ್ನು ಬೆಂಬಲಿಸಿದ್ದಾರೆಂದು ಟ್ರಸ್ಟಿಗಳು ಶ್ರೀಗಳ ವಿರುದ್ಧ ಸಂಚು ರೂಪಿಸಿ ಇಲ್ಲಸಲ್ಲದ ಆರೋಪ ಮಾಡಿ ಸುಳ್ಳು ಕೇಸ್ ದಾಖಲಿಸಿದ್ದಾರೆ. ಹಣಬಲದಿಂದ ಟ್ರಸ್ಟಿಗಳು ಹೀಗೆ ಮಾಡುತ್ತಿದ್ದಾರೆ. ನಮಗೆ ಭಕ್ತರ ಬೆಂಬಲವಿದ್ದು, ಸತ್ಯಕ್ಕೆ ಯಾವಾಗಲೂ ಜಯ ಸಿಕ್ಕೇ ಸಿಗುತ್ತದೆ. ಶ್ರೀಗಳು ನಿರ್ದೋಷಿಯಾಗುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದು ಲೆಕ್ಕಕೊಡಿ ಚಳವಳಿ ಅಧ್ಯಕ್ಷ ಎಂ.ಜಿ.ಪರಮೇಶ್ವರಗೌಡ್ರು ಮಾಹಿತಿ ನೀಡಿದರು.

> ನಾವು ಕಾನೂನನ್ನು ಗೌರವಿಸುತ್ತೇವೆ. ಕಾನೂನನ್ನು ಪರಿಪಾಲಿಸುತ್ತೇವೆ. ಕಾನೂನನ್ನು ಗೌರವಿಸಿ ಇಂದು ವಿಚಾರಣೆಗೆ ಹಾಜರಾಗಿ ಸಹಕರಿಸಿದ್ದೇನೆ. ಸತ್ಯಕ್ಕೆ ಯಾವಾಗಲೂ ಜಯ ಸಿಕ್ಕೇ ಸಿಗುತ್ತದೆ ಎಂಬ ವಿಶ್ವಾಸ ನನಗಿದೆ.
> - ವಚನಾನಂದ ಸ್ವಾಮೀಜಿ
> ಪಂಚಮಸಾಲಿ ಜಗದ್ಗುರು ಪೀಠ ಹರಿಹರ.

ಸರಕಾರಿ ವೈದ್ಯರ ಸ್ಪಷ್ಟನೆ

ಠಾಣೆಯಲ್ಲಿ ನಡೆದ ಸತತ 5 ಗಂಟೆಗಳ ವಿಚಾರಣೆ ಮುಗಿದ ನಂತರ, ಪೊಲೀಸರು ನೀಡಿದ ಸೂಚನೆ ಮೇರೆಗೆ ನಗರದ ಸಾರ್ವಜನಿಕ ಆಸ್ಪತ್ರೆಗೆ ತೆರಳಿದ ಶ್ರೀಗಳನ್ನು, ಡಾ.ರಾಘವೇಂದ್ರ ದುರುಗೋಜಿ ಅವರು ವೈದ್ಯಕೀಯ ತಪಾಸಣೆ ನಡೆಸಿದರು. ನಂತರ ಮಾಧ್ಯಮದವರೊಂದಿಗೆ ವೈದ್ಯರು ಮಾತನಾಡಿ, ಶ್ರೀಗಳು ದೈಹಿಕವಾಗಿ ಸದೃಢರಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ತಪಾಸಣೆ ನಡೆಸಿದ್ದು, ಅವರ ಉಗುರು, ಕೂದಲು ಸೇರಿದಂತೆ ಬೇಕಾದ ಮಾದರಿ ಸಂಗ್ರಹಿಸಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. 15 ದಿನಗಳ ನಂತರ ವರದಿ ಬಂದ ನಂತರ ಪೊಲೀಸರಿಗೆ ಮಾಹಿತಿ ನೀಡಲಾಗುವುದು ಎಂದು ಆಸ್ಪತ್ರೆಯ ವೈದ್ಯ ಡಾ. ರಾಘವೇಂದ್ರ ಮಾಹಿತಿ ನೀಡಿದರು.

ಸಂಪಾದಕೀಯ

ಇದು ಸ್ವರ್ಣ ಕಾಲವಲ್ಲ

ಚಿನ್ನ ಬೆಳ್ಳಿ ಖರೀದಿ ಕಡಿಮೆ ಮಾಡಿ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರಜೆಗಳಲ್ಲಿ ವಿನಂತಿ ಮಾಡಿಕೊಂಡ ಬೆನ್ನಲ್ಲೇ, ಚಿನ್ನದ ತೆರಿಗೆ ಏರಿಕೆ ಮಾಡಲಾಗಿದೆ. ಚಿನ್ನ ಹಾಗೂ ಬೆಳ್ಳಿಯ ಮೇಲಿನ ಆಮದು ಸುಂಕನ್ನು ಶೇ.15ರಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ದೇಶೀಯ ಮಾರುಕಟ್ಟೆಯಲ್ಲಿ ಚಿನ್ನ ಹಾಗೂ ಬೆಳ್ಳಿಯ ದರಗಳು ದುಬಾರಿಯಾಗಲಿವೆ ಎಂಬ ನಿರೀಕ್ಷೆಯಿತ್ತು. ಆದರೆ ನಿರೀಕ್ಷೆಗೂ ಮೀರಿ, ಆಮದು ಸುಂಕ ಏರಿಕೆ ಘೋಷಣೆಯಾದ ಬೆನ್ನಲ್ಲೇ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ದಿಡೀರ್ ಜಿಗಿತ ದಾಖಲಿಸಿದೆ. ಚಿನ್ನ ಗ್ರಾಂಗೆ 735 ರೂ. ಹಾಗೂ ಬೆಳ್ಳಿ ದರ ಕಿಲೋಗೆ 20,000 ರೂ ಏರಿಕೆ ಕಂಡಿದೆ. ವಿದೇಶಿ ವಿನಿಮಯ ಸಂಗ್ರಹವನ್ನು ಕಾಪಾಡಿಕೊಳ್ಳಲು ಚಿನ್ನ ಖರೀದಿ ಇಳಿಕೆ ಹಾಗೂ ಆಮದು ಸುಂಕ ಏರಿಕೆ ಮಾಡುವುದು ಅನಿವಾರ್ಯ ಆಗಿದೆ ಎಂದು ಕೇಂದ್ರ ಸರಕಾರ ಹೇಳುತ್ತಿದೆ. ಅಮೆರಿಕ- ಇರಾನ್ ಯುದ್ಧ, ಹಾರ್ಮುಜ್ ಜಲಸಂಧಿಯ ದಿಗ್ಬಂಧನದ ಪರಿಣಾಮವಿದು. ಇದರಿಂದ ಆಗಿರುವ ಕಚ್ಚಾ ತೈಲ ಬೆಲೆ ಏರಿಕೆಯಿಂದ ಫಾರೆಕ್ಸ್ ಸಂಗ್ರಹದ ಮೇಲೆ ಉಂಟಾಗಿರುವ ದುಷ್ಪರಿಣಾಮವನ್ನು ಪ್ರಜೆಗಳ ಮೇಲೆ ಹೇರಲು ಸಾಧ್ಯವಿಲ್ಲದುದರಿಂದ, ಸರ್ಕಾರ ಪರ್ಯಾಯ ಕ್ರಮಗಳನ್ನುಕೈಗೊಳ್ಳುತ್ತಿದೆ. ಇಂಥ ಸಂಕಷ್ಟದ ಸಮಯದಲ್ಲಿ ಸರ್ಕಾರದ ಜೊತೆಗೆ ನಿಲ್ಲುವುದು ಪ್ರಜೆಗಳ ಕರ್ತವ್ಯ. ಆದರೆ ಸರ್ಕಾರದ ದಿಡೀರ್ ಕ್ರಮಗಳು ಪ್ರಜೆಗಳಲ್ಲಿ ಆತಂಕ ಮೂಡಿಸುತ್ತವೆ. ಯುದ್ಧದಿಂದ ಇಂಥ ಪರಿಣಾಮ ಆಗಲಿದೆ ಎಂದು ಗೊತ್ತಿದ್ದರೂ ವಿದೇಶಿ ವಿನಿಮಯ ಸಂಗ್ರಹದ ಪ್ರಮಾಣವನ್ನು ಹೆಚ್ಚಿಸದೆ ಹೋದದ್ದು ಖಂಡಿತವಾಗಿಯೂ ಪ್ರಮಾದ. ಅತ್ತ ಡಾಲರ್ ಎದುರು ರೂಪಾಯಿ ಮೌಲ್ಯವೂ ಕುಸಿಯುತ್ತಿದೆ. ಇದರಿಂದ ಹಣದುಬ್ಬರ ಖಚಿತ. ಬೆಲೆ ಏರಿಕೆಯ ಹೊಡೆತಗಳಿಂದ ಖಂಡಿತವಾಗಿಯೂ ದೇಶದ ಸಾಮಾನ್ಯ ನಾಗರಿಕ ನಲುಗಲಿದ್ದಾನೆ. ಆದರೆ ಚಿನ್ನದ ವಿಚಾರ ಬೇರೆ. ಅದು ಭಾರತೀಯ ಮಧ್ಯಮ, ಕೆಳ, ಶ್ರೀಮಂತ ಹೀಗೆ ಎಲ್ಲ ವರ್ಗದ ಮಹಿಳೆಯರ ನಿತ್ಯಸಂಗಾತಿ. ಒಂದೆಳೆ ಚಿನ್ನವೂ ಇಲ್ಲದೆ ಯಾವ ಮಹಿಳೆಯೂ ಇರಲು ಇಷ್ಟಪಡುವುದಿಲ್ಲ. ಹೀಗೆ ಅದು ಮಹಿಳೆಯರ ಭಾವನಾತ್ಮಕ ಸಂಗಾತಿಯಾಗಿರುವಂತೆ, ಹೂಡಿಕೆಯ ಸಂಗತಿಯೂ ಹೌದು. ಇಂಥ ಚಿನ್ನದೊಂದಿಗೆ ಸರಸ ಆಡುವುದು ಅಷ್ಟೇನೂ ಒಳ್ಳೆಯದಲ್ಲ. ವಿದೇಶಿ ವಿನಿಮಯ ಹೆಚ್ಚಿಸಲು ಬೇರೆ ದಾರಿಗಳನ್ನು ಕಂಡುಕೊಳ್ಳುವ ಸಾಧ್ಯತೆಗಳಿದ್ದರೆ, ಅಂಥ ಹಾದಿಗಳನ್ನು ಶೋಧಿಸಬೇಕು. ಇದೇ ವೇಳೆಗೆ, ಪ್ರಜೆಗಳೂ ಒಟ್ಟಾರೆ ದೇಶದ ಸುರಕ್ಷತೆಗಾಗಿ ಚಿನ್ನದ ಆಸೆಯನ್ನು ಮಿತಿಯಲ್ಲಿಟ್ಟುಕೊಳ್ಳುವುದು ಅಪೇಕ್ಷಣೀಯ.

ಸೊಂಪಾದಕೀಯ

ಜ್ಯೋತಿಷಿಯ ವಿಶೇಷ ಕರ್ತವ್ಯ

ತಮಿಳುನಾಡಿನ ಹೊಸ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು, ತಾವು ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಿಸಿಕೊಂಡಿದ್ದ ಜ್ಯೋತಿಷಿ ರಿಕಿ ರಾಧನ್ ಪಂಡಿತ್ ಅವರ ನೇಮಕವನ್ನು ಒಂದೇ ದಿನದಲ್ಲಿ ರದ್ದುಗೊಳಿಸಿದ್ದಾರೆ. ಟಿವಿಕೆಯ ಮಿತ್ರ ಪಕ್ಷಗಳಾದ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳು ಈ ನೇಮಕದಿಂದ ಕೆರಳಿದ್ದೇ ಇದಕ್ಕೆ ಕಾರಣ. ದ್ರಾವಿಡ ಸರಕಾರದಲ್ಲಿ ಜ್ಯೋತಿಷಿಗೆ ಏನು ಕೆಲಸ ಎಂಬುದು ಇವರ ಅಭಿಪ್ರಾಯ ಇರಬಹುದು. ಜ್ಯೋತಿಷಿಗಳಿಗೆ ಸರಕಾರದಲ್ಲಿ ಯಾವ 'ವಿಶೇಷ ಕರ್ತವ್ಯ' ಇರಲು ಸಾಧ್ಯ ಎಂಬುದು ಒಂದು ಪ್ರಶ್ನೆಯೂ ಹೌದು. ಆದರೆ ಜ್ಯೋತಿಷಿಗಳನ್ನು ಸರಕಾರದಲ್ಲಿ ನೇಮಿಸಿಕೊಳ್ಳುವುದು ಒಳ್ಳೆಯದು. ಯಾವಾಗ ಯಾರು ಬೆಂಬಲ ಹಿಂದೆಗೆದುಕೊಳ್ಳುತ್ತಾರೆ, ಯಾವಾಗ ಯಾರು ಸಿಎಂ ಕುರ್ಚಿಯ ಕಾಲುಗಳನ್ನು ಎಳೆಯುವ ಕೆಲಸ ಮಾಡುತ್ತಾರೆ ಎಂಬುದನ್ನೆಲ್ಲ ಮುಂಚಿತವಾಗಿಯೇ ಹೇಳಿಕೊಡಲು ಒಬ್ಬರು ಇದ್ದರೆ ಒಳಿತಲ್ಲವೆ? ಆದರೆ ಇದನ್ನು ಸರಕಾರಿ ಹುದ್ದೆ ಇಲ್ಲದೆಯೂ ಮಾಡಬಹುದು. ಉದಾಹರಣೆಗೆ ಇಂದಿರಾ ಗಾಂಧಿ ಅವರಿಗೆ ಧೀರೇಂದ್ರ ಬ್ರಹ್ಮಚಾರಿ, ಪಿವಿ ನರಸಿಂಹ ರಾವ್ ಅವರಿಗೆ ಚಂದ್ರಾಸ್ವಾಮಿ ಇದ್ದ ಹಾಗೆ. ಇದಕ್ಕೆ ಕರ್ನಾಟಕದ ಕೆಲ ರಾಜಕಾರಣಿಗಳ ಉದಾಹರಣೆಯನ್ನೂ ಕೊಡಬಹುದು. ಹೆಸರು ಬೇಡ ಬಿಡಿ. ಜ್ಯೋತಿಷಿಗಳಿಗೂ ಇದು ಸಕಾಲ. ಒಬ್ಬ ಪ್ರಭಾವಿ ರಾಜಕಾರಣಿಯ ಹಿಂದೆ ಇದ್ದುಕೊಂಡು ಆತನ ಬೆಳವಣಿಗೆಯ ಬಗ್ಗೆ ಆಗಾಗ ಸೂಚನೆ ಕೊಡುತ್ತ ಇದ್ದರೆ ಮುಂದೊಂದು ದಿನ ಸಿಎಂ ಕುರ್ಚಿಯ ಅತ್ಯಂತ ಹತ್ತಿರದಲ್ಲಿ ಬಂದು ಕುಳಿತುಕೊಳ್ಳಬಹುದು. ಸರ್ಕಾರಿ ಹುದ್ದೆ ಇಲ್ಲದೆಯೂ ಈ 'ವಿಶೇಷ ಕರ್ತವ್ಯ'ವನ್ನು ನಿರ್ವಹಿಸಲು ಸಾಧ್ಯ. ವಿಜಯ್ ಈ ಕುರಿತು ಒಂದು ಮಾದರಿ ಹಾಕಿಕೊಟ್ಟಿದ್ದಾರೆ. ಇದನ್ನು ಮುಂದುವರಿಸುವತ್ತ ಇತರರೂ ಆಲೋಚಿಸಬಹುದು.

ಸಂಪಾದಕರ ಸದ್ಯಶೋಧನೆ

ಪಂಡಾ ಎಕ್ಸ್‌ಪ್ರೆಸ್ ಎಂದರೇನು?

ಅಮೇರಿಕ ಅಧ್ಯಕ್ಷರು ಚೀನಾಕ್ಕೆ ತೆರಳುವಾಗ ಪಂಡಾ ಎಕ್ಸ್‌ಪ್ರೆಸ್ ಫುಡ್‌ಗಳನ್ನು ಅಧ್ಯಕ್ಷರ ಅಧಿಕೃತ ವಿಮಾನ ಏರ್ ಫೋರ್ಸ್ ಒನ್‌ನಲ್ಲಿ ಬಡಿಸಲಾಯಿತು ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಬಹುಚರ್ಚಿತ ವಿಷಯವಾಗಿದೆ. ಅಷ್ಟಕ್ಕೂ ಪಂಡಾ ಎಕ್ಸ್‌ಪ್ರೆಸ್ ಅಂದ್ರೆ ಏನು, ಅದರ ಖಾದ್ಯಗಳು ಯಾಕೆ ಅಷ್ಟು ಪ್ರಸಿದ್ಧ ಗಮನಿಸೋಣ. ಪಂಡಾ ಎಕ್ಸ್‌ಪ್ರೆಸ್ ಎಂಬುದು ಇಂದು ವಿಶ್ವದಾದ್ಯಂತ ಚಿರಪರಿಚಿತವಾಗಿರುವ ಅಮೇರಿಕನ್ -ಚೈನೀಸ್ ಪಾಕಪದ್ಧತಿಯ ದೈತ್ಯ ಸಂಸ್ಥೆ. ಈ ಸಂಸ್ಥೆಯ ಬೆಳವಣಿಗೆಯ ಕಥೆಯು ಕೇವಲ ಒಂದು ರೆಸ್ಟೋರೆಂಟ್‌ನ ಯಶಸ್ಸಿನ ಕಥೆಯಲ್ಲ. ಅದು ಪರಿಶ್ರಮ, ನಾವೀನ್ಯ ಮತ್ತು ಸಂಸ್ಕೃತಿಗಳ ಸಮ್ಮಿಲನದ ಅದ್ಭುತ ಪಯಣವಾಗಿದೆ. 1983ರಲ್ಲಿ ಕ್ಯಾಲಿಫೋರ್ನಿಯಾದ ಗ್ಲೆಂಡೇಲ್‌ನಲ್ಲಿ ಮೊದಲ ಬಾರಿಗೆ ಪ್ರಾರಂಭವಾದ ಈ ಸಂಸ್ಥೆ, ಇಂದು ಸಾವಿರಾರು ಶಾಖೆಗಳನ್ನು ಹೊಂದಿದೆ. ಚೈನೀಸ್ ಆಹಾರವನ್ನು ಅಮೆರಿಕನ್ನರ ರುಚಿಗೆ ತಕ್ಕಂತೆ ಮಾರ್ಪಡಿಸಿ, ಅದನ್ನು 'ಫಾಸ್ಟ್ ಕ್ಯಾಶುವಲ್' ಶೈಲಿಯಲ್ಲಿ ನೀಡಿದ ಹೆಗ್ಗಳಿಕೆ ಈ ಸಂಸ್ಥೆಗೆ ಸಲ್ಲುತ್ತದೆ. ಈ ಸಂಸ್ಥೆಯ ಹಿಂದಿನ ಶಕ್ತಿ ಎಂದರೆ ಆಂಡ್ರ್ಯೂ ಚೆಂಗ್ ಮತ್ತು ಪೆಗ್ಗಿ ಚೆಂಗ್ ದಂಪತಿಗಳು. ಆಂಡ್ರ್ಯೂ ಅವರ ತಂದೆ ಮಿಂಗ್-ತ್ಸೈ ಚೆಂಗ್ ಅವರು ಚೀನಾದಲ್ಲಿ ತರಬೇತಿ ಪಡೆದ ಮಾಸ್ಟರ್ ಚೆಫ್ ಆಗಿದ್ದರು. ಅವರ ಪಾಕಶಾಲೆಯ ಜ್ಞಾನ ಮತ್ತು ಆಂಡ್ರ್ಯೂ ಅವರ ವ್ಯಾಪಾರ ಚಾತುರ್ಯ ಒಂದಾಗಿ ಪಂಡಾ ಎಕ್ಸ್‌ಪ್ರೆಸ್ ಜನ್ಮತಾಳಿತು. ಆರಂಭದಲ್ಲಿ ಇವರು 'ಪಂಡಾ ಇನ್' ಎಂಬ ಪೂರ್ಣ ಪ್ರಮಾಣದ ರೆಸ್ಟೋರೆಂಟ್ ನಡೆಸುತ್ತಿದ್ದರು. ಆದರೆ ಶಾಪಿಂಗ್ ಮಾಲ್‌ಗಳಲ್ಲಿ ತ್ವರಿತವಾಗಿ ಸಿಗುವ ಗುಣಮಟ್ಟದ ಆಹಾರದ ಅಗತ್ಯವನ್ನು ಮನಗಂಡ ಆಂಡ್ರ್ಯೂ, ಅದರ ಸಣ್ಣ ಆವೃತ್ತಿಯಾಗಿ ಪಂಡಾ ಎಕ್ಸ್‌ಪ್ರೆಸ್ ಅನ್ನು ಪರಿಚಯಿಸಿದರು. ಪಂಡಾ ಎಕ್ಸ್‌ಪ್ರೆಸ್‌ನ ಆಹಾರ ಪಟ್ಟಿಯಲ್ಲಿ ಅತ್ಯಂತ ಜನಪ್ರಿಯವಾದುದು ಎಂದರೆ 'ಆರೆಂಜ್ ಚಿಕನ್'. ಇದನ್ನು 1987ರಲ್ಲಿ ಚೆಫ್ ಆಂಡಿ ಕಾವೊ ಅವರು ಕಂಡುಹಿಡಿದರು. ಸಿಹಿ ಮತ್ತು ಹುಳಿಯ ಮಿಶ್ರಣದ ಈ ಖಾದ್ಯವು ಅದೆಷ್ಟು ಪ್ರಸಿದ್ಧವಾಯಿತು ಎಂದರೆ, ಇಂದು ಇದು ಪಂಡಾ ಎಕ್ಸ್‌ಪ್ರೆಸ್‌ನ ಪರ್ಯಾಯ ಹೆಸರಿನಂತಾಗಿದೆ. ಹುರಿದ ಕೋಳಿ ಮಾಂಸಕ್ಕೆ ಕಿತ್ತಳೆ ಹಣ್ಣಿನ ರಸದ ಘಮವಿರುವ ಸಾಸ್ ಸೇರಿಸಿ ತಯಾರಿಸುವ ಈ ಖಾದ್ಯವು ಅಮೆರಿಕನ್ ಮತ್ತು ಚೈನೀಸ್ ರುಚಿಯ ಅದ್ಭುತ ಸಂಗಮವಾಗಿದೆ. ಪ್ರತಿ ವರ್ಷ ಲಕ್ಷಾಂತರ ಕೆಜಿ ಆರೆಂಜ್ ಚಿಕನ್ ಇಲ್ಲಿ ಮಾರಾಟವಾಗುತ್ತದೆ. ಸಂಸ್ಥೆಯ ಯಶಸ್ಸಿನಲ್ಲಿ ತಂತ್ರಜ್ಞಾನದ ಪಾತ್ರವೂ ದೊಡ್ಡದಿದೆ. ಪೆಗ್ಗಿ ಚೆಂಗ್ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರಿಂದ, ರೆಸ್ಟೋರೆಂಟ್ ನಿರ್ವಹಣೆಯಲ್ಲಿ ಕಂಪ್ಯೂಟರ್ ವ್ಯವಸ್ಥೆಯನ್ನು ಅಳವಡಿಸಿದ ಮೊದಲ ಕೆಲವು ಸಂಸ್ಥೆಗಳಲ್ಲಿ ಪಂಡಾ ಎಕ್ಸ್‌ಪ್ರೆಸ್ ಕೂಡ ಒಂದು. ದಾಸ್ತಾನು ನಿರ್ವಹಣೆ, ಗ್ರಾಹಕರ ಆದ್ಯತೆಗಳ ವಿಶ್ಲೇಷಣೆ ಮತ್ತು ಮಾರಾಟದ ಅಂಕಿಅಂಶಗಳನ್ನು ಗಮನಿಸಲು ಅವರು ಸ್ವಂತ ತಂತ್ರಜ್ಞಾನವನ್ನು ಬಳಸಿದರು. ಇದು ವ್ಯವಹಾರವನ್ನು ಸುಗಮವಾಗಿ ನಡೆಸಲು ಮತ್ತು ವಿಸ್ತರಿಸಲು ಅವರಿಗೆ ಭದ್ರ ಬುನಾದಿಯನ್ನು ಒದಗಿಸಿತು.ಮಾಂಸಾಹಾರಿಗಳಿಗೆ ಮಾತ್ರವಲ್ಲದೇ, ಇತ್ತೀಚಿನ ವರ್ಷಗಳಲ್ಲಿ ಪಂಡಾ ಎಕ್ಸ್‌ಪ್ರೆಸ್ ಸಸ್ಯಾಹಾರಿಗಳಿಗೂ ಪ್ರಾಮುಖ್ಯ ನೀಡುತ್ತಿದೆ. ಕುಂಗ್ ಪಾವೊ ಟೋಫು ಅಥವಾ ಎಗ್ ರೋಲ್‌ಗಳಂಥ ಆಯ್ಕೆಗಳು ಇಲ್ಲಿ ಲಭ್ಯವಿವೆ. ಇತ್ತೀಚೆಗೆ ಅವರು 'ಬಿಯಾಂಡ್ ಮೀಟ್'ನೊಂದಿಗೆ ಕೈಜೋಡಿಸಿ ಸಸ್ಯ ಆಧಾರಿತ ಆರೆಂಜ್ ಚಿಕನ್ ಅನ್ನು ಸಹ ಪರಿಚಯಿಸಿದ್ದಾರೆ. ಇದು ಆಧುನಿಕ ಜಗತ್ತಿನ ಆಹಾರ ಪದ್ಧತಿಯ ಬದಲಾವಣೆಗೆ ತಕ್ಕಂತೆ ಸಂಸ್ಥೆ ತನ್ನನ್ನು ತಾನು ಹೇಗೆ ಬದಲಿಸಿಕೊಳ್ಳುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.ಪಂಡಾ ಎಕ್ಸ್‌ಪ್ರೆಸ್ ತನ್ನ ನೌಕರರ ಕಲ್ಯಾಣಕ್ಕೂ ಹೆಸರುವಾಸಿಯಾಗಿದೆ. ಇದನ್ನು ಅವರು 'ಪಂಡಾ ವೇ' ಎಂದು ಕರೆಯುತ್ತಾರೆ. ತಮ್ಮ ನೌಕರರಿಗೆ ವೈಯಕ್ತಿಕ ಅಭಿವೃದ್ಧಿ, ಶಿಕ್ಷಣ ಮತ್ತು ಉತ್ತಮ ವೇತನವನ್ನು ನೀಡುವ ಮೂಲಕ ಆರೋಗ್ಯಕರ ಕೆಲಸದ ವಾತಾವರಣವನ್ನು ನಿರ್ಮಿಸಿದ್ದಾರೆ. ಸಂಸ್ಥೆಯು ಕೇವಲ ಲಾಭ ಗಳಿಕೆಯನ್ನೇ ಉದ್ದೇಶವಾಗಿಟ್ಟುಕೊಳ್ಳದೇ, ತನ್ನ ನೌಕರರ ಶ್ರೇಯೋಭಿವೃದ್ಧಿಯಲ್ಲೂ ಹೂಡಿಕೆ ಮಾಡುವುದು ಅದರ ಸುಸ್ಥಿರ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ. ಇಲ್ಲಿನ ಆಹಾರವು ತಾಜಾತನಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. ಪ್ರತಿಯೊಂದು ಶಾಖೆಯಲ್ಲೂ ತೆರೆದ ಅಡುಗೆಮನೆ ಇರುತ್ತದೆ. ಅಲ್ಲಿ ಗ್ರಾಹಕರು ತಮ್ಮ ಕಣ್ಣೆದುರೇ ಆಹಾರವು ವೋಕ್‌ನಲ್ಲಿ ಬೇಯುವುದನ್ನು ನೋಡಬಹುದು. ತಾಜಾ ತರಕಾರಿಗಳು, ಗುಣಮಟ್ಟದ ಮಾಂಸ ಮತ್ತು ಸಾಂಪ್ರದಾಯಿಕ ಮಸಾಲೆಗಳ ಬಳಕೆ ಇಲ್ಲಿನ ರುಚಿಯನ್ನು ಹೆಚ್ಚಿಸುತ್ತದೆ. ಫಾಸ್ಟ್ ಫುಡ್ ಎಂದರೆ ಅದು ಅನ್-ಹೆಲ್ದೀ ಎಂಬ ಹಣೆಪಟ್ಟಿಯನ್ನು ಹೋಗಲಾಡಿಸಲು ಇವರು ಸಮತೋಲಿತ ಆಹಾರದ ಆಯ್ಕೆಗಳನ್ನು ನೀಡುತ್ತಿದ್ದಾರೆ.

ಸ್ಪರ್ಧೆ ಮುಗಿದ ಮೇಲೆ ನಮಗೆ ಅಲ್ಲೊಬ್ಬ ಸಿಗುತ್ತಾನೆ

ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಮೈಕಲ್ ಫೆಲ್ಪ್ಸ್. ನಿಮಗೆ ಇವತ್ತು ಇವನ ಕಥೆಯನ್ನು ಹೇಳಬೇಕು, ಆದಷ್ಟು ಚಿಕ್ಕದಾಗಿ. ಒಲಿಂಪಿಕ್ಸ್‌ನಲ್ಲಿ ಈ ವರೆಗೆ ಅತಿಹೆಚ್ಚು ವೈಯಕ್ತಿಕ ಪದಕ ಗೆದ್ದ ಇವನ ಹೆಸರನ್ನು ನೀವು ಕೇಳಿಯೇ ಇರುತ್ತೀರಿ. ಇವನೇನಾದರೂ ದೇಶವಾಗಿದ್ದಿದ್ದರೆ ಒಲಂಪಿಕ್ ಸ್ವಿಮ್ಮಿಂಗ್ (ಈಜು) ಸ್ಪರ್ಧೆಯಲ್ಲಿ ಅತಿ ಹೆಚ್ಚು ಚಿನ್ನ ಗೆದ್ದ ಮೂರನೆಯ ದೇಶವಾಗಿರುತ್ತಿದ್ದನಂತೆ! ಫೆಲ್ಪ್ಸ್‌ನನ್ನು ಕ್ರೀಡಾ ಜಗತ್ತು ಪರಿಚಯಿಸುವುದು ಹೀಗೆ. ಇವನು ಕೂಡ ಅವಿರತ ಶ್ರಮಪಟ್ಟು, ತಾಲೀಮು ನಡೆಸಿ ಪದಕ ಗೆದ್ದ ಸಾಧಕನೇ. ಆದರೆ ಕಥೆ ಕಲಿಸುವ ಪಾಠ ಮಾತ್ರ ವಿಭಿನ್ನ.

ಮೈಕಲ್ ಫೆಲ್ಪ್ಸ್. ಒಲಿಂಪಿಕ್ಸ್‌ನ ದಂತಕಥೆ. ಹಾಗೆಂದು ಇವನನ್ನು ಕರೆಯುವುದಕ್ಕಿಂತ ಸುಮಾರು ವರ್ಷದ ಹಿಂದೆ ಶಾಲೆಯಲ್ಲಿ ಇವನೊಬ್ಬ ವಿಚಿತ್ರ ಹುಡುಗನಾಗಿದ್ದ. ಹೈಪರ್ ಆಕ್ಟಿವ್! ಇವನಿಗೆ ಕ್ಲಾಸಿನಲ್ಲಿ ಕೂತಲ್ಲಿ ಕೂರಲಿಕ್ಕಾಗುತ್ತಿರಲಿಲ್ಲ. ಯಾವುದೇ ಒಂದು ವಿಷಯದ ಮೇಲೆ ಮನಸ್ಸನ್ನು ಹದಿನೈದು ಸೆಕೆಂಡ್‌ಗಿಂತ ಜಾಸ್ತಿ ಏಕಾಗ್ರಗೊಳಿಸಲಿಕ್ಕಾಗುತ್ತಿರಲಿಲ್ಲ. ಚೇಳು ಕಚ್ಚಿದ ಮಂಗನಂತೆ. ಎಷ್ಟೆಂದರೆ ಡಾಕ್ಟರ್ ಹತ್ತಿರ ತೋರಿಸುವ ಪರಿಸ್ಥಿತಿ ಬಂತು. ಡಾಕ್ಟರ್ ಇವನಿಗೆ ★ ಅಈಏಈ(ಏಕಾಗ್ರತಾ ಕೊರತೆ ಮತ್ತು ಅತಿಚುರುಕುತನದ ಅವ್ಯವಸ್ಥೆ) ಇದೆ ಎಂದರು. ಕೆಲವು ಮಕ್ಕಳಿಗೆ ಶಕ್ತಿ ಹೊರಹಾಕಲಿಕ್ಕೆ ಸಾಧ್ಯವಾಗದಷ್ಟು ಇರುತ್ತದೆಯಲ್ಲ. ವೈದ್ಯರು ಇವನನ್ನು ಸರಿ ಮಾಡಲಿಕ್ಕೆ ಕಷ್ಟ, ಕ್ರೀಡೆಗಳಲ್ಲಿ ತೊಡಗಿಸಿ, ಸ್ವಿಮ್ಮಿಂಗ್ ಇತ್ಯಾದಿ ಮಾಡಿಸಿ ಎಂದು ಪ್ರಿಸ್ಕ್ರಿಪ್ಷನ್ ಚೀಟಿ ಬರೆದು ಕೊಟ್ಟರು.

ಹುಡುಗ ಮೈಕಲ್ ಫೆಲ್ಪ್ಸ್‌ಗೆ ಸ್ವಿಮ್ಮಿಂಗ್ ಪೂಲ್ ಹುಚ್ಚು ಹಿಡಿದುಹೋಯಿತು. ಮಕ್ಕಳಿಗೆ ಸಹಜವಾಗಿ ನೀರಿನ ಆಟ, ಈಜಾಟ ಖುಷಿ. ಇವನೋ ವಿಚಿತ್ರ. ಹುಚ್ಚು ಎಷ್ಟೆಂದರೆ ಇವನ ವಾರಿಗೆಯವರೆಲ್ಲ ಯಾವ ಹವ್ಯಾಸ ಇಷ್ಟವಾಗಬಹುದು ಎಂಬ ಲೆಕ್ಕಾಚಾರದಲ್ಲಿ ಮಲಗಿದ್ದರೆ, ಫೆಲ್ಪ್ಸ್ ಬೆಳಿಗ್ಗೆ ಐದು ಗಂಟೆಗೆ ಹೋಗಿ ತಣ್ಣನೆಯ ಈಜುಕೊಳದೊಳಗೆ ಹಾರುತ್ತಿದ್ದ. ಅವನ ಕೋಚ್ - ಗುರುವಿಗೆ ಇವನಲ್ಲಿನ ಅಸಾಮಾನ್ಯ ಸಾಮರ್ಥ್ಯ ತಿಳಿಯಲು ಹೆಚ್ಚಿನ ಸಮಯ ಬೇಕಾಗಲಿಲ್ಲ. ಒಳ್ಳೆಯ ಐಬು ಇಲ್ಲದ ಆಳುತನ ಮತ್ತು ನೀರೆಂದರೆ ಹುಚ್ಚು. ಜೊತೆಯಲ್ಲಿ ಹೆದರಿಕೆಯಾಗುವಷ್ಟು ಶಿಸ್ತು.

ಫೆಲ್ಪ್ಸ್ ಉಳಿದೆಲ್ಲಾ ಚಾಂಪಿಯನ್ ಕ್ರೀಡಾಪಟುಗಳಿಗಿಂತ ವಿಶೇಷವೆನಿಸುವುದು, ಪ್ರತ್ಯೇಕವೆನಿಸುವುದು ಅವನ ತಯಾರಿಯ ರೀತಿಯಲ್ಲಿ. ಯಾಂತ್ರಿಕ ನಿಖರತೆ. ಏನೆಂದರೆ ಒಂದು ಈಜಿನ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದರೆ ಅದರ ಉದ್ದ, ಎಷ್ಟು ಲ್ಯಾಪ್ಸ್ (ಸುತ್ತು), ನೀರಿಗೆ ಹಾರುವುದರಿಂದ ಹಿಡಿದು, ಯಾವ ಕೋನದಲ್ಲಿ ದೇಹವನ್ನು ಬಾಗಿಸಿ ತಿರುಗಿ ಈಜಿ ಬರಬೇಕು ಇತ್ಯಾದಿ ಯಥಾವತ್- ಸ್ಪರ್ಧೆ ಹೇಗೆ ನಡೆಯುತ್ತದೆಯೋ ಅದೇ ರೀತಿ ತಯಾರಿ ನಡೆಸುತ್ತಿದ್ದ. ಎಲ್ಲಾ ಈಜುಪಟುಗಳಿಗೂ ಉಸಿರು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದು ಅತ್ಯಂತ ಮುಖ್ಯ. ಈಜುವಾಗ ಒಂದೇ ಉಸಿರು ಆಚೀಚೆಯಾದರೆ ವೇಗ ಕುಂಠಿತವಾಗಬಾರದು, ಸ್ಪರ್ಧೆ ಸೋಲಬಹುದು. ಫೆಲ್ಪ್ಸ್ ಪ್ರತಿ ಉಸಿರು ತೆಗೆದುಕೊಳ್ಳುವುದನ್ನೂ ಸೇರಿದಂತೆ ಎಲ್ಲವನ್ನೂ ಅವನ ತಾಲೀಮಿನ ಭಾಗವನ್ನಾಗಿಸಿಕೊಂಡಿದ್ದ.

ಕ್ರೀಡಾಪಟುಗಳು ಒಲಂಪಿಕ್‌ನಂತಹ ಕ್ರೀಡೆಗಳಿಗೆ ತಯಾರಿ ನಡೆಸುವ ರೀತಿ ಯಾವತ್ತೂ ನನ್ನಲ್ಲಿ ಆಶ್ಚರ್ಯ ಹುಟ್ಟಿಸುತ್ತದೆ. ಉದಾಹರಣೆಗೆ ಕೆನ್ಯಾದಲ್ಲೊಂದು ಗ್ರಾಮವಿದೆ- ಇಟನ್. ನಾವು ಯಾವುದೇ ದೇಶದ ಮ್ಯಾರಥಾನ್ ಓಟವನ್ನು ತೆಗೆದುಕೊಳ್ಳಿ. ಅಲ್ಲಿ ಕೋಲು ಕಡ್ಡಿಯಂತಹ ಆಫ್ರಿಕಾ ದೇಶದವರು ಉಳಿದೆಲ್ಲರಿಗಿಂತ ಒಂದೆರಡು ಕಿಲೋಮೀಟರ್ ಮುಂದೆ ಓಡುತ್ತಿರುತ್ತಾರೆ ಗಮನಿಸಿದ್ದೀರಾ? ಅವರೆಲ್ಲರೂ ಮ್ಯಾರಥಾನ್ ತಯಾರಿ ಮಾಡುವುದು ಈ ಗ್ರಾಮದಲ್ಲಿ. ಅಲ್ಲಿ ಮ್ಯಾರಥಾನ್ ಕೋಚಿಂಗ್ ಸೆಂಟರ್, ಹಾಸ್ಟೆಲ್ ಎಲ್ಲವೂ ಇದೆ. ಅವರ ತಯಾರಿ ಹೀಗೆ - ಬೆಳಿಗ್ಗೆ ಎದ್ದು ಮೂರು ಗಂಟೆ ಓಡುವುದು. ರೂಮಿಗೆ ಬಂದು ಊಟ, ಮಧ್ಯಾಹ್ನದ ನಿದ್ರೆ. ಮತ್ತೆ ಸಂಜೆ ಮೂರು ತಾಸು ಓಡುವುದು. ಊಟ ಮುಗಿಸಿ- ಮಲಗುವುದು- ಮಾರನೆಯ ದಿನ ಬೆಳಿಗ್ಗೆ ಎದ್ದು ಮತ್ತದೇ ಕಾಯಕ. ಊಟ, ನಿದ್ರೆ, ಓಟ. ಇದನ್ನು ನಾಲ್ಕೈದು ವರ್ಷ ಪ್ರತಿನಿತ್ಯ ಮಾಡುವವರಿದ್ದಾರೆ. ಮೈಕೆಲ್ ಫೆಲ್ಪ್ಸ್ ತಯಾರಿ ಕೂಡ ಹಾಗೆಯೇ ಇತ್ತು. ನಿತ್ಯ ಬೆಳಿಗ್ಗೆ ಐದರಿಂದ ಈಜು - ಮಧ್ಯಾಹ್ನ ಊಟ ಮುಗಿಸಿ ಮತ್ತೆ ಈಜು. ಮಲಗೆದ್ದು ಮತ್ತೆ ಈಜು. ಊಟ, ನಿದ್ರೆ, ಈಜು. ಸಾಮಾನ್ಯವಾಗಿ ಈ ರೀತಿಯ ತಯಾರಿ ಮಾಡುವವರು ವಾರದಲ್ಲಿ ನಾಲ್ಕು ಅಥವಾ ಐದು ದಿನ ಮಾಡುತ್ತಾರೆ. ಇನ್ನುಳಿದ ಎರಡು ದಿನ ದೇಹಕ್ಕೆ ವಿಶ್ರಾಂತಿ. ಆದರೆ ಮೈಕೆಲ್ ಫೆಲ್ಪ್ಸ್ ಒಂದು ದಿನವೂ ವಿಶ್ರಮಿಸಲಿಲ್ಲ. ಒಂದೇ ಒಂದು ದಿನ ಬಿಡದೆ ಈಜು - ವ್ಯಾಯಾಮ, ನಿದ್ರೆ. ಅವನ ತಯಾರಿ ಹೀಗಿರುತ್ತಿತ್ತು ಎಂದರೆ - ಅವನು ಒಲಂಪಿಕ್ ಸ್ಪರ್ಧಿಸುವಾಗ ಉಳಿದವರ ಜೊತೆ ಸ್ಪರ್ಧಿಸುತ್ತಿರಲಿಲ್ಲ, ಬದಲಿಗೆ ಮನುಷ್ಯನ ದೇಹದ ಮಿತಿಯ ಜೊತೆಯೇ ಸ್ಪರ್ಧೆಗಿಳಿಯುತ್ತಿದ್ದ!

2008ರ ಬೀಜಿಂಗ್ ಒಲಂಪಿಕ್ಸ್. ಎಂಟು ಗೋಲ್ಡ್ ಮೆಡಲ್! ಅಲ್ಲಿಯವರೆಗೆ ಒಂದು ಒಲಂಪಿಕ್ ಪಂದ್ಯದಲ್ಲಿ ಇಷ್ಟು ಚಿನ್ನದ ಪದಕ ಗೆದ್ದವರೇ ಇರಲಿಲ್ಲ. ಅಷ್ಟಕ್ಕೇ ನಿಲ್ಲಲಿಲ್ಲ. ಮತ್ತೆ ನಾಲ್ಕು

ವರ್ಷದ ಪ್ರತಿನಿತ್ಯದ ತಯಾರಿ, ಇನ್ನೊಂದು ಒಲಂಪಿಕ್, ಅಲ್ಲೊಂದಿಷ್ಟು ಪದಕ. ಅವನು ಒಲಂಪಿಕ್‌ನಲ್ಲಿ ಗೆದ್ದ ಒಟ್ಟೂ ಪದಕ 28! ಫೆಲ್ಪ್ಸ್ ಕೇಳಿದರೆ 28 ಅಲ್ಲ, 23 ಎಂದು ಸರಿಮಾಡುತ್ತಾನೆ. ಏಕೆಂದರೆ ಅದರಲ್ಲಿ 23 ಮಾತ್ರ ಚಿನ್ನದ ಪದಕ. ಅವನ ಲೆಕ್ಕದಲ್ಲಿ ಚಿನ್ನ ಗೆಲ್ಲದಿದ್ದರೆ ಅದು ಗೆಲುವೇ ಅಲ್ಲ - ಸೋಲು. ಭಾರತಕ್ಕೆ ಇಲ್ಲಿಯತನಕ ಈಜಿನಲ್ಲಿ ಒಂದೇ ಒಂದು ಕಂಚಿನ ಮೆಡಲ್ ಕೂಡ ಬಂದಿಲ್ಲ ಅನ್ನೋದೂ ತಿಳಿದಿರಲಿ. ಹೀಗೆ ಇಷ್ಟೊಂದು ತಯಾರಿ - ಮೈಕೆಲ್ ಫೆಲ್ಪ್ಸ್ ದಂತಕತೆ ಇತ್ಯಾದಿ ಆದದ್ದು ಆಯ್ತು.

ಒಲಿಂಪಿಕ್ ಮೊದಲಾದ ಕ್ರೀಡೆಗಳನ್ನು ವೃತ್ತಿ, ಬದುಕಿನ ಗುರಿಯಾಗಿಸಿಕೊಂಡು ಬದುಕುವುದು ಸಾಮಾನ್ಯವಲ್ಲ. ಅಷ್ಟೆಲ್ಲಾ ತಾಲೀಮು, ತಯಾರಿ ಮಾಡಿ, ನಂತರ ಮೆಡಲ್ ಅನಿಶ್ಚಿತ. ಮೈಕ್ರೋ ಸೆಕೆಂಡ್ ಅಂತರದಲ್ಲಿ ನಾಲ್ಕನೇ ಸ್ಥಾನ ಬಂದುಬಿಟ್ಟರೆ ತಯಾರಿ ಮಾಡಿದ್ದೆಲ್ಲ ನೀರಿನಲ್ಲಿ ಹೋಮ. ಮತ್ತೊಂದು ಅವಕಾಶಕ್ಕೆ ಮತ್ತೆ ನಾಲ್ಕು ವರ್ಷ ಕಾಯಬೇಕು. ಅಷ್ಟು ಕಾಲ ತಾಲೀಮು ಮುಂದುವರಿಯಬೇಕು, ದೇಹವನ್ನು ಸರಿಯಾಗಿಟ್ಟುಕೊಳ್ಳಬೇಕು. ಮುಂದಿನ ಬಾರಿ ಸ್ಪರ್ಧಿಸುವಾಗ ಇನ್ನಷ್ಟು ಕಡಿಮೆ ವಯಸ್ಸಿನ ಕ್ರೀಡಾಪಟುಗಳು, ಸ್ಪರ್ಧೆ ಇನ್ನಷ್ಟು ಕಠಿಣ. ಇದೊಂದು ಬದುಕಿನ ಜೊತೆಗಿನ ಜೂಜು. ಇದರಲ್ಲಿ ಸೋತವರೆಷ್ಟೋ, ಗೆದ್ದವರೆಷ್ಟೋ. ಗೆದ್ದವರ ಕಥೆಯೂ ಮುನ್ನಡೆದಂತೆ ಭಿನ್ನವಲ್ಲ. ಮೆಡಲ್ ಬರದಿದ್ದರೆ ಒಂದು ರೀತಿ, ಮೆಡಲ್ ಬಾರದಿದ್ದರೆ ಇನ್ನೊಂದು ರೀತಿ. ಇದರ ಬಗ್ಗೆ ಮಾತನಾಡುವವರು ಕಡಿಮೆ. ಇದು ಕೇವಲ ಲೈಮ್ ಲೈಟ್ - ಮುಖ್ಯವಾಹಿನಿಯಿಂದ ದೂರವಾಗುವ ನಟ-ನಟಿಯರ ಕಥೆಯಂತಲ್ಲ!

ಮೈಕೆಲ್ ಫೆಲ್ಪ್ಸ್ ಪ್ರತಿನಿತ್ಯ ಆರು ಗಂಟೆ ಈಜುತ್ತಿದ್ದನಂತೆ. ನಿತ್ಯ ಕನಿಷ್ಠ ಹದಿನೈದು ಕಿಲೋಮೀಟರ್ ಈಜುವುದನ್ನು ಅವನು ಒಂದೆರಡು ದಿನ ಮಾಡಿದ್ದಲ್ಲ. ಅವನ ಬಾಲ್ಯದಿಂದ - ಸುಮಾರು ಇಪ್ಪತ್ತು ವರ್ಷಗಳ ಕಾಲ, ವರ್ಷದ ಮುನ್ನೂರ ಅರವತ್ತೈದು ದಿನ ಮಾಡಿಕೊಂಡು ಬಂದಿದ್ದ. ತಮಾಷೆಗಲ್ಲ, ಸುಮಾರು 7 ಸಾವಿರ ದಿನ - ನಿರಂತರ. ನಮ್ಮ ಹತ್ತಿರ ದಿನ ತಪ್ಪಿಸದೆ ಒಂದು ವಾರ ವಾಕಿಂಗ್ ಹೋಗಲಿಕ್ಕಾಗುವುದಿಲ್ಲ. ಮೈಕೆಲ್ ಫೆಲ್ಪ್ಸ್ ಒಬ್ಬನೇ ಎಂದಲ್ಲ - ಇಂತಹ ಕ್ರೀಡೆಗಳಿಗೆ ತಯಾರಾಗುವ ಲಕ್ಷ ಲಕ್ಷ ಜನರ ಬದುಕು ಹೆಚ್ಚು ಕಡಿಮೆ ಇದೇ ಆಗಿರುತ್ತದೆ. ಅವರಿಗೆ ಸ್ಪರ್ಧೆಯ ದಿನ - ಇನ್ನೊಂದು ದಿನ. ಗೆದ್ದೆನೆಂದು ಹಿಗ್ಗಿ ಕೂರುವಂತಿಲ್ಲ, ಸೋತೆ ಎಂದು ಕುಗ್ಗುವಂತೆಯೂ ಇಲ್ಲ. ಬದುಕೇ ತಾಲೀಮು, ತಯಾರಿ. ಬದುಕೇ ಕ್ರೀಡೆಯಾಗಿಬಿಟ್ಟಿರುತ್ತದೆ. ಆದರೆ ಒಂದು ದಿನ ದೇಹಕ್ಕೆ ವಯಸ್ಸಾಗುತ್ತಿದ್ದಂತೆ ಇದೆಲ್ಲ ಮುಗಿಯಬೇಕಲ್ಲ. ಇವರೆಲ್ಲರ ಸಾಮೂಹಿಕ ಸಮಸ್ಯೆ ಎಂದರೆ ಇಷ್ಟು ಕಾಲ ತಯಾರಿ ಮಾಡುವುದೇ ಬದುಕಾಗಿತ್ತು. ಈಗ ಅದುವೆ ಇಲ್ಲ, ಸ್ಪರ್ಧೆಯೇ ಇಲ್ಲ. ಬದುಕಿನ ಉದ್ದೇಶವೇ ಬದಲಾಗಿ ಹೋಗುವುದನ್ನು ಅವರು ಎದುರಿಸಬೇಕಾಗುತ್ತದೆ.

ಮೈಕೆಲ್ ಫೆಲ್ಪ್ಸ್‌ನಷ್ಟು ಪದಕ ಗೆದ್ದವರಿಗೆ ಹಣಕಾಸಿನ ತೊಂದರೆಯಾಗುವುದಿಲ್ಲ. ಆದರೆ ಅವನಿಗೂ ಈ ತಾಲೀಮಿಲ್ಲದ ಖಾಲಿತನ, ನಿರ್ವಾತ ಸಹಿಸಲಿಕ್ಕಾಗಲಿಲ್ಲ. ಸ್ಪರ್ಧೆಯಿಲ್ಲ, ತಯಾರಿಯಿಲ್ಲ, ಚಪ್ಪಾಳೆಗಳಿಲ್ಲ - ಖಿನ್ನತೆ ಹತ್ತಿಕೊಂಡಿತು. ಅಷ್ಟು ಪದಕ ಗೆದ್ದ, ಹಣ ಗಳಿಸಿದವನಿಗೂ ಬದುಕಿನ ಉದ್ದೇಶವೇ ಮಾಯವಾದಾಗ ಗಲಿಬಿಲಿಯಾಯಿತು. ಅವನೇ ಹೇಳುವಂತೆ ಖಿನ್ನತೆ ಉಲ್ಬಣಿಸಿ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಹಲವು ಬಾರಿ ಅನ್ನಿಸಿತಂತೆ! ನಂತರ ಮಾನಸಿಕ ಶುಶ್ರೂಷೆ ಇತ್ಯಾದಿ ಪಡೆಯಬೇಕಾಯಿತು. ಹೇಗಿದೆ ನೋಡಿ. ಫೆಲ್ಪ್ಸ್ ಹಣ ಗಳಿಸಿದ್ದ, ಫೇಮಸ್ ಇತ್ಯಾದಿ. ಹಾಗಾಗಿ ಆರೈಕೆ ಪಡೆದು ಇಂಥದ್ದೊಂದು ಖಿನ್ನತೆಯಿಂದ ಹೊರಬರಲಿಕ್ಕಾಯಿತು. ಆದರೆ ಇವತ್ತಿಗೂ ಪದಕ ಕಚ್ಚಿ, ರಾಷ್ಟ್ರಗೀತೆಗೆ ಎದೆಯುಬ್ಬಿಸುವ ಕ್ರೀಡಾಪಟುಗಳಲ್ಲಿ ಬಹುತೇಕರು ಮಾನಸಿಕ ಉದ್ವೇಗಕ್ಕೆ, ಖಿನ್ನತೆಗೆ ಒಳಗಾಗುವುದು ಸಾಮಾನ್ಯವಂತೆ. ಅದಕ್ಕೆ ಕಾರಣ ವೃತ್ತಿಪರ ಕ್ರೀಡಾಪಟುಗಳಿಗೆ ಸ್ಪರ್ಧೆಗಿಂತ ತಯಾರಿಯೇ ಬದುಕಾಗಿರುತ್ತದೆ. ಸ್ಪರ್ಧೆಯ ಸಮೀಕರಣ ತೆಗೆದರೆ ಅದು ಕೂಡ ತಾಲೀಮಿನ ಇನ್ನೊಂದು ಈಜು/ಓಟ. ಆದರೆ ಸ್ಪರ್ಧೆ ಮುಗಿಯುತ್ತಿದ್ದಂತೆ, ಚಪ್ಪಾಳೆ ನಿಲ್ಲುತ್ತಿದ್ದಂತೆ ಬದುಕೇ ನಿಂತುಹೋದಂತೆನಿಸುತ್ತದೆ!

ಅಸಾಮಾನ್ಯ ಮೈಕೆಲ್ ಫೆಲ್ಪ್ಸ್‌ನ ಕಥೆ ಕೇವಲ ಅವನದಷ್ಟೇ ಅಲ್ಲ, ಇದು ನಮ್ಮಲ್ಲಿ - ಎಷ್ಟೋ ಜನರ ಸಾಮಾನ್ಯ ಕಥೆಯೂ ಹೌದು. ಹೇಗೆಂದು ಕೇಳುತ್ತೀರಾ?

ಹುಟ್ಟಿದ ಮಾರನೇ ಕ್ಷಣದಿಂದಲೇ ಗುರಿಗಳು ಶುರುವಾಗಿಬಿಡುತ್ತವೆ. ಮೊದಲು ನಡೆಯಲು ಕಲಿಯುವುದು, ಮಾತನಾಡಲು, ನಂತರ ಒಳ್ಳೆಯ ಮಾರ್ಕ್ಸ್ ಪಡೆಯುವುದು, ಒಳ್ಳೆಯ ಕಾಲೇಜಿಗೆ ಹೋಗುವುದು, ಉದ್ಯೋಗ, ಮದುವೆ, ಮಕ್ಕಳು, ಅವರ ಶಿಕ್ಷಣ, ಅವರ ಉದ್ಯೋಗ, ಉಳಿತಾಯ, ಮನೆ, ನಿವೃತ್ತಿ ಹೀಗೆ. ಒಂದಾದ ಮೇಲೆ ಇನ್ನೊಂದು ಗುರಿ - ಎಲ್ಲವೂ ಸ್ಪರ್ಧೆ. ಶಿಕ್ಷಕ ಎರಡು ಮೂರು ದಶಕಗಳ ನಂತರ ಹೆಡ್ ಮಾಸ್ತರ್ ಆಗುತ್ತಾನೆ, ಒಂದೆರಡು ವರ್ಷ - ಕೊನೆಗೊಂದು ದಿನ ನಿವೃತ್ತನಾಗುತ್ತಾನೆ. ನಿನ್ನೆಯವರೆಗೆ ಏನೋ ಕೇಳಿಕೊಂಡು ಬರುತ್ತಿದ್ದ ವಿದ್ಯಾರ್ಥಿಗಳು, ಶಿಕ್ಷಕರು, ಹಳೆಯ ವಿದ್ಯಾರ್ಥಿಗಳು, ಬೆಂಚ್ ರಿಪೇರಿಯವನು - ಎಲ್ಲರೂ ಏನೋ ಒಂದನ್ನು ಕೇಳಿಕೊಂಡು ಬರುವುದು ನಿಂತುಬಿಡುತ್ತದೆ. ಅದರಲ್ಲೂ ಕೆಲವೊಂದು ಉನ್ನತ ಹುದ್ದೆ - ಸಿಇಒ, ಐಎಎಸ್, ಐಪಿಎಸ್ ಹುದ್ದೆಯಲ್ಲಿದ್ದು ನಿವೃತ್ತಿ ಸೃಷ್ಟಿಸುವ ನಿರ್ವಾತ ಇನ್ನಷ್ಟು ದೊಡ್ಡದು. ಸೋತ ರಾಜಕಾರಣಿ ಖಿನ್ನನಾಗಿಬಿಡುವುದು ಸೋಲಿನಿಂದಲ್ಲ, ಸೋಲು ಅವನಿಂದ ದೂರವಾಗುವ ಅವನ ಐಡೆಂಟಿಟಿಯಿಂದ - ಗುರುತಿನಿಂದ. ತಾಯಿ ತನ್ನ ಮಕ್ಕಳು ಕಾಲೇಜಿಗೆಂದು ಪರ ಊರಿಗೆ ಹೋದ ನಂತರ ಖಾಲಿ ಮನೆಯಲ್ಲಿ ಅನುಭವಿಸುವ ನಿರ್ವಾತವೂ ಇದುವೇ. ಸೈನಿಕ ತನ್ನ ಸಮವಸ್ತ್ರ ತೆಗೆದಿಟ್ಟಾಗ, ಕ್ರಿಕೆಟರ್‌ಗೆ ಮೈದಾನದ ಶಿಳ್ಳೆ ಕೇಳುವುದು ನಿಂತಾಗ. ಅಷ್ಟೇ ಏಕೆ, ದಶಕಗಳ ಕಾಲ ಅದೇ ಮರದ ಕುರ್ಚಿ, ತುಕ್ಕಾದ ಕನ್ನಡಿಯಿಟ್ಟು ಊರಿನವರ ಕೂದಲನ್ನು ಕತ್ತರಿಸುತ್ತಿದ್ದ ಹಳ್ಳಿಯ ಕ್ಷೌರಿಕ ಕೂಡ ಒಂದು ದಿನ ಮುದುಕನಾಗಿ ತನ್ನ ಮನೆಯ ಮುಂಗಟ್ಟಿನಲ್ಲಿ ಕೂತು ಆಚೀಚೆ ಹೋಗಿಬರುವವರನ್ನು ಅದೇ ಖಾಲಿತನದಲ್ಲಿ ನೋಡುತ್ತಾನೆ.

ಆಧುನಿಕ ಜೀವನ ಮಜವಾಗಿದೆ ನೋಡಿ. ಸಮಾಜಕ್ಕೆ ನಮ್ಮಿಂದೇನು ಉಪಯೋಗ ಎನ್ನುವ ಆಧಾರದ ಮೇಲೆ ನಮ್ಮ ಗುರುತು ನಿರ್ಮಾಣವಾಗಿರುತ್ತದೆ. ಏನು ಉದ್ಯೋಗ? ನೀನೇನು ಮಾಡುತ್ತೀಯಾ? ಇದು ಪ್ರತಿಯೊಬ್ಬರೂ ಎದುರಿಸುವ ಮೊದಲ ಅಸ್ತಿತ್ವದ ಪ್ರಶ್ನೆ. ಹಾಗಾಗಿಯೇ ವ್ಯಕ್ತಿ ಸಮಾಜದಲ್ಲಿನ, ಕುಟುಂಬದಲ್ಲಿನ ಪಾತ್ರವೇ ಆಗಿಬಿಡುತ್ತಾನೆ! ವೈದ್ಯ ಆಸ್ಪತ್ರೆಯಾಚೆಯೂ ವೈದ್ಯನಾಗಿಬಿಡುತ್ತಾನೆ. ವ್ಯಾಪಾರಿ ಲಾಭ ನಷ್ಟವಾಗಿಬಿಡುತ್ತಾನೆ. ತಂದೆ ಕರ್ತವ್ಯವೇ ಆಗಿಬಿಡುತ್ತಾನೆ. ಕೆಲವೊಮ್ಮೆ ನಮ್ಮ ಹವ್ಯಾಸಗಳೂ ನಮ್ಮ ಗುರುತುಗಳಾಗಿಬಿಡುತ್ತವೆ. ನಮ್ಮೂರಲ್ಲಿ ಒಬ್ಬ ಗೃಹಿಣಿ ಅತ್ಯುತ್ತಮ ಸಾಂಬಾರು (ಹುಳಿ) ಮಾಡುತ್ತಾರೆ.

ಯಾರದೇ ಮನೆಯಲ್ಲಿ ಯಾವುದೇ ಕಾರ್ಯಕ್ರಮವಿರಲಿ, ಅವರ ಸಾಂಬಾರು ಜನಪ್ರಿಯ. ಎಷ್ಟೆಂದರೆ ಪೆಂಡಾಲು ಹೊಕ್ಕುತ್ತಿದ್ದಂತೆ ಇವತ್ತು ಸಾಂಬಾರು ಮಾಡಿದ್ದು ಅವರೇ ಎಂದು ಜನರಿಗೆ ಘಮದಲ್ಲಿಯೇ ತಿಳಿದುಬಿಡುತ್ತದೆ! ಈಗ ಹೇಗಾಗಿದೆಯೆಂದರೆ ಅವರು ಮತ್ತು ಅವರು ಮಾಡುವ ಸಾಂಬಾರನ್ನು ಪ್ರತ್ಯೇಕಿಸಲಿಕ್ಕಾಗುವುದೇ ಇಲ್ಲ. ಸಾಂಬಾರೇ ಅವರ ಗುರುತಾಗಿಹೋಗಿದೆ. ಅವರನ್ನು ಸಾಂಬಾರ್ ಸಾವಿತ್ರಕ್ಕ ಎಂದೇ ಕರೆಯುವುದು! ನಾನೀಗ ಆರು ವರ್ಷದಿಂದ ಪ್ರತೀ ವಾರ ಅಂಕಣ ಬರೆಯುತ್ತಿದ್ದೇನಲ್ಲ. ಇದು ಕೂಡ.

ಹೆಚ್ಚಿನ ಕಡೆ, ಸಂದರ್ಭದಲ್ಲಿ ನನ್ನ ಗುರುತಾಗಿ ಹೋಗಿದೆ! ಈ ಗುರುತಿನ ಆರೋಪದಿಂದ ತಪ್ಪಿಸಿಕೊಳ್ಳಲಿಕ್ಕಾಗುವುದಿಲ್ಲ! ತಮಾಷೆಗೆ ಹೇಳುತ್ತಿಲ್ಲ, ನೀವು ಸಮಾಜಕ್ಕೆ ಏನೇ ಒಳ್ಳೆಯದು ಮಾಡಿ, ಆ ಪ್ರಯೋಜನವನ್ನು ಸಮಾಜ ಅಷ್ಟು ಸಂಭ್ರಮಿಸುತ್ತದೆ. ಎಷ್ಟೆಂದರೆ ಅದಕ್ಕಿಂತ ಮೊದಲು ಇದ್ದ ನಮ್ಮ ಅಸ್ತಿತ್ವವೇ ಮಸುಕೆನಿಸಿಬಿಡುತ್ತದೆ, ಬಹುತೇಕರಿಗೆ ಮರೆತುಹೋಗಿಬಿಡುತ್ತದೆ. ಕ್ರಮೇಣ ಸಮಾಜ ಆರೋಪಿಸುವ ಗುರುತುಗಳೇ ನಮ್ಮ ನಡವಳಿಕೆ, ಹಾವಭಾವ ಎಲ್ಲವನ್ನೂ ನಿರ್ದೇಶಿಸಲು ಶುರುಮಾಡಿಬಿಡುತ್ತವೆ. ಹಾಗಾಗಿ ಆ ಗುರುತೇ ನಮ್ಮ ಅಸ್ತಿತ್ವವೆನಿಸುವುದು!

ಆದರೆ ಯಾವುದೇ ಗುರುತಿನದೊಂದು ಸಮಸ್ಯೆಯಿದೆ. ಏನೆಂದರೆ ಯಾವುದೇ ಗುರುತು ತಾತ್ಕಾಲಿಕ. ಇದನ್ನು ವೈರಾಗ್ಯವೆಂದು ಭಾವಿಸಬೇಡಿ. ಇರೋದೇ ಹಾಗೆ. ಜೀವನವೇ ಹಾಗೆ. ನಾವು ಒಂದೊಂದೇ ಗುರುತನ್ನು ಚೀಲಕ್ಕೆ ಹಾಕಿಕೊಳ್ಳುತ್ತಾ ಹೋಗುತ್ತೇವೆ - ಕಾಲ ಒಂದೊಂದೇ ಗುರುತನ್ನು ಸದ್ದಿಲ್ಲದೆ ನಮ್ಮಿಂದ ಹಿಂಪಡೆಯುತ್ತ ಹೋಗುತ್ತದೆ. ಪ್ರತೀ ಗುರುತಿನ ಹಣೆಪಟ್ಟಿ ಕಳಚಿ ಬಿದ್ದಾಗ - ನಾವು ನಮ್ಮನ್ನು ಏನೆಂದು ನಂಬಿದ್ದೇವೋ ಅದುವೇ ನಮ್ಮೆದುರಿಗಿಂದ ಮಾಯವಾದಾಗ. ಅದು ನಮ್ಮ ಅಸ್ತಿತ್ವದ ಪ್ರಶ್ನೆ. ನಾವು ದೈಹಿಕ ಮತ್ತು ಮಾನಸಿಕ ಅಸ್ತಿತ್ವವನ್ನು ಒಂದೇ ರೀತಿಯಲ್ಲಿ ಸ್ವೀಕರಿಸುತ್ತೇವೆ!

ಬದುಕಲ್ಲಿ ಎಲ್ಲರೂ ಪ್ರದರ್ಶನ ಕೊಡಬೇಕು. ತಾಲೀಮು ಮಾಡಬೇಕು. ಸ್ಪರ್ಧೆಗಿಳಿಯಲೇಬೇಕು. ಆದರೆ ತಯಾರಿ, ಸ್ಪರ್ಧೆ, ಪ್ರದರ್ಶನ ಇವೇ ಅಸ್ತಿತ್ವವೆನ್ನುವ ಭ್ರಮೆಯಲ್ಲಿ ಬಿದ್ದರೆ ಪಟ್ಟ, ಮೆಡಲ್, ಚಪ್ಪಾಳೆ, ಸ್ಪರ್ಧೆ ನಿಂತಾಗ, ರಿಟೈರ್ಡ್ ಆದಾಗ, ಅಂಗಡಿ ಮುಚ್ಚಿದಾಗ, ಆಫೀಸಿನ ಕೆಲಸ ಮುಗಿಸಿ ಮನೆಗೆ ಬಂದಾಗ, ಯೂಟ್ಯೂಬ್ - ರೀಲ್ಸ್ ವೀವ್ಸ್ ಕಡಿಮೆಯಾದಾಗ - ಒಂದೊಂದೇ ಗುರುತುಗಳು ಕಳಚಿಕೊಳ್ಳುವುದು ಸ್ವಾಭಾವಿಕ ಸಹಜ. ಬದುಕಿನ ಗುರಿಯತ್ತ ಸಾಗುವಾಗಲೇ ಇದರ ಅರಿವಿದ್ದರೆ ಒಳ್ಳೆಯದು. ಜಗತ್ತು ಪ್ರಯೋಜನ ನಿಲ್ಲುತ್ತಿದ್ದಂತೆ ನಮ್ಮ ಗುರುತನ್ನು ಸಂಭ್ರಮಿಸುವುದನ್ನು ಕೂಡ ನಿಲ್ಲಿಸುತ್ತದೆ. ಆದರೆ ಬದುಕು ಗುರುತು ಕಳೆಯುತ್ತಿದ್ದಂತೆ ಮುಗಿದುಹೋಗುವುದಿಲ್ಲ. ಚಪ್ಪಾಳೆ, ಶಿಳ್ಳೆ, ಗುರುತುಗಳು ಆಚೆ ನಮಗೆ ಎದುರಾಗುವ ವ್ಯಕ್ತಿ ನಾವೇ ಎಂದು ತಿಳಿದಿದ್ದರಾಯ್ತು! ಅಷ್ಟೆ.

ಇಂಧನ ಭದ್ರತೆಗೆ ಭಾರತದ ದಿಟ್ಟ ಸಾಹಸಗಳ ಬಲ್ಲಿರಾ?!

ಮನಿಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಇರಾನ್ ಯುದ್ಧ ಆರಂಭವಾದ ಬಳಿಕ ದಿಢೀರ್ ಉದ್ಭವಿಸಿರುವ, ಆಘಾತಕಾರಿ ಇಂಧನ ಬಿಕ್ಕಟ್ಟನ್ನು ಎದುರಿಸಲು ಭಾರತ ಈಗ ನಡೆಸುತ್ತಿರುವ ತುರ್ತು ಪರಿಹಾರ ಕ್ರಮಗಳು ಮತ್ತು ದೀರ್ಘಾವಧಿಯ ಯೋಜನೆಗಳು ನಿಜಕ್ಕೂ ಅಧ್ಯಯನಯೋಗ್ಯ. ಜತೆಗೆ ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ಅಭಿಮಾನವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಹಾಗೂ ಅವರ ಮನವಿಗೆ ಕೋಟ್ಯಂತರ ಮಂದಿ ಏಕೆ ಸ್ಪಂದಿಸುತ್ತಾರೆ ಎಂಬುದು ಮನದಟ್ಟಾಗುತ್ತದೆ.

ನೋಡಿ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ರಸಗೊಬ್ಬರ ಆಮದನ್ನು ತಗ್ಗಿಸಲು ಕೇಂದ್ರ ಸರಕಾರವು 37,500 ಕೋಟಿ ರುಪಾಯಿಗಳ ಯೋಜನೆಗೆ ಅನುಮೋದನೆ ನೀಡಿದೆ. ಇದನ್ನು 'ಕೋಲ್ ಗ್ಯಾಸಿಫಿಕೇಶನ್' ಎನ್ನುತ್ತಾರೆ. ಏನಿದು? ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಕಲ್ಲಿದ್ದಲು ನಿಕ್ಷೇಪಗಳು ಲಭ್ಯವಿದೆ. ಕಲ್ಲಿದ್ದಲನ್ನು ನೇರವಾಗಿ ಸುಡುವ ಬದಲು, ಅದನ್ನು ರಾಸಾಯನಿಕ ಪ್ರಕ್ರಿಯೆಗಳ ಮೂಲಕ ಅನಿಲ ರೂಪಕ್ಕೆ ಪರಿವರ್ತಿಸಬಹುದು. ಅಂಥ ತಂತ್ರಜ್ಞಾನಕ್ಕೆ ಕೋಲ್ ಗ್ಯಾಸಿಫಿಕೇಶನ್ ಎನ್ನುತ್ತಾರೆ. ಈ ಪ್ರಕ್ರಿಯೆಯಲ್ಲಿ ಸಿನ್ ಗ್ಯಾಸ್ ತಯಾರಿಸಬಹುದು. ಅದನ್ನು ಇಂಧನವಾಗಿ ಬಳಸಬಹುದು. ಇಂಧನ ಭದ್ರತೆ ಮತ್ತು ವಿದೇಶಿ ವಿನಿಮಯ ಉಳಿತಾಯಕ್ಕೆ ಪ್ರಯೋಜನಕಾರಿ. ಇಂಥ ಹಲವಾರು ಪರ್ಯಾಯ ಕ್ರಮಗಳನ್ನು ಭಾರತ ಜಾರಿಗೊಳಿಸುತ್ತಿದೆ.

ಪಶ್ಚಿಮ ಏಷ್ಯಾದಲ್ಲಿ ಇರಾನ್ ಮತ್ತು ಅಮೆರಿಕ- ಇಸ್ರೇಲ್ ನಡುವಣ ಯುದ್ಧದಿಂದ ಜಗತ್ತಿನ ಬಹುತೇಕ ದೇಶಗಳ ಮೇಲೆ ಒಂದಿಲ್ಲೊಂದು ಬಗೆಯಲ್ಲಿ ನಕಾರಾತ್ಮಕ ಪರಿಣಾಮ ಉಂಟಾಗಿದೆ. ತೈಲ ಸಂಪದ್ಭರಿತ ಕೊಲ್ಲಿ ರಾಷ್ಟ್ರಗಳಿಗೆ ತೈಲ ಸರಬರಾಜು ಮಾಡಲು ಹಾರ್ಮುಜ್ ಜಲಸಂಧಿಯ ಕಂಟಕ ಸೃಷ್ಟಿಯಾಗಿದ್ದರೆ, ತೈಲವನ್ನು ಆಮದು ಮಾಡಿಕೊಳ್ಳುವ ಏಷ್ಯಾ ಮತ್ತು ಯುರೋಪಿನ ದೇಶಗಳಿಗೆ ಪೂರೈಕೆಯಲ್ಲಿ ವ್ಯತ್ಯಯ ಮತ್ತು ಇಡೀ ಜಗತ್ತಿಗೆ ತೈಲ ದರ ಏರಿಕೆಯ ಬಿಸಿ ತಟ್ಟಿದೆ. ಇದು ಜಗತ್ತನ್ನು ಮತ್ತೊಂದು ಆರ್ಥಿಕ ಹಿಂಜರಿತಕ್ಕೆ ಸಿಲುಕಿಸಲಿದೆಯೇ ಎಂಬ ಆತಂಕವೂ ಉಂಟಾಗಿದೆ. ಏಕೆಂದರೆ ಹಣದುಬ್ಬರ ಅಥವಾ ಬೆಲೆ ಏರಿಕೆಯ ಬಿಸಿ ಈಗಾಗಲೇ ತಟ್ಟಿದೆ.

ಭಾರತದಲ್ಲಿ 2026ರ ಏಪ್ರಿಲ್‌ನಲ್ಲಿ ಸಗಟು ಹಣದುಬ್ಬರ 8.3 ಪರ್ಸೆಂಟ್‌ಗೆ ಏರಿಕೆಯಾಗಿದೆ. ಕಚ್ಚಾತೈಲ ದರ ಏರಿಕೆಯೇ ಇದಕ್ಕೆ ಪ್ರಮುಖ ಕಾರಣ. ಉತ್ಪಾದನೆಯ ವೆಚ್ಚ ದಿನೇದಿನೇ ಜಾಸ್ತಿಯಾಗುತ್ತಿದೆ. ಲಾಜಿಸ್ಟಿಕ್ಸ್ ದುಬಾರಿಯಾಗುತ್ತಿದೆ. ಕಳೆದ ಮಾರ್ಚ್‌ನಿಂದ ಇಲ್ಲಿಯವರೆಗೆ ಬ್ರೆಂಟ್ ಕಚ್ಚಾ ತೈಲ ದರ 70 ಡಾಲರ್‌ನಿಂದ 105 ಡಾಲರ್‌ಗೆ ಜಿಗಿದಿದೆ. ಹೀಗಿದ್ದರೂ, ಕೇಂದ್ರ ಸರಕಾರವು ಪೆಟ್ರೋಲ್-ಡೀಸೆಲ್ ಮತ್ತು ದೇಶೀಯ ಅಡುಗೆ ಅನಿಲ ದರವನ್ನು ಏರಿಸಿಲ್ಲ, ಆದರೆ ವಾಣಿಜ್ಯ ಬಳಕೆಯ ಎಲ್ಪಿಜಿ ಸಿಲಿಂಡರ್ ದರ ಏರಿಕೆಯಾಗಿದೆ.

ರಿಸರ್ವ್ ಬ್ಯಾಂಕ್ ಪ್ರಕಾರ ಭಾರತದ ಒಟ್ಟಾರೆ ಆರ್ಥಿಕ ಪರಿಸ್ಥಿತಿಯ ಬುನಾದಿ ಸುಭದ್ರವಾಗಿದೆ. ಹೀಗಿದ್ದರೂ, ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆ ದೀರ್ಘಾವಧಿಗೆ ಮುಂದುವರಿದರೆ ಸವಾಲಾಗಿ ಪರಿಣಮಿಸಬಹುದು. ಹೀಗಿದ್ದರೂ, ಭಾರತಕ್ಕೆ ವಿಪತ್ತಿನಲ್ಲಿಯೂ ಕೆಲವು ಅವಕಾಶಗಳು ಸೃಷ್ಟಿಯಾಗಿದೆ. ಜತೆಗೆ ಇಂಧನ ಸಮಸ್ಯೆಗೆ ದೀರ್ಘಾವಧಿಯಲ್ಲಿ ಕೈಗೊಳ್ಳಬೇಕಾದ ಯೋಜನೆಗಳಿಗೂ ಕೇಂದ್ರ ಸರಕಾರ ಚಾಲನೆ ನೀಡಿದೆ. ಅವುಗಳಲ್ಲಿ ಕೆಲವನ್ನು ನೋಡೋಣ.

ಮೊದಲನೆಯದಾಗಿ ಇರಾನ್- ಅಮೆರಿಕ ಸಂಘರ್ಷದ ಪರಿಣಾಮವಾಗಿ ಒಂದು ಕಡೆಯಲ್ಲಿ ಕಚ್ಚಾ ತೈಲದ ದರ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಡಿ ದಾಟಿದೆ. ಮತ್ತೊಂದು ಕಡೆಯಲ್ಲಿ, ಭಾರತದ ಇಂಧನ ಮತ್ತು ವಿದ್ಯುತ್ ವಲಯದ ಕಂಪನಿಗಳ ಷೇರು

ದರದಲ್ಲಿ ಗಣನೀಯ ಏರಿಕೆಯಾಗಿದೆ. ನಿಫ್ಟಿ ಎನರ್ಜಿ ಇಂಡೆಕ್ಸ್‌ನ ಮಾರುಕಟ್ಟೆ ಬಂಡವಾಳ ಮೌಲ್ಯವು 3 ಲಕ್ಷ ಕೋಟಿ ರುಪಾಯಿಗೆ ವೃದ್ಧಿಸಿದೆ. ವಿದೇಶಿ ಹೂಡಿಕೆದಾರರು ವಿದ್ಯುತ್ ಉತ್ಪಾದನೆ ಮತ್ತು ಸಾಗಣೆ ವಲಯದ ಕಂಪನಿಗಳ ಸ್ಟಾಕ್ಸ್‌ಗಳಲ್ಲಿ ಹೂಡಿಕೆಯನ್ನು ಹೆಚ್ಚಿಸುತ್ತಿದ್ದಾರೆ. ಅದಾನಿ ಪವರ್ ಮತ್ತು ಬಿಎಚ್‌ಇಎಲ್‌ನಂತಹ ಕಂಪನಿಗಳ ಷೇರುಗಳ ದರದಲ್ಲಿ ಇತ್ತೀಚೆಗೆ ಗಣನೀಯ ಏರಿಕೆ ದಾಖಲಾಗಿದೆ.

ಉದಾಹರಣೆಗೆ ಅದಾನಿ ಪವರ್ ಷೇರಿನ ದರ 2025ರ ನವೆಂಬರ್ 14ರಂದು 153 ರುಪಾಯಿ ಇತ್ತು. (6 ತಿಂಗಳಿನ ಹಿಂದೆ) ಈಗ ಅಂದರೆ 2026ರ ಮೇ 14ಕ್ಕೆ 223 ರುಪಾಯಿಗೆ ಹೆಚ್ಚಳವಾಗಿದೆ. 45 ಪರ್ಸೆಂಟ್ ಏರಿಕೆಯಾಗಿರುವುದನ್ನು ಗಮನಿಸಬಹುದು. ಬಿಎಚ್‌ಇಎಲ್ ಕಂಪನಿಯ ಷೇರು ದರ 6 ತಿಂಗಳಿನ ಹಿಂದೆ 280 ರುಪಾಯಿಯಷ್ಟಿದ್ದರೆ, 2026ರ ಮೇ 14ರಂದು 408 ರುಪಾಯಿಗೆ ಏರಿತ್ತು. 45 ಪರ್ಸೆಂಟ್ ಹೆಚ್ಚಳವಾಗಿದೆ. ಇದು ಭಾರತದ ಇಂಧನ ಕ್ಷೇತ್ರದಲ್ಲಿ ಉಂಟಾಗುತ್ತಿರುವ ರಚನಾತ್ಮಕ ಪರಿವರ್ತನೆಯ ಹೊಸ ಅಧ್ಯಾಯವನ್ನೂ ಬಿಂಬಿಸಿದೆ!

ಹೌದು! ಜಿಯೊಪಾಲಿಟಿಕ್ಸ್ ಆಘಾತಗಳ ಪರಿಣಾಮವಾಗಿ ದೇಶದ ವಿದ್ಯುತ್ ಉತ್ಪಾದನೆ ಮತ್ತು ಸಾಗಣೆ ವಲಯದ ಕಂಪನಿಗಳ ಷೇರುಗಳ ದರ ಏರುಗತಿಯಲ್ಲಿದೆ. ಎನ್‌ಎಸ್‌ಡಿಎಲ್‌ನ ಅಂಕಿ ಅಂಶಗಳ ಪ್ರಕಾರ 2026ರ ಏಪ್ರಿಲ್‌ನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು 5,557 ಕೋಟಿ ರುಪಾಯಿಗಳನ್ನು ಪವರ್ ಸ್ಟಾಕ್ಸ್‌ಗಳಲ್ಲಿ ಹೂಡಿಕೆ ಮಾಡಿದ್ದಾರೆ. ಸಾಮಾನ್ಯವಾಗಿ ಏಪ್ರಿಲ್-ಮೇನಲ್ಲಿ ತಾಪಮಾನ ಹೆಚ್ಚುವುದರಿಂದ ವಿದ್ಯುತ್‌ಗೆ ಬೇಡಿಕೆಯೂ ಹೆಚ್ಚುತ್ತದೆ. ಆದರೂ ಈ ಸಲ ವ್ಯಾಪಕ ಹೂಡಿಕೆಯೂ ಕಂಡು ಬಂದಿದೆ. ಹೀಗಾಗಿ ಅದಾನಿ ಪವರ್, ಬಿಎಚ್‌ಇಎಲ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಎನರ್ಜಿ ಸಲ್ಯೂಷನ್ಸ್, ಹಿಟಾಚಿ ಎನರ್ಜಿ ಇಂಡಿಯಾ, ಸುಜ್ಲಾನ್, ಎನ್‌ಟಿಪಿಸಿ ಗ್ರೀನ್ ಎನರ್ಜಿ, ಎನ್‌ಎಲ್ಸಿ ಇಂಡಿಯಾ ಷೇರುಗಳ ದರ ಏರಿಕೆಯನ್ನು ಗಮನಿಸಬಹುದು.

ಕಚ್ಚಾ ತೈಲ ದರ ಏರಿಕೆಯಿಂದಾಗಿ ತೈಲ ವಲಯದ ಎಕ್ಸ್‌ಪ್ಲೊರೇಶನ್ ಮತ್ತು ಪ್ರೊಡಕ್ಷನ್ ಕಂಪನಿಗಳು, ಅಂದರೆ ತೈಲ ನಿಕ್ಷೇಪಗಳನ್ನು ಶೋಧಿಸುವುದು, ತೈಲೋತ್ಪಾದನೆ, ಸಂಸ್ಕರಣೆ, ನೈಸರ್ಗಿಕ ಅನಿಲ ಉತ್ಪಾದನೆಯ ಕಂಪನಿಗಳ ಷೇರುಗಳ ದರಗಳು ಚೇತರಿಸಿವೆ. ಅವುಗಳಿಗೆ ನಗದು ಹರಿವು ಹೆಚ್ಚುತ್ತಿದೆ. ಎನರ್ಜಿ ಷೇರುಗಳು ಹಣದುಬ್ಬರದ ಎದುರು ಹೆಡ್ಜ್ ಆಗಿಯೂ ಬೇಡಿಕೆ ಪಡೆಯುತ್ತಿವೆ. ತೈಲ, ಅನಿಲ ಮಾರಾಟದಲ್ಲಿ ಲಾಭ ಗಳಿಸುವ ಕಂಪನಿಗಳು ಅದನ್ನು ನವೀಕರಿಸಬಹುದಾದ ಇಂಧನಗಳು, ಗ್ರೀನ್ ಹೈಡ್ರೋಜನ್, ಬ್ಯಾಟರಿ ಸ್ಟೋರೇಜ್ ಮತ್ತು ಟ್ರಾನ್ಸ್ ಮಿಶನ್ ಮೂಲಸೌಕರ್ಯ ಯೋಜನೆಗಳಲ್ಲಿ ಹೂಡಿಕೆ ಮಾಡುತ್ತಿವೆ. ಜಾಗತಿಕ ಹೂಡಿಕೆ ಕಂಪನಿಗಳು ಪವರ್ ಟ್ರಾನ್ಸ್ ಮಿಶನ್ ಮತ್ತು ಹೈ ವೋಲ್ಟೇಜ್ ಪವರ್ ಎಕ್ವಿಪ್‌ಮೆಂಟ್ ಉತ್ಪಾದನೆಯಲ್ಲಿ ಆದಾಯ ಹೆಚ್ಚಳವಾಗಿರುವುದನ್ನು ಗುರುತಿಸಿವೆ.

ಎಸ್‌ಬಿಐ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಸನ್ನಿ ಅಗ್ರವಾಲ್ ಹೀಗೆನ್ನುತ್ತಾರೆ- ಕಚ್ಚಾ ತೈಲ ದರ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಡಿ ದಾಟಿರುವುದರಿಂದ ಪ್ರಮುಖ ತೈಲ ಕಂಪನಿಗಳಾದ ಒಎನ್‌ಜಿಸಿ, ಆಯಿಲ್ ಇಂಡಿಯಾ ಮುಂತಾದವುಗಳಿಗೆ ಲಾಭವಾಗುತ್ತಿರುವುದು ಸ್ಪಷ್ಟ. ಸರಕಾರವು ದೇಶೀಯವಾಗಿ ತೈಲ ನಿಕ್ಷೇಪಗಳ ಶೋಧ ಮತ್ತು ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವ ಕಂಪನಿಗಳು ಸರಕಾರಕ್ಕೆ ನೀಡಬೇಕಾದ ರಾಯಲ್ಟಿಯನ್ನು ಇಳಿಸಿರುವುದರಿಂದ ಅವುಗಳಿಗೆ ಅನುಕೂಲಕರವಾಗಿದೆ. ಒಂದು ವೇಳೆ ಸರಕಾರವು ಪೆಟ್ರೋಲ್-ಡೀಸೆಲ್ ದರವನ್ನು ಏರಿಸಿದರೆ ಎಚ್‌ಪಿಸಿಎಲ್, ಬಿಪಿಸಿಎಲ್ ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಷೇರುಗಳ ದರ ಏರಿಕೆಯಾಗುವ ಸಾಧ್ಯತೆ ಇದೆ.

ಎರಡನೆಯದಾಗಿ ಕೇಂದ್ರ ಸರಕಾರವು ಗಲ್ಫ್ ರಾಷ್ಟ್ರಗಳಿಂದ ನೇರವಾಗಿ ಪೈಪ್‌ಲೈನ್ ಮೂಲಕ ಗ್ಯಾಸ್ ಅನ್ನು ನಿರಂತರವಾಗಿ ತರಿಸಿಕೊಳ್ಳಲು ಯೋಜನೆ ಹಮ್ಮಿಕೊಂಡಿದೆ. ಅರಬ್ಬಿ ಸಮುದ್ರದ ಆಳದಲ್ಲಿ 20000 ಕಿಲೋಮೀಟರ್ ಉದ್ದದ ಮಾರ್ಗದಲ್ಲಿ ಪೈಪ್ ಲೈನ್ ಅಳವಡಿಸಿ, ಹಾರ್ಮುಜ್ ಜಲಸಂಧಿಯನ್ನು ಬೈಪಾಸ್ ಮಾಡಿಕೊಂಡು ನಿರಾತಂಕವಾಗಿ ಅನಿಲವನ್ನು ತರಿಸಿಕೊಳ್ಳುವುದು ಈ ಯೋಜನೆಯ ಉದ್ದೇಶವಾಗಿದೆ. ಒಟ್ಟು 40,000 ಕೋಟಿ ರುಪಾಯಿ ವೆಚ್ಚದ ಪ್ಲಾನ್ ಇದಾಗಿದೆ. ಒಮಾನ್‌ನಿಂದ ಗುಜರಾತ್ ಕರಾವಳಿಗೆ 7 ವರ್ಷದಲ್ಲಿ ಪೈಪ್ ಲೈನ್ ನಿರ್ಮಾಣವಾಗುವ ನಿರೀಕ್ಷೆ ಇದೆ. ಗೇಲ್, ಇಂಜಿನಿಯರ್ಸ್ ಇಂಡಿಯಾ ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ಗೆ ಈ ಸಂಬಂಧ ವಿಸ್ತೃತ ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲು ಸೂಚಿಸಲಾಗಿದೆ ಎಂದು ಇಕನಾಮಿಕ್ ಟೈಮ್ಸ್ ತಿಳಿಸಿದೆ. ದಿಲ್ಲಿ ಮೂಲದ ಸೌತ್ ಏಷ್ಯಾ ಗ್ಯಾಸ್ ಎಂಟರ್‌ಪ್ರೈಸಸ್ ಈ ಯೋಜನೆ ಬಗ್ಗೆ ಸರಕಾರದ ಗಮನ ಸೆಳೆದಿತ್ತು.

ದಿನಕ್ಕೆ 31 ಎಂಎಂಎಸ್‌ಸಿಎಂಡಿ (ಮಿಲಿಯನ್ ಮೆಟ್ರಿಕ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ಸ್ ಪರ್ ಡೇ) ನೈಸರ್ಗಿಕ ಅನಿಲವನ್ನು ತರಿಸಿಕೊಳ್ಳಬಹುದು. ಹಾರ್ಮುಜ್ ಜಲಸಂಧಿಯ ಅವಲಂಬನೆಯೂ ಇಲ್ಲಿ ಇರುವುದಿಲ್ಲ. ಏಕೆಂದರೆ ಒಮಾನ್‌ನಿಂದ ನೇರವಾಗಿ ಗುಜರಾತ್‌ಗೆ ಪೈಪ್‌ಲೈನ್‌ನಲ್ಲಿ ಪೂರೈಕೆಯಾಗಲಿದೆ.

2025ರಲ್ಲಿ ಭಾರತದ ಮೂರನೇ ಎರಡರಷ್ಟು ಎಲ್‌ಎನ್‌ಜಿಯು (ದ್ರವೀಕೃತ ನೈಸರ್ಗಿಕ ಅನಿಲ) ಹಾರ್ಮುಜ್ ಜಲಸಂಧಿಯ ಮೂಲಕ ಹಡಗುಗಳಲ್ಲಿ ಬರುತ್ತಿತ್ತು. ಫೆಬ್ರವರಿ 28ಕ್ಕೆ ಇರಾನ್ ಯುದ್ಧ ಆರಂಭವಾದ ಬೆನ್ನಲ್ಲೇ ಹಾರ್ಮುಜ್ ಜಲಸಂಧಿ ಬಂದ್ ಆಯಿತು. ಹಡಗುಗಳ ಸಂಚಾರಕ್ಕೆ ತಡೆ ಉಂಟಾಯಿತು. ಆಗ ಜಾಗತಿಕ ಮಟ್ಟದಲ್ಲಿ ಎಲ್‌ಎನ್‌ಜಿ ಪೂರೈಕೆ ಅಸ್ತವ್ಯಸ್ತವಾಯಿತು. ಹಾಗೂ ದರ ಏರಿಕೆಯಾಯಿತು. ಹೀಗಾಗಿ ಹಾರ್ಮುಜ್ ಜಲಸಂಧಿಯನ್ನು ಬೈಪಾಸ್ ಮಾಡಿ, ಗಲ್ಫ್ ರಾಷ್ಟ್ರಗಳಿಂದ ಎಲ್‌ಎನ್‌ಜಿ ತರಿಸಿಕೊಳ್ಳಲು ಪೈಪ್‌ಲೈನ್ ಅಳವಡಿಸುವ ಯೋಜನೆ ನಿರ್ಣಾಯಕವಾಗಿದೆ.

ಈ ಪೈಪ್‌ಲೈನ್ ಯೋಜನೆಯ ಕನಸು ನನಸಾದರೆ, ಭವಿಷ್ಯದ ದಿನಗಳಲ್ಲಿ ಹಾರ್ಮುಜ್ ಜಲಸಂಧಿಯ ಅವಲಂಬನೆ ಕಡಿಮೆಯಾಗಲಿದೆ. ಕೇವಲ ಒಮಾನ್ ಮಾತ್ರವಲ್ಲದೆ ಯುಎಇ, ಸೌದಿ ಅರೇಬಿಯಾ, ಟರ್ಕ್‌ಮೆನಿಸ್ತಾನ್‌ನಿಂದಲೂ ಅನಿಲವನ್ನು ತರಿಸಿಕೊಳ್ಳಬಹುದು.

ಅವಿವೇಕಿಗಳು ಹಾಗೂ ರಾಜಕೀಯ ವಿರೋಧಿಗಳು ಮಾತ್ರ ಪ್ರಧಾನಿ ನರೇಂದ್ರ ಮೋದಿಯವರ ವಿದೇಶ ಪ್ರವಾಸವನ್ನು ಟೀಕಿಸಬಲ್ಲರು. ವಾಸ್ತವವಾಗಿ ಮೋದಿಯವರು ದೇಶದ ಹಿತಾಸಕ್ತಿಗೆ ಸಂಬಂಧಿಸಿದಂತೆ ವಿದೇಶಗಳಿಗೆ ತೆರಳುತ್ತಾರೆಯೇ ಹೊರತು, ವೈಯಕ್ತಿಕ ಕಾರಣಗಳಿಗಂತೂ ಅಲ್ಲ. ಅಂಥ ಒಂದೇ ಒಂದು ನಿದರ್ಶನವೂ ಸಿಗುವುದಿಲ್ಲ. ಉದಾಹರಣೆಗೆ 2026ರ ಮೇ 15ರಂದು ಅಬುದಾಭಿಯಲ್ಲಿ ಯುಎಇಯ ಅಧ್ಯಕ್ಷ ಮಹಮ್ಮದ್ ಬಿನ್ ಝಯೀದ್ ಅಲ್ ಮಹ್ಯನ್ ಅವರನ್ನು ಮೋದಿ ಭೇಟಿಯಾಗಲಿದ್ದಾರೆ. ಅದೂ ಕೂಡ ಯುರೋಪಿನ ಪ್ರವಾಸದ ನಡುವೆ ಮೂರು ಗಂಟೆಗಳ ಅವಧಿಗೆ ಯುಎಇ ಭೇಟಿ ಮಾಡಲಿದ್ದಾರೆ. ಆ ಸಂದರ್ಭದಲ್ಲಿ ಎರಡು ಮಹತ್ವದ ಒಪ್ಪಂದಗಳಿಗೆ ಅಂಕಿತ ಬೀಳುವ ನಿರೀಕ್ಷೆ ಇದೆ. ಅದೇನೆಂದರೆ- ಅಡುಗೆ ಅನಿಲ ಅಥವಾ ಎಲ್ಪಿಜಿ ಪೂರೈಕೆಗೆ ಸಂಬಂಧಿಸಿ ಮತ್ತು ವ್ಯೂಹಾತ್ಮಕ ಪೆಟ್ರೋಲಿಯಂ ಸಂಗ್ರಹಾಗಾರಕ್ಕೆ ಸಂಬಂಧಿಸಿ. ದೇಶದ ಇಂಧನ ಭದ್ರತೆಗೆ ಇದು ಸಹಕಾರಿಯಾಗಲಿದೆ. ಪ್ರಸ್ತುತ ಭಾರತದ 40 ಪರ್ಸೆಂಟ್ ಎಲ್‌ಪಿಜಿಯನ್ನು ಯುಎಇ ಸರಬರಾಜು ಮಾಡುತ್ತಿದೆ. ಮಂಗಳೂರಿನಲ್ಲಿರುವ ತೈಲ ಸಂಗ್ರಹಾಗಾರಕ್ಕೆ ಲಕ್ಷಾಂತರ ಬ್ಯಾರೆಲ್ ಕಚ್ಚಾತೈಲವನ್ನು ಯುಎಇ ನೀಡಿದೆ. ಅದೇ ರೀತಿ ಮೋದಿಯವರು ಮೇ 15-20ರ ತನಕ ನೆದರ್ಲೆಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿಗೆ ತೆರಳಲಿದ್ದಾರೆ. ಅಲ್ಲೂ ತಣ್ಣನೆಯ ವಿಹಾರಾರ್ಥ ಹೋಗುತ್ತಿಲ್ಲ, ಭಾರತ-ಯುರೋಪ್ ಮುಕ್ತ ವ್ಯಾಪಾರ ಒಪ್ಪಂದವನ್ನು ಕಾರ್ಯಗತಗೊಳಿಸುವ ಸಲುವಾಗಿ ತೆರಳುತ್ತಿದ್ದಾರೆ. ಇದರಿಂದ ಗ್ರೀನ್ ಟೆಕ್ನಾಲಜಿ, ಎಐ, ಡಿಫೆನ್ಸ್ ಸಹಕಾರ ವಲಯದಲ್ಲಿ ಭಾರತಕ್ಕೆ ಅನುಕೂಲವಾಗಲಿದೆ.

ಭಟ್ಟರ್ ಸ್ಕಾಚ್

- ಷಣ್ಮುಖಿ, ಭದ್ರಾವತಿ
  ಭಟ್ಟರೇ, ಸೊಳ್ಳೆಗಳು ನಮ್ಮ ಕಿವಿಯಲ್ಲೇ ಯಾಕೆ ಹಾಡು ಹಾಡುತ್ತವೆ?
  - **ನಾವು ಎಚ್ಚರವಾಗಿದ್ದೇವೋ ಇಲ್ಲೋ ಅಂತ ಕನ್ಫರ್ಮ್ ಮಾಡಿಕೊಂಡು ಆಮೇಲೆ ಊಟ ಶುರು ಮಾಡೋಕೆ!**
- ಭಾರತಿ ಹೆಗಡೆ, ಸಿದ್ದಾಪುರ
  ಭಟ್ಟರೇ, ಫೋನೋ ತೆಗೆದುಕೊಳ್ಳುವಾಗ 'ಸ್ಕ್ರೀನ್ ಕ್ಲೀನ್' ಅಂತ ಯಾಕೆ ಹೇಳ್ತಾರೆ?
  - **ಅಲ್ಲಿಯೇ ಮಲಗಿಸಾರದಲ್ಲ?!**
- ಅರುಣ್ ರಾವ್, ಕೆಂಗೇರಿ
  ಭಟ್ಟರೇ, ಅಡುಗೆ ಮನೆಯಲ್ಲಿ ಮಿಕ್ಸಿ ಯಾಕೆ ಅಷ್ಟು ಜೋರಾಗಿ ಸದ್ದು ಮಾಡುತ್ತೆ?
  - **ತನ್ನ ಕೆಲಸದ ಬಗ್ಗೆ ಇಡೀ ಮನೆಗೆ ಗೊತ್ತಾಗಲಿ ಅನ್ನೋ ಪಬ್ಲಿಸಿಟಿ ಗೀಳು ಅದಕ್ಕೆ!**
- ಜಯತೀರ್ಥ ಆಚಾರ, ಬ್ಯಾಡಗಿ
  ಭಟ್ಟರೇ, ಬಸ್ ಕಂಡಕ್ಟರ್, ರಾಜಕಾರಣಿಗಳಿಗೆ ಏನು ಸಾಮ್ಯ?
  - **ಇಬ್ಬರಿಗೂ ಇರೋದು ಒಂದೇ ಚಿಂತೆ – 'ಸೀಟು'!**
- ಗೋವಿಂದರಾಜ್ ಕೆ.ಸಿ., ಕನಕಪುರ
  ಭಟ್ಟರೇ, ಮದುವೆ ಮೆರವಣಿಗೆಯಲ್ಲಿ ವರ ಯಾಕೆ ಕುದುರೆ ಮೇಲೆ ಕೂರಿರುತ್ತಾನೆ?
  - **'ಓಡಿ ಹೋಗಲು' ಇದೇ ಕೊನೆಯ ಚಾನ್ಸ್ ಅಂತ ಚೆಕ್ ಮಾಡೋಕೆ!**
- ಎಂ.ಎಂ.ಲೋಕೇಶ, ಪಿರಿಯಾಪಟ್ಟಣ
  ಭಟ್ಟರೇ, ಸೀರಿಯಲ್‌ಗಳಲ್ಲಿ ಯಾಕೆ ಒಂದು ವಿಷಯವನ್ನೇ ಮೂರು ಬಾರಿ ತೋರಿಸ್ತಾರೆ?
  - **ಒಂದು ಬಾರಿ ನೋಡಿದ್ರೆ ನಮಗೆ ಅರ್ಥವಾಗಲ್ಲ ಅಂತ ಅವರ ನಂಬಿಕೆ!**
- ಹನುಮೇಶ ಸಿಲ್ಲ, ಮೈಸೂರು
  ಭಟ್ಟರೇ, ಹಳೇ ಕಾಲದ ಪ್ರೇಮಕ್ಕೂ ಈಗಿನ ಪ್ರೇಮಕ್ಕೂ ಏನು ವ್ಯತ್ಯಾಸ?
  - **ಅವತ್ತು ರಕ್ತದಲ್ಲಿ ಪತ್ರ ಬರೆಯುತ್ತಿದ್ದರು, ಇವತ್ತು ಮಿಸ್ಡ್ ಕಾಲ್!**
- ರಾಜು, (ಇಮೇಲ್ ಮೂಲಕ)
  ಭಟ್ಟರೇ, ಇಸ್ತ್ರಿ ಮಾಡುವಾಗ ಶರ್ಟ್ ಯಾಕೆ ಸುಟ್ಟು ಹೋಗುತ್ತದೆ?
  - **ಐರನ್ ಬಾಕ್ಸ್‌ಗೆ ನಿಮ್ಮ ಹೊಸ ಶರ್ಟ್ ಕಂಡರೆ ಹೊಟ್ಟೆಕಿಚ್ಚು ಅಂತ!**
- ಕೆ.ಹೇಮಂತ, ಮಂಡ್ಯ
  ಭಟ್ಟರೇ, ದೇವಸ್ಥಾನದ ಮುಂದೆ ಚಪ್ಪಲಿ ಯಾಕೆ ಕಳ್ಳತನವಾಗುತ್ತದೆ?
  - **ನಾವು ದೇವರಿಗೆ ಹರಕೆ ಕಟ್ಟಿದ್ರೆ, ಚಪ್ಪಲಿ ಕಳ್ಳ ದೇವರಿಗೆ ಲಂಚ ಕೊಟ್ಟಿರುತ್ತಾನೆ!**
- ಭಟ್ಟರೇ, ಸಾಲ ಕೊಟ್ಟವನಿಗಿಂತ ಸಾಲ ಪಡೆದವನು ಯಾಕೆ ಆರಾಮಾಗಿ ಇರುತ್ತಾನೆ?
  - **ಕೊಟ್ಟವನಿಗೆ ವಾಪಸ್ ಪಡೆಯುವ ಚಿಂತೆ, ತಗೊಂಡವನಿಗೆ ನಿಧಾನವಾಗಿ ಕೊಟ್ಟರಾಯ್ತು ಎಂಬ ಯೋಚನೆ!**

ಕನ್ನಡ ಓದುಗರ ಅಭಿರುಚಿ ಮತ್ತು ಗ್ರಂಥಾಲಯ ಖರೀದಿ

ಶಶಾಂಕಣ

ಶಶಿಧರ ಹಾಲಾಡಿ

vveditoped@gmail.com

ಕನ್ನಡದ ಪ್ರಮುಖ ಪುಸ್ತಕದ ಮಾರಾಟಗಾರರೊಬ್ಬರು ಇತ್ತೀಚೆಗೆ ಮಾತಿಗೆ ಸಿಕ್ಕಿದ್ದರು; ಅವರು ಹೇಳಿದ ವಿಚಾರ ಕೇಳಿ ತುಸು ಅಚ್ಚರಿ, ತುಸು ಕಳವಳ, ತುಸು ಗಾಬರಿಯೂ ಆಯಿತು; ಕನ್ನಡ ಪುಸ್ತಕಗಳ ಓದುಗರ ಅಭಿರುಚಿಯನ್ನು ಅವರು ಬಹುಕಾಲದಿಂದ ಗಮನಿಸಿದ್ದರು, ಚೆನ್ನಾಗಿ ಗುರುತಿಸಿದ್ದರು; ಮತ್ತು ಸ್ಪಷ್ಟವಾಗಿ ವಿಶ್ಲೇಷಿಸಬಲ್ಲರು. ಅವರ ಮಾತಿನಂತೆ, ಈ ವರ್ಷ ಅತಿ ಹೆಚ್ಚು ಮಾರಾಟವಾದ ಕನ್ನಡ ಪುಸ್ತಕಗಳು ಯಾವುವು ಎಂದು ನೋಡಿದರೆ, ಹೆಚ್ಚಿನವು ಬೇರೆ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಪುಸ್ತಕಗಳು! ಬೇರೆ ಭಾಷೆಯಲ್ಲಿ ಹೆಚ್ಚು ಪ್ರಸಿದ್ಧವಾಗಿರುವ ಪುಸ್ತಕಗಳ ಕನ್ನಡ ಅನುವಾದಗಳು ಈಗ ಚೆನ್ನಾಗಿ ಮಾರಾಟವಾಗುತ್ತವಂತೆ! ಉದಾಹರಣೆಗೆ ಅಂತಹ ಒಂದು ಪುಸ್ತಕವು ಪ್ರತಿ ವಾರ ಮಾರಾಟಗೊಂಡ 100 ಕನ್ನಡ ಪುಸ್ತಕಗಳನ್ನು ಗಮನಿಸಿದರೆ, ಶೇ.60ರಷ್ಟು ಅನುವಾದಿತ!

'ಇದೇಕೆ ಹೀಗೆ?' ಎಂದು ಕೇಳಿದ್ದೆ; 'ಜನರ ಅಭಿರುಚಿ ಬದಲಾಗಿದೆ' ಎಂಬುದು ಒಂದು ಉತ್ತರ; ಇನ್ನೊಂದು ಉತ್ತರವೆಂದರೆ, 'ಕನ್ನಡದಲ್ಲಿ ಗುಣಮಟ್ಟದ ಒರಿಜಿನಲ್ ಪುಸ್ತಕಗಳು ಪ್ರಕಟವಾಗುವುದೇ ಕಡಿಮೆಯಾಗಿದೆ' ಎಂದರು. ಕನ್ನಡದಲ್ಲಿ ವರ್ಷಕ್ಕೆ 8,000 ಟೈಟಲ್‌ಗಳು ಪ್ರಕಟವಾಗುತ್ತವೆಂಬುದು ಒಂದು ವಿಚಿತ್ರ ಅಂದಾಜು. ಇಷ್ಟಿದ್ದರೂ, ಗುಣಮಟ್ಟದ ಪುಸ್ತಕಗಳು ಬರುತ್ತಿಲ್ಲ ಎಂದರೆ, ಭಾಷೆಯೊಂದರ ಬೆಳವಣಿಗೆಯ ಪ್ರಮಾಣ ಕಡಿಮೆಯಾಗಿದೆಯೇ? ಅದೇ ಪುಸ್ತಕ ಮಾರಾಟಗಾರರ ಅನುಭವದಂತೆ, ಕನ್ನಡದಲ್ಲಿ ಈಗ ಹೆಚ್ಚು ಮಾರಾಟವಾಗುವ ಪುಸ್ತಕಗಳು ತೇಜಸ್ವಿ, ಭೈರಪ್ಪ ಮೊದಲಾದ ಹಿರಿಯ ಲೇಖಕರ ಪುಸ್ತಕಗಳು ಮಾತ್ರ. 'ತೇಜಸ್ವಿ, ಭೈರಪ್ಪ, ಕಾರಂತ ಇಂತಹವರ ಪುಸ್ತಕಗಳನ್ನು ಹೊರತುಪಡಿಸಿದರೆ, ಕನ್ನಡ ಪುಸ್ತಕ ಮಾರಾಟಗಾರರು ತಮ್ಮ ವೃತ್ತಿಯನ್ನು ಮುಂದುವರಿಸಲು ಅನುಕೂಲವಾಗುವಂತೆ ಮಾರಾಟವಾಗುವ ಕನ್ನಡ ಪುಸ್ತಕಗಳು ಯಾವುವು?' ಎಂದು ಕೇಳಿದೆ. ಒಂದರ ಹಿಂದೆ ಒಂದರಂತೆ ಕೇಳಿದ ನನ್ನ ಕೆಲವು ಪ್ರಶ್ನೆಗಳು ಅವರ ತಾಳ್ಮೆಯನ್ನೇ ಪರೀಕ್ಷಿಸಿರಬೇಕು. 'ಲಲಿತ ಸಹಸ್ರನಾಮದಂತಹ ಪುಸ್ತಕಗಳು!' ಎಂದರು ಮುಗುಳ್ನಗುತ್ತಾ.

ಮೂಲ ಕನ್ನಡ ಪುಸ್ತಕಗಳಿಗಿಂತ, ಅನುವಾದಿತ ಪುಸ್ತಕಗಳನ್ನೇ ಕನ್ನಡ ಓದುಗರು ಹೆಚ್ಚು ಖರೀದಿಸುತ್ತಿದ್ದಾರೆ ಎಂಬ ಈ ಮಾಹಿತಿ ಮೊದಲಿಗೆ ತುಸು ಅಚ್ಚರಿ ಮೂಡಿಸುತ್ತದೆ. ಆದರೆ, ಕಳೆದ ಕೆಲವು ದಶಕಗಳಿಂದ ಕನ್ನಡ ಭಾಷೆಯ ಬೆಳವಣಿಗೆ, ಭಾಷಾ ಮಾಧ್ಯಮ, ಜನಸಾಮಾನ್ಯರ ಮನೋಗತ ಮೊದಲಾದ ದಿಕ್ಕುಗಳನ್ನು ಗಮನಿಸುತ್ತಾ ಹೋದರೆ, ಕನ್ನಡದಲ್ಲಿ ಗುಣಮಟ್ಟದ ಪುಸ್ತಕಗಳು ಹೊರಬರುವುದು ಕಡಿಮೆಯಾಗಿರುವುದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋಗಬಹುದು. ಕನ್ನಡಿಗರು ಮೊದಲಿಂದಲೂ ಉತ್ತಮ ಸಾಹಿತ್ಯ ಓದುವವರು; ಉತ್ತಮ ಲೇಖಕರು ಸಹ ನೆರೆಯಲ್ಲಿ ಸಾಕಷ್ಟು ಜನಿಸಿದ್ದಾರೆ. ಹಾಗಿದ್ದರೆ, ಈಚಿನ ವರ್ಷಗಳಲ್ಲಿ ಗುಣಮಟ್ಟದ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಏಕೆ ಹೊರಬರುತ್ತಿಲ್ಲ?

ಉತ್ತರ ಭಾರತದಲ್ಲಿ 'ಮೈಥಿಲಿ' ಎಂಬ ಭಾಷೆ ಇದೆ. ಹನ್ನೆರಡನೆಯ ಶತಮಾನದ ತನಕ ಆ ಭಾಷೆ ಬಳಸಿ, ಸಾಹಿತ್ಯರಚನೆಗಳನ್ನು ಬರೆಯುತ್ತಿದ್ದರು; ದೇಶಕ್ಕೆ ಸ್ವಾತಂತ್ರ್ಯ ಬರುವ ತನಕವೂ ಅದೊಂದು ಪ್ರಮುಖ ಭಾಷೆ ಎನಿಸಿತ್ತು; ಆ ಭಾಷೆಯಲ್ಲಿ ಕಾವ್ಯಗಳು ರಚನೆಗೊಂಡಿದ್ದವು. ಅದಕ್ಕೆ ರಾಜಾಶ್ರಯವೂ ಇತ್ತು. ಸ್ವಾತಂತ್ರ್ಯ ದೊರಕಿದ ನಂತರ, ಅಲ್ಲೆಲ್ಲಾ ಹಿಂದಿ ಶಾಲೆಗಳು ಆರಂಭಗೊಂಡು, ಮೈಥಿಲಿ, ಭೋಜಪುರಿ, ಮಗಧಿ ಮೊದಲಾದ ಭಾಷೆಯನ್ನು ಮಾತೃಭಾಷೆಯಾಗಿ ಹೊಂದಿದವರೆಲ್ಲರೂ, ಸಾರಾಸಗಟಾಗಿ ಹಿಂದಿಯನ್ನು ಕಲಿತುಕೊಂಡರು; ಹಳ್ಳಿ ಹಳ್ಳಿಗಳಲ್ಲಿ ಶಾಲೆಗಳು ತೆರೆದಲ್ಲೆಲ್ಲಾ ಹಿಂದಿಯದ್ದೇ ಕಾರುಬಾರು. ಹೀಗೆ ನಾಲ್ಕಾರು ದಶಕ ಹಿಂದಿಯನ್ನು ಓದಿದ ತಲೆಮಾರು, ತನ್ನ ಮಾತೃಭಾಷೆಯ ಕಾವ್ಯ ಮತ್ತು ಸಾಹಿತ್ಯವನ್ನೇ ಮರೆತಿದೆ! ಮೈಥಿಲಿಯಲ್ಲಿ ಈಗ ಬರೆಯುವವರು ಕಡಿಮೆ. ಆ ಭಾಷೆಯ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದ್ದರೂ, ಓದುವವರ, ಬರೆಯುವವರ ಸಂಖ್ಯೆ ಕಡಿಮೆಯಾಗಿದೆ! ಮನೆಯಲ್ಲಿ ಮಾತನಾಡುತ್ತಾರೆ, ಜತೆಗಾರರ ಜತೆ ಮಾತನಾಡುತ್ತಾರೆ. ಆದರೆ ಓದುವ ಬರೆಯುವ ವಿಚಾರಕ್ಕೆ ಬಂದಾಗ, ಹಿಂದಿ ಮತ್ತು ಕೆಲವು ಕಡೆ ಇಂಗ್ಲಿಷ್. ಆದ್ದರಿಂದ, ಮೈಥಿಲಿ 'ಅಡಿಗೆ ಮನೆ' ಭಾಷೆಯಾಗಿ ಬದಲಾಗಿ ಹೋಗಿದೆ!

ಕನ್ನಡ ಈಗ ಅಂಥದ್ದೇ ಸ್ಥಿತ್ಯಂತರ ಸನ್ನಿವೇಶದಲ್ಲಿ ಇದೆಯೇ? ಈ ಪ್ರಶ್ನೆ ಬಲು ಸೂಕ್ಷ್ಮವಾದುದು. ಏಕೆಂದರೆ, ಕನ್ನಡ ಭಾಷಾಭಿಮಾನಿಗಳು, ನನ್ನನ್ನೂ ಸೇರಿದಂತೆ, ಕನ್ನಡವು ದಿನದಿಂದ ದಿನಕ್ಕೆ ಕಸುವುಗೊಳ್ಳುತ್ತಾ ಬೆಳೆಯುತ್ತಿದೆ ಎಂದೇ ನಂಬಿದ್ದಾರೆ. 'ಕನ್ನಡಕ್ಕೆಂದೂ ಅಳಿವಿಲ್ಲ'. ಆದರೆ, ಗುಣಮಟ್ಟದ ಸಾಹಿತ್ಯ ರಚನೆಯ ವಿಚಾರಕ್ಕೆ ಬಂದಾಗ, ಮೊದಲಿನಷ್ಟು ಸಮೃದ್ಧವಾಗಿ ಮುಂದುವರಿಯುತ್ತಿಲ್ಲವೇ ಎಂಬ ಗುಮಾನಿ ಬರುತ್ತಿದೆ. ಕನ್ನಡದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ರಚನೆಗೊಂಡ ಸಾಹಿತ್ಯಕೃತಿಗಳೇ, ಇಂದಿಗೂ ಹೆಚ್ಚು ಮಾರಾಟವಾಗುತ್ತಿರುವ ಕೃತಿಗಳು ಎಂಬ ಅಂಕಿ ಅಂಶಗಳು ಈ ವಿಚಾರಕ್ಕೆ ಪುಷ್ಟಿ ಕೊಡುತ್ತಿವೆ. ಹಾಗಿದ್ದರೆ ಈಚಿನ ವರ್ಷಗಳಲ್ಲಿ ಉತ್ತಮ ಕೃತಿಗಳ ಸಂಖ್ಯೆ ಕಡಿಮೆಯಾಗಿದೆಯೇ? ಇದೊಂದು ಬಹು ಪ್ರಮುಖ ಪ್ರಶ್ನೆ.ಕಳೆದ ನಾಲ್ಕು ದಶಕಗಳಲ್ಲಿ, ಕನ್ನಡ ಮಾತೃಭಾಷೆ ಹೊಂದಿರುವ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸಿದ್ದಾರೆ; ಜತೆಗೆ, ಇದೇ ಅವಧಿಯಲ್ಲಿ, ಭಾಷಾ ವಿಷಯಗಳ ಅಧ್ಯಯನಕ್ಕೆ ಹೋಲಿಸಿದರೆ, ತಾಂತ್ರಿಕ ವಿದ್ಯಾಭ್ಯಾಸಕ್ಕೆ ಅಪಾರ ಪ್ರೋತ್ಸಾಹ ದೊರಕಿದೆ; ಸಾವಿರಾರು ಯುವಜನತೆ ಪ್ರತಿವರ್ಷ ತಾಂತ್ರಿಕ, ವೈದ್ಯಕೀಯ, ಕಂಪ್ಯೂಟರ್ ಶಿಕ್ಷಣ ಪಡೆಯುತ್ತಿದ್ದಾರೆ; ಅವೆಲ್ಲವೂ ಇಂಗ್ಲಿಷ್ ಮಾಧ್ಯಮದಲ್ಲೇ ಬೋಧನೆಗೊಳ್ಳುತ್ತಿರುವುದರಿಂದ, ಅಷ್ಟರ ಮಟ್ಟಿಗೆ ಗುಣಮಟ್ಟದ ಕನ್ನಡದ ಕಲಿಕೆ ಕಡಿಮೆಯಾಗಿದೆ. ಮುಂದುವರಿದು, ಈಗ ಒಂದೆರಡು ವರ್ಷಗಳಿಂದ, ಹಳ್ಳಿ ಹಳ್ಳಿಗಳಲ್ಲೂ ಸರಕಾರಿ ಶಾಲೆಗಳು ಇಂಗ್ಲಿಷ್ ಮಾಧ್ಯಮಕ್ಕೆ ಹೊರಳಿಕೊಳ್ಳುತ್ತಿವೆ. ಹಳ್ಳಿಯ ಜನರು ತಮ್ಮ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲೇ ಓದಲಿ ಎಂದು ಬಯಸುತ್ತಿದ್ದಾರೆ. ಪರಿಣಾಮ, ಮುಂದಿನ ಒಂದೆರಡು ದಶಕಗಳಲ್ಲಿ, ಕನ್ನಡ ಭಾಷೆಯ ಮೇಲೆ ಆಗಿಯೇ ಆಗುತ್ತದೆ. ಜನರು ಕನ್ನಡ ಮಾತನಾಡುವುದನ್ನು ಬಿಡಲಾರರು; ಆದರೆ, ಗುಣಮಟ್ಟದ ಸಾಹಿತ್ಯವು ಕನ್ನಡದಲ್ಲಿ ರಚನೆಗೊಳ್ಳುವ ಅವಕಾಶ ಕಡಿಮೆಯಾಗುತ್ತಾ ಹೋಗುತ್ತದೆ.

ಇನ್ನು, ಅದೇಕೆ ಕನ್ನಡಕ್ಕೆ ಅನುವಾದಗೊಂಡ ಪುಸ್ತಕಗಳು ಹೆಚ್ಚು ಜನಪ್ರಿಯವಾಗುತ್ತಿವೆ? ಒಂದು ಸರಳ ಉತ್ತರವೆಂದರೆ, ಕನ್ನಡದ ಓದುಗರು, ಬೇರೆ ಭಾಷೆಗಳಲ್ಲಿ ರಚನೆಗೊಂಡ ಕೃತಿಗಳ ಪರಿಚಯವನ್ನು ಮಾಡಿಕೊಳ್ಳಬಯಸುತ್ತಿದ್ದಾರೆ ಮತ್ತು ವಿಶ್ವದ ಬೇರೆ ಬೇರೆ ವಿದ್ಯಮಾನಗಳ ಪರಿಚಯವನ್ನು ಕನ್ನಡದಲ್ಲೇ ಮಾಡಿಕೊಳ್ಳಬಯಸುತ್ತಿದ್ದಾರೆ! ಈ ಉತ್ತರ ಮೇಲ್ನೋಟಕ್ಕೆ ಒಪ್ಪಿತವಾದರೂ, ಅನುವಾದಿತ ಕೃತಿಗಳಿಗೆ ಸಮನಾದ ಸಂಖ್ಯೆಯಲ್ಲಿ ಗುಣಮಟ್ಟದ ಕನ್ನಡ ಪುಸ್ತಕಗಳೇಕೆ ಪ್ರಕಟಗೊಳ್ಳುತ್ತಿಲ್ಲ ಎಂಬ ಪ್ರಶ್ನೆ, ಹಾಗೆಯೇ ಉಳಿಯುತ್ತಿದೆ. ಇದಕ್ಕೆ ಹಲವು ಉತ್ತರಗಳು ದೊರಕಬಹುದು; ಆದರೆ, ಕಳವಳ ಮತ್ತು ಅತೃಪ್ತಿ ಉಳಿದೇ ಇರುತ್ತದೆ.

ಕನ್ನಡದಲ್ಲಿ ಪ್ರತಿವರ್ಷ 8000 ಟೈಟಲ್‌ಗಳು ಪ್ರಕಟವಾಗುತ್ತಿವೆ ಮತ್ತು ಹಲವು ಟೈಟಲ್‌ಗಳು ಬೇಗನೆ ಮರುಮುದ್ರಣಗೊಳ್ಳುತ್ತಿವೆ ಎಂಬ ಮಾಹಿತಿಯ ಬಗ್ಗೆ ಅನುಮಾನವಿಲ್ಲ. ಆದರೆ, ಇಷ್ಟೊಂದು ದೊಡ್ಡ ಮಟ್ಟದ ಪುಸ್ತಕ ಪ್ರಕಾಶನ ಉದ್ಯಮವು, ಈಗ ಒಂದು ವರ್ಷದಿಂದ ತೀವ್ರ ತೊಳಲಾಟದಲ್ಲಿದೆ ಎಂಬ ವಿಚಾರವನ್ನು ಗಮನಿಸಬಹುದು. ಕಳೆದ ಒಂದು ವರುಷದಿಂದ ವ್ಯಕ್ತವಾದ ಕನ್ನಡ ಪುಸ್ತಕ ಪ್ರಕಾಶಕರ ನೋವು, ಅಳಲು, ಒತ್ತಾಯ ಇವುಗಳನ್ನು ಗಮನಿಸಿದರೆ, ಪ್ರಕಾಶಕರು ತೀವ್ರ ಒತ್ತಡದಲ್ಲಿದ್ದಾರೆ. ಅದಕ್ಕೆ ಮುಖ್ಯ ಕಾರಣ ಎಂದರೆ ಪ್ರಭುತ್ವದ ನಿಲುವು! ಏನದು? ಇಷ್ಟು ಕಾಲ, ಪ್ರತಿ ವರ್ಷವೂ, ದೊಡ್ಡ ಮೊತ್ತದ ಪುಸ್ತಕಗಳನ್ನು ಸರ್ಕಾರಿ ಗ್ರಂಥಾಲಯಗಳು ಖರೀದಿಸುತ್ತಿದ್ದವು. ಆ ಖರೀದಿಯಿಂದ ದೊರಕಿತ ಲಾಭವೇ, ಕನ್ನಡ ಪ್ರಕಾಶನ ಉದ್ಯಮಕ್ಕೆ ಬೆನ್ನೆಲುಬಿನ ರೀತಿ ಪ್ರೋತ್ಸಾಹ ನೀಡುತ್ತಿತ್ತು. ಆದರೆ, ಈಗ ಒಂದೆರಡು ವರ್ಷಗಳಿಂದ,

ಗ್ರಂಥಾಲಯಗಳಿಂದ ಪುಸ್ತಕ ಖರೀದಿ ಬಹುಮಟ್ಟಿಗೆ ನಿಂತುಹೋಗಿದೆ, ಅಥವಾ ಏರುಪೇರಾಗಿದೆ. ಎಷ್ಟರ ಮಟ್ಟಿಗೆ ಎಂದರೆ, 2020–21ರ ಸಾಲಿನಲ್ಲಿ ಗ್ರಂಥಾಲಯ ಇಲಾಖೆಯಿಂದ ಆಯ್ಕೆಯಾದ ಪುಸ್ತಕಗಳನ್ನು ಇನ್ನೂ ಸರಕಾರವು ಖರೀದಿಸಿಲ್ಲವಂತೆ! ಇದರಿಂದಾಗಿ, ಅಂತಹ ಪುಸ್ತಕಗಳನ್ನು ಪ್ರಕಟಿಸಿದ ಪ್ರಕಾಶಕರು, ಹಾಕಿದ ಬಂಡವಾಳ ವಾಪಸು ಬರದೇ, ತೀವ್ರ ಒತ್ತಡದಲ್ಲಿದ್ದಾರೆ. ಇನ್ನೂ ಒಂದು ಪ್ರಮುಖ ಸಂಗತಿ ಎಂದರೆ, ಪುಸ್ತಕ ಖರೀದಿಗೆಂದೇ ಪ್ರಭುತ್ವವು ಸಾರ್ವಜನಿಕರಿಂದ ಸೆಸ್ ಸಂಗ್ರಹಿಸಿದ್ದು, 600 ಕೋಟಿ ರುಪಾಯಿಗೂ ಅಧಿಕ ಮೊತ್ತದ ಅಂತಹ ಸೆಸ್ ಪ್ರಭುತ್ವದ ವಶದಲ್ಲಿದೆಯಂತೆ. ಆದರೆ, ಆ ಹಣವನ್ನು ಬಳಸಿ, ಗ್ರಂಥ ಖರೀದಿ ಮಾತ್ರ ನಡೆಯುತ್ತಿಲ್ಲ! ಇದು ನಿಜಕ್ಕೂ ವಿಷಾದದ ಸಂಗತಿ. ಒಂದು ಉದ್ದೇಶಕ್ಕೆ ಹಣವನ್ನು ಸಾರ್ವಜನಿಕರಿಂದ ಸಂಗ್ರಹಿಸಿ, ಆ ಹಣವನ್ನು ಸೂಕ್ತವಾಗಿ ಖರ್ಚು ಮಾಡದಿರುವುದು ಸಮಂಜಸವಲ್ಲ. ಜತೆಗೆ, ಈ ಚಟುವಟಿಕೆಯ ಹಿಂದೆ ಒಂದು ಘನ ಉದ್ದೇಶವಿದೆ : ಜನರಲ್ಲಿ, ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುವುದು, ಹಳ್ಳಿ ಹಳ್ಳಿಯಲ್ಲಿರುವ ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳನ್ನು ಸರಬರಾಜು ಮಾಡುವುದು. ಆದರೆ, ಆ ಉದ್ದೇಶವೇ ಇಂದು ವಿಫಲವಾದಂತಿದೆ.

ಹಾಗಿದ್ದರೆ, ಕನ್ನಡ ಪುಸ್ತಕಗಳು ಇಷ್ಟೊಂದು ಸಂಖ್ಯೆಯಲ್ಲಿ ಹೊರಬರಲು, ಗ್ರಂಥಾಲಯ ಇಲಾಖೆಯ ಬೆಂಬಲವೇ ತೀರಾ ಅಗತ್ಯವೇ? ಅಕಸ್ಮಾತ್, ಪ್ರಭುತ್ವವು ಪುಸ್ತಕ ಖರೀದಿಸುವುದನ್ನು ನಿಲ್ಲಿಸಿದರೆ, ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ 8000 ಟೈಟಲ್‌ಗಳು ಹೊರಬರುವುದಿಲ್ಲವೇ? ಇದು ಮೇಲ್ನೋಟಕ್ಕೆ ನಿಜವೆಂದೇ ಕಾಣಿಸುವಂತಿದೆ. ನಾವೆಲ್ಲಾ ಈಗಿನ ವ್ಯವಸ್ಥೆಗೆ ಎಷ್ಟರ ಮಟ್ಟಿಗೆ ಒಗ್ಗಿಕೊಂಡು, ಒಪ್ಪಿಕೊಂಡುಬಿಟ್ಟಿದ್ದೇವೆಂದರೆ, ಕನ್ನಡ ಪುಸ್ತಕಗಳನ್ನು ಪ್ರತಿವರ್ಷ ಖರೀದಿಸುವುದು ಪ್ರಭುತ್ವದ ಕರ್ತವ್ಯ ಎಂಬ ಭಾವನೆ ಸಾರ್ವತ್ರಿಕವಾಗಿದೆ. ಬಹು ಹಿಂದೆ, ಉದಾಹರಣೆಗೆ 1960–70ರ ದಶಕಗಳಲ್ಲಿ, ಅದಕ್ಕೂ ಮುಂಚೆ, ಇಷ್ಟೊಂದು ದೊಡ್ಡ ಮೊತ್ತದ ಪುಸ್ತಕ ಖರೀದಿಯನ್ನು ಗ್ರಂಥಾಲಯ ಇಲಾಖೆಗಳು ಮಾಡುತ್ತಿರಲಿಲ್ಲ; ಆಗ ಕನ್ನಡದಲ್ಲಿ ಪ್ರಕಟವಾಗುವ ಟೈಟಲ್‌ಗಳು ಕಡಿಮೆಯಿದ್ದವು. ಆದರೆ, ಗುಣಮಟ್ಟದ ಪುಸ್ತಕಗಳು ಹೊರಬರುತ್ತಿದ್ದವು! ಕನ್ನಡದ ಶ್ರೇಷ್ಠ ಕೃತಿಗಳ ಸಾಲಿನಲ್ಲಿ ನಿಲ್ಲುವ ಮರಳಿ ಮಣ್ಣಿಗೆ, ಮಲೆಗಳಲ್ಲಿ ಮದುಮಗಳು, ಚೋಮನದುಡಿ ಮೊದಲಾದ ಕೃತಿಗಳು ಆ ಅವಧಿಯಲ್ಲೇ ಪ್ರಕಟಗೊಂಡವು! ಅವುಗಳನ್ನು ಜನರು ಇಂದಿಗೂ ಖರೀದಿಸಿ ಓದುತ್ತಿದ್ದಾರೆ! ಆದ್ದರಿಂದ, ಗುಣಮಟ್ಟದ ಪುಸ್ತಕಗಳು ಹೊರಬರಬೇಕೆಂದರೆ, ಪ್ರಭುತ್ವದ ಸಗಟು ಖರೀದಿಯ ಬೆಂಬಲ ತೀರಾ ಅಗತ್ಯ ಎಂದೇನಿಲ್ಲ! ಬಹುದೊಡ್ಡ ಮೊತ್ತದ ಪುಸ್ತಕಗಳನ್ನು ಗ್ರಂಥಾಲಯ ಇಲಾಖೆ ಖರೀದಿಸುತ್ತದೆ ಎಂಬ ನಂಬಿಕೆಯಿಂದ ಪ್ರತಿವರ್ಷ 8000 ಟೈಟಲ್‌ಗಳು ಹೊರಬರುತ್ತವೆ ಎಂದಾದಾಗ, ಅಲ್ಲಿ ಗುಣಮಟ್ಟಕ್ಕಿಂತ ಸಂಖ್ಯೆಗೇ ಹೆಚ್ಚು ಪ್ರಾಧಾನ್ಯವೇ? ಈ ವಿಷಯವನ್ನು ಮತ್ತೆ ಮತ್ತೆ ಚರ್ಚೆಗೊಳಪಡಿಸಬಹುದು; ಆದರೆ, ಕಳೆದ ಮೂರ್‍ನಾಲ್ಕು ವರ್ಷಗಳಿಂದ ಗ್ರಂಥಾಲಯ ಇಲಾಖೆ ಸಗಟು ಖರೀದಿಯನ್ನು ತಡೆಹಿಡಿದಿರುವುದರಿಂದಾಗಿ, ಒಟ್ಟಾರೆ ಕನ್ನಡ ಪ್ರಕಾಶನ ಉದ್ಯಮಕ್ಕೆ, ಹೊಸ ಲೇಖಕರಿಗೆ, ಗುಣಮಟ್ಟದ ಕೃತಿಗಳನ್ನು ಬರೆಯುವ ಸಾಹಿತಿಗಳಿಗೆ ಅಷ್ಟರ ಮಟ್ಟಿಗೆ ಹೊಡೆತ, ತೊಡಕುಂಟಾಗಿರುವುದಂತೂ ನಿಜ.

ಸಗಟು ಖರೀದಿಯ ಕುರಿತು ಮಾತನಾಡುವಾಗಲೇ, ಇಂದಿನ ಕಾಲಮಾನದಲ್ಲಿ ಬದಲಾಗುತ್ತಿರುವ ಓದುಗರ ಅಭಿರುಚಿಯನ್ನೂ ಗಮನಿಸಬೇಕು. ಕನ್ನಡ ನಾಡಿನ ಜನರಲ್ಲಿ ಓದುವ ಅಭಿರುಚಿ ಜಾಸ್ತಿ ಎಂಬ ಮಾತಿದೆ. ಆದರೆ, ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ, ಈಚಿನ ವರ್ಷಗಳಲ್ಲಿ ನಾನಾ ಮಾಧ್ಯಮಗಳಲ್ಲಿ ಜನರ ಅಭಿರುಚಿ ಹಂಚಿಹೋಗಿದೆ. ಸಾಮಾಜಿಕ ಜಾಲತಾಣ, ರೀಲ್ ಮೊದಲಾದ ಮಾಧ್ಯಮಗಳಲ್ಲಿ ಪ್ರತಿಭಾವಂತರು ತಮ್ಮ ಸೃಜನಶೀಲತೆ ತೋರುತ್ತಿದ್ದಾರೆ. ಅಂತಹ ಹೊಸ, ಹೆಚ್ಚು ಚುರುಕಾದ, ಹೆಚ್ಚು ಮನಮುಟ್ಟುವ ಮಾಧ್ಯಮಗಳನ್ನು ನೋಡುವ ಜನರೂ ಹೆಚ್ಚಳಗೊಂಡಿದ್ದಾರೆ. ಕನ್ನಡ ಮಾತೃಭಾಷೆಯ ಜನರು, ಇಂಗ್ಲಿಷ್ ಭಾಷೆಯ ಸಾಹಿತ್ಯವನ್ನು, ರೀಲ್‌ಗಳನ್ನು ಹೆಚ್ಚು ನೋಡುತ್ತಿದ್ದಾರೆ; ನಾಡಿನ ಬಹುಪಾಲು ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವುದೂ ಇದಕ್ಕೆ ಒಂದು ಕಾರಣ. ಈ ನಡುವೆ, ಎ.ಐ. ಪ್ರಗತಿಯು ಸಾಹಿತ್ಯ ರಚನೆಯ ಮೇಲೆ ಬೀರಿರುವ ಪರಿಣಾಮವೂ ಚರ್ಚೆಯಾಗುತ್ತಿದೆ.

ಹಾಗೆಂದು, ಯುವಜನತೆ, ಕನ್ನಡದ ಉತ್ತಮ ಕೃತಿಗಳನ್ನು ಓದುತ್ತಿಲ್ಲವೆಂದಲ್ಲ! ಓದುತ್ತಿದ್ದಾರೆ, ಆದರೆ ಇಂಗ್ಲಿಷ್‌ನಲ್ಲಿ, ಲ್ಯಾಪ್‌ಟಾಪ್‌ನಲ್ಲಿ, ಟ್ಯಾಬ್‌ನಲ್ಲಿ! ಈ ಬರಹದ ಆರಂಭದಲ್ಲಿ ಪ್ರಸ್ತಾಪಿಸಿದ ಕನ್ನಡ ಪುಸ್ತಕ ಮಾರಾಟಗಾರರು ಹೇಳಿದ ಇನ್ನೊಂದು ಸಂಗತಿಯೊಂದಿಗೆ, ಈ ಬರಹವನ್ನು ಮುಕ್ತಾಯಗೊಳಿಸುತ್ತೇನೆ : 'ಇಂದಿನ ಯುವಜನರು (ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರು) ಕುವೆಂಪು, ಕಾರಂತ, ತೇಜಸ್ವಿ, ಭೈರಪ್ಪನವರ ಉತ್ತಮ ಕೃತಿಗಳನ್ನು ಕೇಳಿಕೊಂಡು ಬರುತ್ತಾರೆ. ಆದರೆ, ಅವುಗಳ ಇಂಗ್ಲಿಷ್ ಆವೃತ್ತಿ ಇದೆಯೇ ಎಂದು ಕೇಳಿ, ಖರೀದಿಸುತ್ತಾರೆ. ಮೂಲದಲ್ಲಿ, ಅಂದರೆ, ಕನ್ನಡದಲ್ಲಿ ಓದಲು ತಮ್ಮಿಂದ ಆಗುವುದಿಲ್ಲ ಎಂದೇ ಹೇಳುತ್ತಾರೆ!' ಎಂದರು ಅವರು. ಕನ್ನಡನಾಡಿನಲ್ಲಿ ಸಾಹಿತ್ಯಾಸಕ್ತಿ ಉಳಿದಿದೆ, ಬೆಳೆದಿದೆ, ಮುಂದುವರಿಯುತ್ತಿದೆ, ಆದರೆ ಯಾವ ದಿಕ್ಕಿನಲ್ಲಿ ಎಂಬುದಕ್ಕೆ ಅವರ ಈ ಹೇಳಿಕೆಯು ಉತ್ತಮ ದಿಕ್ಸೂಚಿ! ಅಲ್ಲವೇ?

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಡಿಜಿಟಲ್ ಹೊರೆ ಹೊತ್ತ ಶಿಕ್ಷಕರು

ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಡಿಜಿಟಲ್ ಕ್ರಾಂತಿಯ ಹೆಸರಿನಲ್ಲಿ ಹಲವು ಆನ್ಲೈನ್ ಪೋರ್ಟಲ್‌ಗಳನ್ನು ಪರಿಚಯಿಸಲಾಗಿದೆ. ವಿದ್ಯಾರ್ಥಿಗಳ ಮಾಹಿತಿ ಸಮಗ್ರವಾಗಿ ಸಂಗ್ರಹಿಸುವುದು, ಶಿಕ್ಷಣದ ಗುಣಮಟ್ಟ ಪರಿಶೀಲಿಸುವುದು ಹಾಗೂ ಸರಕಾರದ ಯೋಜನೆಗಳನ್ನು ಪಾರದರ್ಶಕವಾಗಿ ಜಾರಿಗೊಳಿಸುವ ಉದ್ದೇಶದಿಂದ SATS ಮತ್ತು UDISE+ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಉದ್ದೇಶ ಉತ್ತಮವಾದರೂ, ಅದರ ಅನುಷ್ಠಾನ ಶಿಕ್ಷಕರ ಮೇಲೆ ಅನಗತ್ಯ ಒತ್ತಡದ ಪರ್ವತವನ್ನೇ ನಿರ್ಮಿಸಿದೆ. ಇಂದು ಸರಕಾರಿ ಶಾಲಾ ಶಿಕ್ಷಕರ ಪರಿಸ್ಥಿತಿ ಪಾಠ ಮಾಡುವ ಶಿಕ್ಷಕನಿಗಿಂತ ಡೇಟಾ ಎಂಟ್ರಿ ಸಿಬ್ಬಂದಿಯಂತಾಗಿದೆ. ವಿದ್ಯಾರ್ಥಿಗಳ ಹೆಸರು, ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ, ಜಾತಿ ವಿವರ, ಹಾಜರಾತಿ, ದಾಖಲಾತಿ, ವರ್ಗಾವಣೆ, ವಿದ್ಯಾರ್ಥಿವೇತನ ಸೇರಿದಂತೆ ಅನೇಕ ಮಾಹಿತಿಗಳನ್ನು ದಿನವೂ ಪೋರ್ಟಲ್‌ಗಳಲ್ಲಿ ಅಪ್ಡೇಟ್ ಮಾಡಬೇಕಾಗಿದೆ. ಒಂದು ಮಾಹಿತಿ ತಪ್ಪಿದರೂ ಮೇಲಧಿಕಾರಿಗಳ ಕರೆ, ಸೂಚನೆ, ಒತ್ತಡ ಸಾಮಾನ್ಯವಾಗಿಬಿಟ್ಟಿದೆ.

ಡಿಜಿಟಲ್ ವ್ಯವಸ್ಥೆಗಳ ಪ್ರಮುಖ ಸಮಸ್ಯೆ ಎಂದರೆ ತಾಂತ್ರಿಕ ದೋಷಗಳು. ಗ್ರಾಮೀಣ ಪ್ರದೇಶಗಳಲ್ಲಿ ನೆಟ್‌ವರ್ಕ್ ಸಮಸ್ಯೆ, ಸರ್ವರ್ ಡೌನ್, ಮಾಹಿತಿ ಸೇವ್ ಆಗದೇ ಹೋಗುವುದು ಇತ್ಯಾದಿ ತೊಂದರೆಗಳಿಂದ ಶಿಕ್ಷಕರು ರಾತ್ರಿ ಹೊತ್ತಿನವರೆಗೂ ಶಾಲೆಯ ಕೆಲಸದಲ್ಲಿ ಮುಳುಗಿರಬೇಕಾಗಿದೆ. ಶಾಲೆಯ ಪಾಠ ಮುಗಿದ ಮೇಲೂ ಶಿಕ್ಷಕರಿಗೆ ಪೋರ್ಟಲ್ ಕರ್ತವ್ಯ ತಪ್ಪುತ್ತಿಲ್ಲ. ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ ಒಂದೇ ಮಾಹಿತಿಯನ್ನು ಹಲವು ಪೋರ್ಟಲ್‌ಗಳಲ್ಲಿ ಪುನಃ ಪುನಃ ನಮೂದಿಸಬೇಕಾಗಿರುವುದು. SATS ನಲ್ಲಿ ದಾಖಲಿಸಿದ ಮಾಹಿತಿಯನ್ನೇ UDISE+ ನಲ್ಲಿ ಮತ್ತೆ ನಮೂದಿಸಬೇಕು. ಗ್ರಾಮೀಣ ಶಾಲೆಗಳ ವಾಸ್ತವ ಚಿತ್ರ ಬೇರೆ. ಅನೇಕ ಶಾಲೆಗಳಲ್ಲಿ ಸರಿಯಾದ ಕಂಪ್ಯೂಟರ್ ವ್ಯವಸ್ಥೆಯೇ ಇಲ್ಲ. ಕೆಲ ಶಿಕ್ಷಕರು ತಮ್ಮ ವೈಯಕ್ತಿಕ ಮೊಬೈಲ್ ಮತ್ತು ಇಂಟರ್‌ನೆಟ್ ಬಳಸಿ ಇಲಾಖೆಯ ಕೆಲಸ ನಿರ್ವಹಿಸುತ್ತಿದ್ದಾರೆ. ವಿದ್ಯುತ್ ಸಮಸ್ಯೆ, ನೆಟ್‌ವರ್ಕ್ ಕೊರತೆ ಮತ್ತು ತಾಂತ್ರಿಕ ಅರಿವಿನ ಅಭಾವ ಶಿಕ್ಷಕರ ಒತ್ತಡವನ್ನು ಇನ್ನಷ್ಟು ಹೆಚ್ಚಿಸುತ್ತಿವೆ. ಈ ಪರಿಸ್ಥಿತಿ ಶಿಕ್ಷಣದ ಗುಣಮಟ್ಟದ ಮೇಲೂ ಪರಿಣಾಮ ಬೀರುತ್ತಿದೆ. ಶಿಕ್ಷಕರ ಸಮಯದ ಬಹುಭಾಗ ದಾಖಲೆ ನಿರ್ವಹಣೆಗೆ ಹೋಗುತ್ತಿರುವುದರಿಂದ ತರಗತಿ ಸಿದ್ಧತೆ, ಮಕ್ಕಳ ವೈಯಕ್ತಿಕ ಕಲಿಕೆ ಮತ್ತು ಸೃಜನಾತ್ಮಕ ಬೋಧನೆ ಕಡೆಗಣನೆಯಾಗುತ್ತಿದೆ. ಮಕ್ಕಳ ಭವಿಷ್ಯ ರೂಪಿಸಬೇಕಾದ ಶಿಕ್ಷಕರು ಇಂದು ಪಾಸ್‌ವರ್ಡ್, ಒಟಿಪಿ ಮತ್ತು ಡೇಟಾ ಅಪ್ಲೋಡ್ ಸಮಸ್ಯೆಗಳ ನಡುವೆ ಸಿಲುಕಿದ್ದಾರೆ.

ಡಿಜಿಟಲ್ ವ್ಯವಸ್ಥೆಗಳು ಅಗತ್ಯವಿಲ್ಲ ಎಂದು ಹೇಳಲಾಗುವುದಿಲ್ಲ. ಆದರೆ ಅವು ಶಿಕ್ಷಕರಿಗೆ ಸಹಾಯಕವಾಗಬೇಕೇ ಹೊರತು ಶಿಕ್ಷಕರನ್ನು ಯಾಂತ್ರಿಕ ಸಿಬ್ಬಂದಿಯನ್ನಾಗಿಸಬಾರದು. ಸರಕಾರ ತಕ್ಷಣವೇ SATS ಮತ್ತು UDISE+ ವ್ಯವಸ್ಥೆಗಳನ್ನು ಪರಸ್ಪರ ಜೋಡಣೆ ಮಾಡಿ ಒಂದೇ ಮಾಹಿತಿ ಮತ್ತೆ ಮತ್ತೆ ನಮೂದಿಸುವ ಸಮಸ್ಯೆ ನಿವಾರಿಸಬೇಕು. ಗ್ರಾಮೀಣ ಶಾಲೆಗಳಿಗೆ ಪ್ರತ್ಯೇಕ ಡೇಟಾ ಎಂಟ್ರಿ ಸಿಬ್ಬಂದಿ ನೇಮಕ ಮಾಡುವುದೂ ಅಗತ್ಯವಾಗಿದೆ. ಶಿಕ್ಷಣದ ಹೃದಯವೇ ಶಿಕ್ಷಕರು. ಶಿಕ್ಷಕರ ಸಮಯ, ಶಕ್ತಿ ಮತ್ತು ಮನಸ್ಸು ಮಕ್ಕಳ ಶಿಕ್ಷಣಕ್ಕೆ ಮೀಸಲಾಗಬೇಕೇ ಹೊರತು ಪೋರ್ಟಲ್‌ಗಳ ತಾಂತ್ರಿಕ ಸಮಸ್ಯೆಗಳಿಗೆ ಅಲ್ಲ. ಡಿಜಿಟಲ್ ವ್ಯವಸ್ಥೆಗಳ ಯಶಸ್ಸು ಶಿಕ್ಷಕರಿಗೆ ಎಷ್ಟು ಸುಲಭವಾಗುತ್ತವೆ ಎಂಬುದರ ಮೇಲೆ ಅವಲಂಬಿತವಾಗಿದೆ. ಇಲ್ಲವಾದರೆ ಸ್ಮಾರ್ಟ್ ಶಿಕ್ಷಣ ಎಂಬ ಹೆಸರಿನಲ್ಲಿ ಶಿಕ್ಷಕರನ್ನು ಕೇವಲ ಡಿಜಿಟಲ್ ಕೂಲಿಕಾರರನ್ನಾಗಿಸುವ ಅಪಾಯ ನಮ್ಮ ಮುಂದಿದೆ.

– ಶಿವಯೋಗಿ ಎಂ. ವಿ., ರಾಂಪುರ

ಆರಂಭದಲ್ಲೇ ಎಡವಟ್ಟು

ತಮಿಳುನಾಡು ಮುಖ್ಯಮಂತ್ರಿ ವಿಜಯ್ ಜೋಸೆಫ್ ಆರಂಭದಲ್ಲಿಯೇ ಎಡವಟ್ಟು ಮಾಡಿದಂತೆ ಕಾಣುತ್ತದೆ. ತಮ್ಮ ಪರ್ಸನಲ್ ಜ್ಯೋತಿಷಿಯನ್ನು ತಮ್ಮ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನೇಮಿಸಿಕೊಂಡು ನಂತರ ವಿರೋಧ ವ್ಯಕ್ತವಾದಾಗ ಹಿಂಪಡೆದದ್ದು ಮತ್ತು ಹಿಂದು ಧಾರ್ಮಿಕ ದತ್ತಿ ಇಲಾಖೆಗೆ ಮುಸ್ಲಿಮ್ ಒಬ್ಬರನ್ನು ಮಂತ್ರಿಯನ್ನಾಗಿ ನೇಮಿಸಿದ್ದು ಟೀಕೆಗೆ ಒಳಗಾಗಿದೆ. ಇದು ಅವರು ಶಾಲಾ-ಕಾಲೇಜು, ಆಸ್ಪತ್ರೆ ಮತ್ತು ಬಸ್ ನಿಲ್ದಾಣದ ಸುತ್ತ ಸುಮಾರು 500ಮೀಟರ್ ಅಂತರದಲ್ಲಿರುವ 700 ವೈನ್‌ಶಾಪ್‌ಗಳನ್ನು ತೆರವುಗೊಳಿಸಿರುವ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾಜಕೀಯ ಬ್ಯಾನರ್ ಹಾಕುವುದನ್ನು ನಿಷೇಧಿಸಿರುವ ಅವರ ಮೊದಲ ಆದೇಶಗಳ ಹೊಳಪನ್ನು ಮಸುಕುಗೊಳಿಸಿದೆ.

– ರಮಾನಂದ ಎಸ್.,ಬೆಂಗಳೂರು

ಇತಿಹಾಸ ಯಾರ ಸ್ವತ್ತು? ರೇವಣಸಿದ್ಧರ ವಿವಾದದ ಸುತ್ತ

ಪ್ರತಿಕ್ರಿಯೆ

ಕೆ.ವಿ.ಚಂದ್ರ ಮೌಳಿ

vveditoped@gmail.com

'ವಚನಾಮೃತ' ಅಂಕಣದಲ್ಲಿ ರವಿ ಹಂಜ್ ಅವರು ಬರೆದ 'ರೇಣುಕಾಚಾರ್ಯರು ಯಾನೆ ರೇವಣಸಿದ್ಧರು ಕುರುಬರೇ!?' (ಮೇ 11) ಹಾಗೂ 'ರೇವಣಸಿದ್ಧ: ಅಂತೆಕಂತೆಯ ಸಂತೆಗೆ ಸಂಶೋಧನೆ ಎಂಬ ಸೋಗು!' (ಮೇ 12) ಲೇಖನಗಳನ್ನು ಸಂಪೂರ್ಣವಾಗಿ ಓದಿದ ನಂತರ ನನ್ನ ಕೆಲವು ಅಭಿಪ್ರಾಯಗಳನ್ನು ವಿನಮ್ರವಾಗಿ ಹಂಚಿಕೊಳ್ಳಲು ಸಂತೋಷವಾಗುತ್ತಿದೆ. ಇಂದಿನ ಕಾಲಘಟ್ಟದಲ್ಲಿ ಇತಿಹಾಸ, ಧರ್ಮ, ಜಾತಿ ಮತ್ತು ಸಂಸ್ಕೃತಿಯ ಪ್ರಶ್ನೆಗಳು ಭಾವನಾತ್ಮಕ ಚರ್ಚೆಗಳಾಗಿ ಮಾರ್ಪಡುವ ಸಂದರ್ಭದಲ್ಲಿ, ಇಂತಹ ವಿಷಯಗಳನ್ನು ಶಾಸನ, ಪುರಾಣ, ಜನಪದ ಹಾಗೂ ಸಂಶೋಧನಾ ಮೂಲಗಳ ಆಧಾರದ ಮೇಲೆ ವಿಶ್ಲೇಷಿಸಲು ಲೇಖಕರು ಕೈಗೊಂಡ ಪ್ರಯತ್ನ ಗಮನಾರ್ಹವಾಗಿದೆ.

ಲೇಖಕರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಬೇಕಾದ ಸಂಗತಿಯೆಂದರೆ, ಅವರು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನೆಲೆಸಿದ್ದರೂ ಸಹ ಕರ್ನಾಟಕದ ಧಾರ್ಮಿಕ ವಿಚಾರಗಳು, ವಚನ ಪರಂಪರೆ, ವೀರಶೈವ–ಹಾಲುಮತ ಸಂವಾದಗಳು ಹಾಗೂ ಐತಿಹಾಸಿಕ ಚರ್ಚೆಗಳ ಕುರಿತು ಅಪಾರ ಆಸಕ್ತಿ, ಕಾಳಜಿ ಮತ್ತು ಬೌದ್ಧಿಕ ತೊಡಗಿಸಿಕೊಳ್ಳುವಿಕೆಯನ್ನು ಉಳಿಸಿಕೊಂಡಿದ್ದಾರೆ. ವಿದೇಶದಲ್ಲಿ ವಾಸಿಸುತ್ತಿದ್ದರೂ ತಮ್ಮ ನಾಡಿನ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಿಂತನೆಗಳೊಂದಿಗೆ ಸಂಬಂಧ ಕಳೆದುಕೊಳ್ಳದೆ, ಅವುಗಳ ಬಗ್ಗೆ ಅಧ್ಯಯನ ಮಾಡಿ ಸಾರ್ವಜನಿಕ ಚರ್ಚೆಗೆ ತರುತ್ತಿರುವುದು ಅಭಿನಂದನಾರ್ಹ. ವಿಶೇಷವಾಗಿ ಶಾಸನಗಳು, ಜನಪದ ಕಥೆಗಳು, ಪುರಾಣಗಳು, ಮತಪರಂಪರೆಗಳು ಮತ್ತು ಸಂಶೋಧನಾ ಗ್ರಂಥಗಳನ್ನು ಪರಸ್ಪರ ಹೋಲಿಕೆ ಮಾಡಿ ಲೇಖನ ರಚಿಸಿರುವುದು ಅವರ ಅಧ್ಯಯನಾಸಕ್ತಿಯನ್ನು ತೋರಿಸುತ್ತದೆ.

ಲೇಖನದ ಪ್ರಮುಖ ಬಲ ಅದರ ಮೂಲಭೂತ ಪ್ರಶ್ನೆಯಲ್ಲಿದೆ – ಇತಿಹಾಸವನ್ನು ಒಂದು ಜಾತಿಯ ಸ್ವತ್ತಾಗಿ ಮಾಡಬಹುದೇ? ಎಂಬ ಪ್ರಶ್ನೆ. ಇದು ಕೇವಲ ರೇವಣಸಿದ್ಧರ ವಿಚಾರಕ್ಕೆ ಸೀಮಿತವಾಗದೇ, ಭಾರತದ ಸಮಗ್ರ ಸಾಮಾಜಿಕ ಇತಿಹಾಸ ಅಧ್ಯಯನದಲ್ಲಿಯೂ ಮಹತ್ವದ ಪ್ರಶ್ನೆಯಾಗಿದೆ. ಮಧ್ಯಯುಗೀನ ಭಕ್ತಿ ಚಳವಳಿಗಳು ಅನೇಕ ಸಮುದಾಯಗಳ ಸಂಯುಕ್ತ ಪಾಲ್ಗೊಳ್ಳುವಿಕೆಯಿಂದ ರೂಪುಗೊಂಡಿದ್ದವು ಎಂಬುದನ್ನು ಹಲವಾರು ಇತಿಹಾಸಕಾರರು ಉಲ್ಲೇಖಿಸಿದ್ದಾರೆ. ಎಂ.ಎಂ ಕಲಬುರ್ಗಿ ಅವರು ವಚನ ಚಳವಳಿಯನ್ನು ಬಹುಸಾಮಾಜಿಕ ಚಳವಳಿಯೆಂದು ವಿವರಿಸುತ್ತಾರೆ. ಡಿ.ಡಿ. ಕೋಸಾಂಬಿ ಭಾರತೀಯ ಧಾರ್ಮಿಕ ಪರಂಪರೆಗಳು ಜನಪದ ಸಂಸ್ಕೃತಿಗಳೊಂದಿಗೆ ಬೆರೆತು ರೂಪುಗೊಂಡಿವೆ ಎಂದು ಹೇಳಿದ್ದಾರೆ. ರೋಮಿಲಾ ಥಾಪರ್ ಪರಂಪರೆಗಳು ಕಾಲಕ್ರಮದಲ್ಲಿ ಬದಲಾಗುತ್ತವೆ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ನೋಡಿದರೆ, ಮಹನೀಯರನ್ನು ಒಂದು ಸಮುದಾಯದ ಏಕಸ್ವಾಮ್ಯಕ್ಕೆ ಒಳಪಡಿಸುವ ಪ್ರವೃತ್ತಿಯನ್ನು ಲೇಖಕರು ಪ್ರಶ್ನಿಸಿರುವುದು ಚಿಂತನೆಗೆ ಅರ್ಹವಾಗಿದೆ.

ಲೇಖಕರು ಉಲ್ಲೇಖಿಸಿರುವ ಸಿರಿವಾಳ, ಕುಕ್ಕೇರಿ, ಹೊನ್ನಟಗಿ ಮೊದಲಾದ ಶಾಸನಗಳು ಹಾಗೂ ಹಾಲುಮತೋತ್ತೇಜಕ ಪುರಾಣ, ಗುರುವಂಶ ಕಾವ್ಯ ಮುಂತಾದ ಗ್ರಂಥಗಳು ಅವರ ವಾದಕ್ಕೆ ದಾಖಲೆ ಆಧಾರ ಒದಗಿಸಲು ಮಾಡಿದ ಪ್ರಯತ್ನವೆಂದು ಕಾಣುತ್ತದೆ. ವಿಶೇಷವಾಗಿ ದೇವ, ದೇಶಿಕ, ಜಂಗಮ, ಆರಾಧ್ಯ, ಮಹೇಶ್ವರ ಮೊದಲಾದ ಪದಗಳನ್ನು ಕಾಲಾಮುಖ–ವೀರಶೈವ ಪರಂಪರೆಯ ಸನ್ನಿವೇಶದಲ್ಲಿ ಓದುವ ಪ್ರಯತ್ನ ಗಮನಾರ್ಹವಾಗಿದೆ. ಕರ್ನಾಟಕದ ಮಧ್ಯಯುಗೀನ ಶೈವ ಪರಂಪರೆಯಲ್ಲಿ ಕಾಲಾಮುಖ, ನಾಥ, ವೀರಶೈವ ಮತ್ತು ಜನಪದ ಆಚರಣೆಗಳು ಪರಸ್ಪರ ಬೆರೆತು ಬೆಳೆದಿದ್ದವು ಎಂಬುದು ಇತಿಹಾಸ ಅಧ್ಯಯನಗಳಿಂದ ತಿಳಿದುಬರುತ್ತದೆ. ಹೀಗಾಗಿ ಲೇಖಕರು ರೇವಣಸಿದ್ಧರನ್ನು ವಿಶಾಲ ಶೈವ ಪರಂಪರೆಯೊಳಗೆ ಅರ್ಥೈಸಲು ಮಾಡಿದ ಯತ್ನ ಸಂಪೂರ್ಣವಾಗಿ ನಿರಾಕರಿಸಲಾಗದು.

ಅದೇ ರೀತಿ ಒಂದೇ ಹೆಸರಿನ ಅನೇಕ ಗುರುಗಳು ಎಂಬ ಲೇಖಕರ ವಾದವೂ ತಾರ್ಕಿಕವಾಗಿ ಗಮನಾರ್ಹವಾಗಿದೆ. ಭಾರತೀಯ ಮತಪರಂಪರೆಯಲ್ಲಿ ಒಂದೇ ಹೆಸರು ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುವುದು ಸಾಮಾನ್ಯ ಸಂಗತಿ. ಉದಾಹರಣೆಗೆ ಶಂಕರಾಚಾರ್ಯ, ವಿದ್ಯಾರಣ್ಯ, ನಿರಂಜನ ಮೊದಲಾದ ಹೆಸರುಗಳು ವಿಭಿನ್ನ ಕಾಲಘಟ್ಟಗಳಲ್ಲಿ ಹಲವು ಮಠಾಧೀಶರಿಂದ ಬಳಕೆಯಾಗಿವೆ. ಈ ಹಿನ್ನೆಲೆಯಲ್ಲಿ ರೇವಣಸಿದ್ಧ ಎಂಬ ಹೆಸರಿನ ಹಿಂದೆ ವಿಭಿನ್ನ ಕಾಲಘಟ್ಟಗಳ ಅನೇಕ ಯತಿಗಳು ಇರಬಹುದೆಂಬ ಲೇಖಕರ ಅಭಿಪ್ರಾಯವನ್ನು ಸಂಪೂರ್ಣವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ವಿಶೇಷವಾಗಿ ಕ್ರಿ.ಶ. 1026ರಿಂದ 1208ರವರೆಗೆ ಇರುವ ಶಾಸನಾಧಾರಗಳನ್ನು ಉಲ್ಲೇಖಿಸಿ, ಒಬ್ಬ ವ್ಯಕ್ತಿಯ ಜೀವನಾವಧಿಯಾಗಿ ಅದನ್ನು ಒಪ್ಪಿಕೊಳ್ಳುವುದು ಕಷ್ಟಕರ ಎಂದು ಲೇಖಕರು ಸೂಚಿಸುವುದು ಇತಿಹಾಸಾತ್ಮಕ ಕಾಲಕ್ರಮದ ದೃಷ್ಟಿಯಿಂದ ಸಮಂಜಸವಾಗಿದೆ.

ಲೇಖನದ ಇನ್ನೊಂದು ಸಮತೋಲನದ ಅಂಶವೆಂದರೆ ಲೇಖಕರು ಕುರುಬ ಸಮುದಾಯದ ಭಕ್ತಿಪರ ಸಂಬಂಧವನ್ನು ಸಂಪೂರ್ಣ ನಿರಾಕರಿಸುವುದಿಲ್ಲ. ಬಿರೇಶ್ವರ, ಶಾಂತಮುತ್ತಯ್ಯ, ಹಾಲುಮತ ಪರಂಪರೆ, ಜನಪದ ಕಥನಗಳ ಮೂಲಕ ಕುರುಬ ಸಮುದಾಯವು ರೇವಣಸಿದ್ಧರನ್ನು ತಮ್ಮ ಕುಲಗುರುಗಳಾಗಿ ಆರಾಧಿಸಿದ್ದಿರಬಹುದು ಎಂಬ ಸಾಧ್ಯತೆಯನ್ನು ಅವರು ಒಪ್ಪಿಕೊಳ್ಳುತ್ತಾರೆ. ಈ ರೀತಿಯ ಭಕ್ತಿಪರ ಸಂಬಂಧ ಮತ್ತು ಐತಿಹಾಸಿಕ ಮೂಲಸ್ವಾಮ್ಯ ಎರಡೂ ಒಂದೇ ಅಲ್ಲ ಎಂಬ ವ್ಯತ್ಯಾಸವನ್ನು ಲೇಖಕರು ಸೂಚಿಸಿರುವುದು ಚಿಂತನೆಗೆ ಯೋಗ್ಯವಾಗಿದೆ.

ಆದಾಗ್ಯೂ, ಕೆಲವು ಕಡೆಗಳಲ್ಲಿ ಲೇಖನದ ಭಾಷೆ ಸ್ವಲ್ಪ ತೀವ್ರವಾಗಿ ಕಂಡುಬರುತ್ತದೆ. ಲೇಖಕರ ತರ್ಕಶಕ್ತಿ ಗಮನಾರ್ಹವಾದರೂ, ಕೆಲವು ಕಡೆಗಳಲ್ಲಿನ ಕಟುಪದಪ್ರಯೋಗಗಳು ಸಂಶೋಧನಾ ಲೇಖನದ ನಿಷ್ಪಕ್ಷಪಾತತೆಯನ್ನು ಸ್ವಲ್ಪ ದುರ್ಬಲಗೊಳಿಸುತ್ತವೆ. ಮಂಡೂಕ ಭಂಡಾರ, ಜಾತ್ಯಂಧ ಮುಂತಾದ ಪದಗಳು ಓದುಗರಲ್ಲಿ ಭಾವನಾತ್ಮಕ ಪ್ರತಿಕ್ರಿಯೆ ಉಂಟುಮಾಡುವ ಸಾಧ್ಯತೆ ಇದೆ. ಇತಿಹಾಸ ಮತ್ತು ಧರ್ಮದಂತಹ ಸೂಕ್ಷ್ಮ ವಿಷಯಗಳಲ್ಲಿ ದಾಖಲೆ ಮತ್ತು ತರ್ಕವೇ ಮುಖ್ಯ ಸಾಧನಗಳು. ಭಾಷೆಯ ಮಿತತೆ ಸಂಶೋಧನಾ ವಾದದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ. ಉದಾಹರಣೆಗೆ ಕೆ.ಎ ನೀಲಕಂಠ ಶಾಸ್ತ್ರಿ ಅಥವಾ ಷ. ಶೆಟ್ಟರ್ ಅವರಂತಹ ಸಂಶೋಧಕರು ತೀವ್ರ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದರೂ, ಸಮತೋಲನದ ಭಾಷೆ ಕಾಪಾಡಿಕೊಂಡಿರುವುದನ್ನು ಗಮನಿಸುತ್ತೇವೆ. ಇದೇ ರೀತಿಯ ಮಿತಭಾಷೆ ಲೇಖನದ ಪ್ರಭಾವವನ್ನು ಇನ್ನಷ್ಟು ವಿಸ್ತರಿಸಬಹುದಿತ್ತು.

ಇದಲ್ಲದೆ, ಕೆಲವೆಡೆ ಲೇಖಕರು ಊಹಾತ್ಮಕ ನಿರ್ಣಯಗಳತ್ತ ಸಾಗುತ್ತಾರೆ. ಹಾಲುಮತ ಪದ ಶಾಸನದಲ್ಲಿ ಇಲ್ಲವೆಂಬ ಕಾರಣದಿಂದಲೇ ಕುರುಬ ಸಂಬಂಧವನ್ನು ದುರ್ಬಲಗೊಳಿಸುವ ಪ್ರಯತ್ನ ಸಂಪೂರ್ಣ ನಿರ್ಣಾಯಕವಾಗುವುದಿಲ್ಲ. ಮಧ್ಯಯುಗೀನ ಶಾಸನಗಳಲ್ಲಿ ಸಮುದಾಯ ಗುರುತುಗಳು ಅನೇಕ ಬಾರಿ ನೇರವಾಗಿ ಕಾಣಿಸಿಕೊಳ್ಳದೆ, ಆಚರಣೆ, ವೃತ್ತಿ, ಮಠ ಅಥವಾ ದೇವತಾ ಆರಾಧನೆಯ ಮೂಲಕ ವ್ಯಕ್ತವಾಗುತ್ತವೆ. ಆದ್ದರಿಂದ ಪದದ ಅನುಪಸ್ಥಿತಿಯನ್ನೇ ಅಂತಿಮ ಸಾಕ್ಷಿಯಂತೆ ಪರಿಗಣಿಸುವಾಗ ಹೆಚ್ಚಿನ ಎಚ್ಚರ ಅಗತ್ಯವಿದೆ.

ಇದೇ ಸಮಯದಲ್ಲಿ ಕುರುಬ ಸಮುದಾಯದ ಕೆಲ ಅತಿರೇಕದ ಹಕ್ಕೊತ್ತಾಯಗಳ ಕುರಿತು ಲೇಖಕರು ವ್ಯಕ್ತಪಡಿಸಿರುವ ಎಚ್ಚರಿಕೆಯನ್ನೂ ಗಮನಿಸಬೇಕು. ಕರ್ನಾಟಕದ ಇತಿಹಾಸದಲ್ಲಿ ಅನೇಕ ಮಹನೀಯರನ್ನು ವಿವಿಧ ಸಮುದಾಯಗಳು ತಮ್ಮ ಸಂಸ್ಕೃತಿಯ ಭಾಗವೆಂದು ಕಂಡಿವೆ. ಕನಕದಾಸ, ಅಲ್ಲಮ ಪ್ರಭು, ಬಸವಣ್ಣ ಮೊದಲಾದ ಮಹನೀಯರ ಪ್ರಭಾವ ಒಂದು ಸಮುದಾಯದ ಮಿತಿಯನ್ನು ಮೀರಿ ವ್ಯಾಪಿಸಿದೆ. ಹೀಗಾಗಿ ಮಹನೀಯರನ್ನು ಜಾತಿಯ ಚೌಕಟ್ಟಿನೊಳಗೆ ಸೀಮಿತಗೊಳಿಸುವುದು ಅವರ ಮಾನವೀಯ ಮತ್ತು ಆಧ್ಯಾತ್ಮಿಕ ವ್ಯಾಪ್ತಿಯನ್ನು ಕುಗ್ಗಿಸಬಹುದು ಎಂಬ ಲೇಖಕರ ಸೂಚನೆ ಅರ್ಥಪೂರ್ಣವಾಗಿದೆ.

ಲೇಖನದ ಅತ್ಯಂತ ಮೌಲಿಕ ಭಾಗ ಅದರ ಅಂತಿಮ ಸಂದೇಶ – ಇತಿಹಾಸವು ಸಮಸ್ತ ಸಮಾಜದ ಸಾಂಸ್ಕೃತಿಕ ಸ್ಮೃತಿ ಎಂಬುದು. ಇದು ಅತ್ಯಂತ ಗಂಭೀರ ಮತ್ತು ಪ್ರಜ್ಞಾವಂತ ಅಭಿಪ್ರಾಯ. ಇತಿಹಾಸದ ಬಗ್ಗೆ ಹೊಸ ಸಂಶೋಧನೆಗಳು ಬರುತ್ತಲೇ ಇರುತ್ತವೆ; ಹೊಸ ಶಾಸನಗಳು, ಹೊಸ ಪಠ್ಯಭೇದಗಳು ಮತ್ತು ಹೊಸ ವ್ಯಾಖ್ಯಾನಗಳು ಇತಿಹಾಸದ ಅರಿವನ್ನು ಬದಲಾಯಿಸುತ್ತವೆ. ಆದ್ದರಿಂದ ಇಂತಹ ಚರ್ಚೆಗಳನ್ನು ಜಾತೀಯ ಘರ್ಷಣೆಯಾಗಿ ನೋಡದೆ, ಜ್ಞಾನಪರ ಸಂವಾದದ ಭಾಗವಾಗಿ ನೋಡುವುದು ಹೆಚ್ಚು ಸೂಕ್ತ.

ಇಲ್ಲಿ ವಿಶ್ವವಾಣಿ ಪತ್ರಿಕೆಯನ್ನು ವಿಶೇಷವಾಗಿ ಅಭಿನಂದಿಸಬೇಕು. ಇಂತಹ ವೈಚಾರಿಕ, ಸಂವೇದನಾಶೀಲ ಮತ್ತು ಭಿನ್ನಾಭಿಪ್ರಾಯ ಹುಟ್ಟಿಸುವ ವಿಷಯಗಳಿಗೆ ಮುಕ್ತ ವೇದಿಕೆ ಕಲ್ಪಿಸುವುದು ಪ್ರಜಾಸತ್ತಾತ್ಮಕ ಪತ್ರಿಕೋದ್ಯಮದ ಅತ್ಯಂತ ಆರೋಗ್ಯಕರ ಲಕ್ಷಣ. ಒಂದೇ ವಿಚಾರವನ್ನು ಮಾತ್ರ ಪ್ರಕಟಿಸುವುದಕ್ಕಿಂತ, ಅದರ ಪರ–ವಿರೋಧ ಎರಡಕ್ಕೂ ಅವಕಾಶ ನೀಡುವುದು ಸಮಾಜದ ಬೌದ್ಧಿಕ ಆರೋಗ್ಯವನ್ನು ಬಲಪಡಿಸುತ್ತದೆ. ವಿಶ್ವವಾಣಿ ಲೇಖಕರಿಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶ ನೀಡಿರುವುದು ಮಾತ್ರವಲ್ಲ, ಆ ಅಭಿಪ್ರಾಯಗಳಿಗೆ ಪ್ರತಿವಾದ ಮಂಡಿಸಲು ಮತ್ತೊಬ್ಬರಿಗೆ ಅವಕಾಶ ಕಲ್ಪಿಸುವ ಮೂಲಕ ಓದುಗರ ವಿವೇಕಕ್ಕೆ ಅಂತಿಮ ತೀರ್ಪನ್ನು ಬಿಡುತ್ತಿದೆ. ಇದೇ ನಿಜವಾದ ಬೌದ್ಧಿಕ ಸ್ವಾತಂತ್ರ್ಯ.

ಯಾವುದೇ ಸಂಶೋಧನಾ ವಿಚಾರದಲ್ಲಿ ಅಂತಿಮ ಸತ್ಯವೆಂಬುದು ವಿರಳ. ಹೊಸ ಶಾಸನಗಳು, ಹೊಸ ಪಠ್ಯಭೇದಗಳು, ಹೊಸ ಅಧ್ಯಯನಗಳು ಬಂದಂತೆ ಇತಿಹಾಸದ ವ್ಯಾಖ್ಯಾನಗಳೂ ಬದಲಾಗುತ್ತವೆ. ಆದ್ದರಿಂದ ಇಂತಹ ಚರ್ಚೆಗಳನ್ನು ವೈಯಕ್ತಿಕ ಅಥವಾ ಜಾತೀಯ ಘರ್ಷಣೆಯಾಗಿ ನೋಡುವುದಕ್ಕಿಂತ, ಸಮಾಜದ ಜ್ಞಾನಪರ ಚಟುವಟಿಕೆಯ ಭಾಗವಾಗಿ ನೋಡುವುದು ಸೂಕ್ತ. ಈ ಅರ್ಥದಲ್ಲಿ ರವಿ ಹಂಜ್ ಅವರ ಲೇಖನವು ಪ್ರಶ್ನಿಸುವ ಧೈರ್ಯ ಮತ್ತು ದಾಖಲೆಗಳ ಬಳಕೆಯ ಮೂಲಕ ಗಮನ ಸೆಳೆಯುತ್ತದೆ. ಕೆಲವೆಡೆ ಭಾಷೆಯ ತೀವ್ರತೆ ಮತ್ತು ಊಹಾತ್ಮಕ ನಿರ್ಣಯಗಳು ಕಂಡುಬಂದರೂ, ಇತಿಹಾಸವನ್ನು ವಿಶಾಲ ಸಾಮಾಜಿಕ ಹಿನ್ನೆಲೆಯಲ್ಲಿಯೇ ಓದಬೇಕು ಎಂಬ ಅವರ ಮೂಲ ಸಂದೇಶ ಅತ್ಯಂತ ಮಹತ್ವದ್ದಾಗಿದೆ. ವಿವೇಕ ಮತ್ತು ವೈಚಾರಿಕ ಮನೋಭಾವದ ಮೇಲೇ ಅವಲಂಬಿತವಾಗಿದೆ. ಇದೇ ಪ್ರಜಾಸತ್ತಾತ್ಮಕ ಬೌದ್ಧಿಕ ಸಂಸ್ಕೃತಿಯ ಸೌಂದರ್ಯ. ಇಂತಹ ಚರ್ಚೆಗಳು ಹೆಚ್ಚು ದಾಖಲೆ–ಆಧಾರಿತ, ಸಮತೋಲನದ ಮತ್ತು ಮಿತಭಾಷೆಯ ಮೂಲಕ ಮುಂದುವರಿದರೆ, ಕರ್ನಾಟಕದ ಇತಿಹಾಸ ಅಧ್ಯಯನ ಇನ್ನಷ್ಟು ಸಮೃದ್ಧವಾಗಲಿದೆ.

ಪ್ರಸ್ತುತ

ವೇಣುಗೋಪಾಲ್, ಮೈಸೂರು

ಎಂಜಿಆರ್, ಜಯಲಲಿತಾ ಮತ್ತು ವಿಜಯ್

ವಿಜಯ್ ಅವರನ್ನು ಎಂಜಿರ್ ಅಥವಾ ಜಯಲಲಿತಾ ಅವರೊಂದಿಗೆ ಹೋಲಿಸುವುದು ಸಂಪೂರ್ಣವಾಗಿ ಸರಿಯೇ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅವರ ರಾಜಕೀಯ ಪಯಣಗಳು, ಕಾಲಘಟ್ಟ ಮೂಲತಃ ಭಿನ್ನವಾಗಿವೆ. ಅವರಿಬ್ಬರೂ ವಿಜಯ್‌ಗಿಂತ ಬಹಳ ಹೆಚ್ಚು ಪ್ರಭಾವಶಾಲಿಗಳು, ಜನಪ್ರಿಯರು ಮತ್ತು ರಾಜಕೀಯವಾಗಿ ಸ್ಥಾಪಿತರಾಗಿದ್ದರು ಎಂಬುದರಲ್ಲಿ ಅನುಮಾನವೇ ಇಲ್ಲ. ಇದು ಕೇವಲ ಅವರು ಹೇಗೆ ರಾಜಕೀಯ ಶಕ್ತಿಯನ್ನು ಪಡೆದರು, ವಿಜಯ್ ಅವರ ವಿಷಯದಲ್ಲಿ ಜನರ ಪ್ರೀತಿ ಹಾಗೂ ವಿಶ್ವಾಸ ಮಾತ್ರವೇ ಹೇಗೆ ಅವರ ಮುಖ್ಯ ರಾಜಕೀಯ ಶಕ್ತಿಯಾಗಿ ರೂಪುಗೊಂಡಿದೆ ಎಂಬುದನ್ನು ಅರ್ಥಮಾಡಿಕೊಳ್ಳುವ ಒಂದು ಪ್ರಯತ್ನ ಮಾತ್ರ.

ಎಂಜಿಆರ್ ಅವರು ಎಐಡಿಎಂಕೆ ಸ್ಥಾಪಿಸುವ ಮೊದಲು ದೀರ್ಘಕಾಲ ಸಕ್ರಿಯ ರಾಜಕೀಯದಲ್ಲಿದ್ದರು. ಕರುಣಾನಿಧಿ ಮತ್ತು ಅಣ್ಣಾದುರೈ ಅವರಂತಹ ನಾಯಕರ ಜೊತೆ ರಾಜಕೀಯ ಅನುಭವ ಪಡೆದಿದ್ದರು. ಎಂಎಲ್ಸಿ ಆಗಿಯೂ ಸೇವೆ ಸಲ್ಲಿಸಿದ್ದರು. ಅವರ ರಾಜಕೀಯ ಏಳಿಗೆಯು ಬಹುಪಾಲು ಡಿಎಂಕೆಯ ಈಗಾಗಲೇ ನಿರ್ಮಿತವಾಗಿದ್ದ ದ್ರಾವಿಡ ಶಕ್ತಿ ಮತ್ತು ಮತಬ್ಯಾಂಕಿನ ಮೇಲೆ ನಿರ್ಮಾಣಗೊಂಡಿತ್ತು.

ಅದೇ ರೀತಿ ಜಯಲಲಿತಾ ಅವರು ಮುಖ್ಯಮಂತ್ರಿ ಆಗುವ ಮೊದಲು ಸುಮಾರು ಒಂಬತ್ತು ವರ್ಷಗಳ ರಾಜಕೀಯ ಅನುಭವ ಹೊಂದಿದ್ದರು. ಅವರು ಎಂಜಿಆರ್ ಅವರ ಅಪಾರ ಜನಪ್ರಿಯತೆಯನ್ನು ಮಾತ್ರವಲ್ಲದೆ, ರಾಜಕೀಯ ಪಟ್ಟುಗಳಲ್ಲಿ ಅನುಭವಿಗಳಾದ ರಾಜಕಾರಣಿಗಳು, ಮಾಜಿ ಸಚಿವರು, ಶಾಸಕರು, ಪಕ್ಷದ ಕಾರ್ಯಕರ್ತರು ಅವರದ್ದೇ ಮಾಧ್ಯಮ ಮತ್ತು ಈಗಾಗಲೇ ಬಲವಾಗಿ ನಿರ್ಮಾಣಗೊಂಡಿದ್ದ ರಾಜಕೀಯ ವ್ಯವಸ್ಥೆಯನ್ನೂ ತಮ್ಮೊಂದಿಗೆ ಪಡೆದಿದ್ದರು. ಎಂಜಿಆರ್ ಮತ್ತು ಜಯಲಲಿತಾ ಇಬ್ಬರೂ ಪರಿಪಕ್ವ ರಾಜಕೀಯ ವಾತಾವರಣಗಳೊಳಗೆ ಬೆಳೆದ ನಾಯಕರು.

ಆದರೆ ವಿಜಯ್ ಪಯಣ ಸಂಪೂರ್ಣವಾಗಿ ವಿಭಿನ್ನವಾಗಿದೆ. ಅವರು ರಾಜಕೀಯಕ್ಕೆ ಹೊಸಬರು. ಅವರ ಪಕ್ಷವೂ ಹೊಸದು. ಅವರ ಜೊತೆ ಇರುವ ಬಹುಪಾಲು ಜನರೂ ಹೊಸ ಮುಖಗಳೇ. ಮತ್ತು ಜನಸಾಮಾನ್ಯರು. ಎಂಜಿಆರ್ ಅಥವಾ ಜಯಲಲಿತಾ ಅವರಂತಲ್ಲದೆ, ವಿಜಯ್ ಅವರಿಗೆ ಈಗಾಗಲೇ ನಿರ್ಮಾಣಗೊಂಡ ರಾಜಕೀಯ ಯಂತ್ರಾಂಗ, ಮತಬ್ಯಾಂಕ್ ಅಥವಾ ಸಂಘಟಿತ ಚಳುವಳಿಯ ಬಲ ದೊರೆತಿಲ್ಲ. ಇಂದು ಅವರಿಗೆ ದೊರೆಯುತ್ತಿರುವ ಬೆಂಬಲ ಬಹುಮಟ್ಟಿಗೆ ಜನರು ಅವರ ಮೇಲಿಟ್ಟಿರುವ ಪ್ರೀತಿ ಮತ್ತು ವಿಶ್ವಾಸದಿಂದಲೇ ಬಂದಿದೆ ಎಂದು ಕಾಣಿಸುತ್ತದೆ. ಅದೇ ಅವರ ಉದಯವನ್ನು ವಿಶೇಷವಾಗಿಸುತ್ತದೆ.

ಬಹುತೇಕ ಪಕ್ಷಗಳು ಸಿರಿವಂತರಿಂದ ಅಪಾರ ಕೊಡುಗೆಗಳನ್ನು ಪಡೆದು ಅವರಿಗೆ ಅನುಕೂಲವಾಗುವಂತೆ ಪಾಲಿಸಿ ಮಾಡಬೇಕಾದ ಒತ್ತಡದಲ್ಲಿ ಇರುತ್ತವೆ. ಹಾಗೆಯೇ ಧರ್ಮ ಜಾತಿ ಇತ್ಯಾದಿ ಸಂಘಟನೆಗಳಿಗೆ ಪಕ್ಷಪಾತದಿಂದ ನಡೆಯಬೇಕಾದ ಅನಿವಾರ್ಯ ಇಂತಹ ಪಕ್ಷಗಳಿಗೆ, ನಾಯಕರುಗಳಿಗೆ ಇದೆ. ಇಂತಹ ಯಾವುದೇ ಒತ್ತಡಗಳು ಇಲ್ಲದೇ ಮುಕ್ತವಾಗಿ ಸರ್ಕಾರ ನಡೆಸುವ ಅವಕಾಶ ಅತಿ ವಿರಳ. ಇಂತಹ ಅತಿ ವಿರಳ ಅವಕಾಶ ಪಡೆದಿರುವ ವಿಜಯ್ ಸರ್ಕಾರ ಖಂಡಿತವಾಗಿ ಮಾದರಿ ಜನಪರ ಸರ್ಕಾರ ಆಗುವ ಸಾಧ್ಯತೆ ಇದೆ. ಚಿತ್ರರಂಗದ ಹಿನ್ನೆಲೆಯನ್ನು ಹೊರತುಪಡಿಸಿದರೆ, ವಿಜಯ್ ಮತ್ತು ಎಂಜಿಆರ್ ಅಥವಾ ಜಯಲಲಿತಾ ನಡುವೆ ಹೆಚ್ಚು ಸಾಮ್ಯತೆಗಳಿಲ್ಲ. ವಿಜಯ್ ತಮಿಳುನಾಡಿನ ರಾಜಕೀಯದಲ್ಲಿ ಒಂದು ಹೊಸ ಆರಂಭವನ್ನು ಪ್ರತಿನಿಧಿಸುತ್ತಾರೆ. ಅದು ರಾಜಕೀಯ ಪರಂಪರೆಯ ಮೇಲೆ ಅಲ್ಲ, ವ್ಯಕ್ತಿಗತ ಜನಸಂಪರ್ಕ ಮತ್ತು ಜನಾಭಿಮಾನಗಳ ಮೇಲೆ ನಿರ್ಮಾಣವಾಗಿರುವ ಆರಂಭ.

ಇದರಿಂದ ಅವರಿಗೆ ಒಂದು ವಿಭಿನ್ನವಾದ ಶಕ್ತಿಯೂ ದೊರೆಯುತ್ತದೆ ಎಂದು ಹೇಳಬಹುದು. ಸವಕಲು ರಾಜಕಾರಣ, ರಾಜಕೀಯ ಒತ್ತಡಗಳು ಅಥವಾ ಸಿದ್ಧಾಂತಗಳ ಒತ್ತಡಗಳಿಂದ ಮುಕ್ತವಾದ, ಸಂಪೂರ್ಣವಾಗಿ ತಮ್ಮದೇ ಆದ ಜನಸ್ನೇಹಿ ರಾಜಕೀಯ ವ್ಯಕ್ತಿತ್ವ. ಹಾಗೆ ನೋಡಿದರೆ ಇದು ಜನರಿಂದ ಜನರಿಗಾಗಿ ಉದಯವಾದ ನಿಜ ಪ್ರಜಾಪ್ರಭುತ್ವ.

ವಿಜಯ್ ದಾರಿ ಒಂದು ಮಹತ್ವದ ಸಂದೇಶವನ್ನು ನೀಡುತ್ತದೆ– ಸ್ಥಾಪಿತ ರಾಜಕೀಯ ವ್ಯವಸ್ಥೆಗಳು, ಜಾತಿ ಸಮೀಕರಣಗಳು, ಧಾರ್ಮಿಕ ವಿಭಜನೆಗಳು, ಅಪಾರ ಹಣಬಲ, ಪ್ರಚಾರ ಯಂತ್ರಗಳು ಅಥವಾ ಮಾಧ್ಯಮಗಳ ಪ್ರಭಾವವಿಲ್ಲದಿದ್ದರೂ ಸಹ, ಜನರ ನಿಜವಾದ ಪ್ರೀತಿ ಮತ್ತು ಭಾವನಾತ್ಮಕ ಸಂಪರ್ಕವೇ ಒಂದು ರಾಜಕೀಯ ಶಕ್ತಿಯಾಗಬಹುದು ಎಂಬುದನ್ನು. ಈ ಅರ್ಥದಲ್ಲಿ ವಿಜಯ್ ಅವರ ಪಯಣ ರಾಜಕಾರಣದಲ್ಲಿ ನಿಜವಾದ ಬದಲಾವಣೆಯನ್ನು ತರಬೇಕೆಂದು ಬಯಸುವ ಅನೇಕರಿಗೆ ಪ್ರೇರಣೆಯಾಗುವಂಥ ವಿಚಾರ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:119

ಸಮಾಚಾರ ಸಣ್ಣದಲ್ಲ

ಕರಿ ಕೋಟ್ ಧರಿಸಿ ಹೈಕೋರ್ಟ್‌ಗೆ ಮಮತಾ ಹಾಜರ್

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸೋತ ಬಳಿಕ ರಾಜ್ಯದಲ್ಲಿ ನಡೆದ ಹಿಂಸಾಚಾರ ಪ್ರಕರಣದ ವಿಚಾರಣೆ ಹಿನ್ನೆಲೆಯಲ್ಲಿ, ಪಶ್ಚಿಮ ಬಂಗಾಳದ ಮಾಜಿ ಸಿಎಂ ಮಮತಾ ಬ್ಯಾನರ್ಜಿಯವರು ವಕೀಲರ ಕಪ್ಪು ಕೋಟ್ ಧರಿಸಿ, ಕಲ್ಕತ್ತಾ ಉಚ್ಚ ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಟಿಎಂಸಿ, ನ್ಯಾಯಾಲಯಕ್ಕೆ ಹಾಜರಾಗುವುದು ಮಮತಾ ಬ್ಯಾನರ್ಜಿಯವರ ನಿರಂತರ ಬದ್ಧತೆಯನ್ನು ಎತ್ತಿ ತೋರಿಸುತ್ತದೆ ಎಂದು ಹೊಗಳಿದೆ. ಮೇ 4 ರಂದು ಚುನಾವಣಾ ಫಲಿತಾಂಶ ಪ್ರಕಟವಾದಾಗಿನಿಂದ, ರಾಜ್ಯಾದ್ಯಂತ ಅನೇಕ ಜಿಲ್ಲೆಗಳಲ್ಲಿ ಘರ್ಷಣೆಗಳು, ವಿಧ್ವಂಸಕ ಕೃತ್ಯಗಳು, ಬಾಂಬ್ ದಾಳಿಗಳು ನಡೆದಿದ್ದವು. ಈ ದಾಳಿಗೆ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಕಾರಣ ಎಂದು ಎರಡೂ ಪಕ್ಷಗಳು ಕೆಸರೆರಚಾಟದಲ್ಲಿ ತೊಡಗಿವೆ.

ಸ್ಲೀಪರ್ ಬಸ್‌ನಲ್ಲಿ ಸಾಮೂಹಿಕ ಅತ್ಯಾಚಾರ

ದೆಹಲಿ: ಚಲಿಸುತ್ತಿದ್ದ ಖಾಸಗಿ ಬಸ್ಸಿನೊಳಗೆ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿರುವ ಘಟನೆ ದೆಹಲಿಯ ನಂಗ್ಲೋಯಿಯಲ್ಲಿ ನಡೆದಿದೆ. ಬಸ್ಸಿನಲ್ಲಿ ತನ್ನ ಮೇಲೆ ಅತ್ಯಾಚಾರ ನಡೆಸಿರುವುದಾಗಿ ಸಂತ್ರಸ್ತೆ ದೂರು ನೀಡಿದ್ದಾರೆ. ಪೊಲೀಸರು ಬಸ್ ಚಾಲಕ, ಕಂಡಕ್ಟರ್ ಇಬ್ಬರನ್ನೂ ಬಂಧಿಸಿದ್ದಾರೆ. ಸೋಮವಾರ ರಾತ್ರಿ 11 ಗಂಟೆಯ ವೇಳೆಗೆ ಘಟನೆ ನಡೆದಿದ್ದು, ಎಂದಿನಂತೆ ಕೆಲಸ ಮುಗಿಸಿ ಮಹಿಳೆ ಸರಸ್ವತಿ ವಿಹಾರ್ ಬಿ-ಬ್ಲಾಕ್ ಬಸ್ ನಿಲ್ದಾಣದಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಒಂದು ಸ್ಲೀಪರ್ ಬಸ್ ಪಕ್ಕದಲ್ಲಿ ನಿಂತಿತ್ತು. ಆಗ ಮಹಿಳೆಯನ್ನು ಬಲವಂತವಾಗಿ ಒಳಕ್ಕೆಳೆದುಕೊಂಡು ಅತ್ಯಾಚಾರ ಎಸಗಲಾಗಿದೆ. ತಡರಾತ್ರಿ 2 ಗಂಟೆಯ ಸುಮಾರಿಗೆ ಮಹಿಳೆಯನ್ನು ಬಸ್‌ನಿಂದ ಹೊರದಬ್ಬಿದ್ದಾರೆ. ಇದರಿಂದ ಮಹಿಳೆಗೆ ಗಾಯಗಳಾಗಿವೆ.

ಪಶ್ಚಿಮ ಬಂಗಾಳದಲ್ಲಿ ಗೋಹತ್ಯೆಗೆ ಜೈಲು ಶಿಕ್ಷೆ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಇನ್ನು ಮುಂದೆ ಆರೋಗ್ಯವಂತ ಜಾನುವಾರುಗಳನ್ನು ಹತ್ಯೆ ಮಾಡಿದರೆ ಉಗ್ರ ಶಿಕ್ಷೆ ವಿಧಿಸಲಾಗುತ್ತದೆ. ಇದೇ ಮೊದಲ ಬಾರಿಗೆ ಬಂಗಾಳದಲ್ಲಿ ಸರಕಾರ ರಚಿಸಿರುವ ಬಿಜೆಪಿ ಇಂತಹದ್ದೊಂದು ಆದೇಶ ಹೊರಡಿಸಿದೆ. ಪಶ್ಚಿಮ ಬಂಗಾಳದ ಬಿಜೆಪಿ ಸರ್ಕಾರವು ಹೊಸ ಅಧಿಸೂಚನೆ ಹೊರಡಿಸಿದ್ದು, ಅಧಿಕೃತ ಸ್ಥಳೀಯ ಅಧಿಕಾರಿಗಳು ಮತ್ತು ಸರ್ಕಾರಿ ಪಶುವೈದ್ಯರು ನೀಡುವ ಫಿಟ್ನೆಸ್ ಪ್ರಮಾಣ ಪತ್ರ ವಿಲ್ಲದೆ ಹಸುಗಳು, ಹೋರಿಗಳು, ಎಮ್ಮೆಗಳು ಮತ್ತು ಕರುಗಳು ಸೇರಿ ಯಾವುದೇ ಪ್ರಾಣಿಯನ್ನು ವಧೆ ಮಾಡುವಂತಿಲ್ಲ ಎಂದು ಹೇಳಿದೆ. ವಧೆಗೆ ವಯಸ್ಸಿನ ಮಿತಿಗಳು, ಗೊತ್ತುಪಡಿಸಿದ ಸೌಲಭ್ಯಗಳು ಮತ್ತು ಉಲ್ಲಂಘನೆಗಳಿಗೆ ದಂಡಗಳು ಸೇರಿದಂತೆ ವಧೆಗೆ ಈ ಆದೇಶವು ಕಟ್ಟುನಿಟ್ಟಾದ ಷರತ್ತು ವಿಧಿಸುತ್ತದೆ. ವಧೆಗೆ ಪ್ರಮಾಣೀಕರಣ ಕಡ್ಡಾಯ. ಅಧಿಸೂಚನೆಯ ಪ್ರಕಾರ, ಯಾವುದೇ ಪ್ರಾಣಿಯನ್ನು (ಎತ್ತು, ಹಸುಗಳು, ಕರು, ಎಮ್ಮೆಗಳು) ವಧೆ ಮಾಡಲು ಯೋಗ್ಯವೆಂದು ಪ್ರಮಾಣಪತ್ರದಲ್ಲಿ ತಿಳಿಸದ ಹೊರತು ವಧೆ ಮಾಡಬಾರದು.

ಕಡೆಗೂ ಕೇಜ್ರಿವಾಲ್ ವಿಚಾರಣೆಯಿಂದ ಹಿಂದೆ ಸರಿದ ನ್ಯಾ.ಸ್ವರ್ಣಕಾಂತಾ

ದೆಹಲಿ: ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ನಡೆಸುತ್ತಿರುವ ನ್ಯಾ. ಸ್ವರ್ಣಕಾಂತಾ ಶರ್ಮಾ, ಕೇಜ್ರಿವಾಲ್ ವಿರುದ್ಧ ಅಬಕಾರಿ ನೀತಿ ಹಗರಣದ ವಿಚಾರಣೆಯಿಂದ ಹಿಂದೆ ಸರಿದಿದ್ದಾರೆ. ಅಬಕಾರಿ ಹಗರಣದಲ್ಲಿ ಕೇಜ್ರಿ ಮತ್ತು 22 ಮಂದಿಯನ್ನು ಸ್ಥಳೀಯ ನ್ಯಾಯಾಲಯ ಬಿಡುಗಡೆ ಮಾಡಿತ್ತು. ಇದರ ವಿರುದ್ಧ ಸಿಬಿಐ ದೆಹಲಿ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದೆ. ಆರ್‌ಎಸ್‌ಎಸ್ ಸಂಪರ್ಕವಿರುವ ನ್ಯಾ.ಸ್ವರ್ಣಕಾಂತಾ ಈ ವಿಚಾರಣೆಯಿಂದ ಹಿಂದೆ ಸರಿಯಬೇಕೆಂದು ಕೇಜ್ರಿವಾಲ್ ಆಗ್ರಹಿಸಿದ್ದರು. ಆದರೂ ತಾನು ಮುಂದುವರಿಯುವುದಾಗಿ ಸ್ವರ್ಣಕಾಂತಾ ಹೇಳಿದ್ದರು. ಇದರ ವಿರುದ್ಧ ಕೇಜ್ರಿ ಅಭಿಯಾನ ಆರಂಭಿಸಿದ್ದರಿಂದ, ಸ್ವರ್ಣಕಾಂತಾ ನ್ಯಾಯಾಂಗ ನಿಂದನೆ ವಿಚಾರಣೆ ಶುರು ಮಾಡಿದ್ದಾರೆ. ನಿಂದನೆ ಪ್ರಕರಣ ವಿಚಾರಣೆ ಮಾಡುವಾಗ, ಮುಖ್ಯ ಪ್ರಕರಣದಿಂದ ಹಿಂದೆ ಸರಿಯಬೇಕೆಂಬ ನಿಯಮವಿರುವುದರಿಂದ ಅವರು ಈ ನಿರ್ಧಾರ ಮಾಡಿದ್ದಾರೆ.

{ ನರೇಂದ್ರ ಮೋದಿ } ಭಾರತದ ಪ್ರಧಾನಿ

ಬ್ರಿಕ್ಸ್ ರಾಷ್ಟ್ರಗಳ ವಿದೇಶಾಂಗ ಸಚಿವರೊಂದಿಗೆ, ನಿಯೋಗಗಳ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿದ್ದು ಬಹಳ ಸಂತೋಷ ನೀಡಿದೆ. ಉದಯೋನ್ಮುಖ ಆರ್ಥಿಕತೆಗಳ ನಡುವೆ ಸಹಕಾರವನ್ನು ವೃದ್ಧಿಸಲು ಬ್ರಿಕ್ಸ್ ಉತ್ತಮ ವೇದಿಕೆಯಾಗಿದೆ. ಏಷ್ಯಾದ ದಕ್ಷಿಣ ಭಾಗದಲ್ಲಿರುವ ದೇಶಗಳಿಗೆ ಧ್ವನಿಯಾಗಲು ಇದೊಂದು ಉತ್ತಮ ಅವಕಾಶವಾಗಿದೆ. ಈ ವರ್ಷ ಭಾರತದ ನಾಯಕತ್ವದಲ್ಲಿ ನಾವು ಸ್ಥಿರ ಅಭಿವೃದ್ಧಿ ಬಲಗೊಳಿಸಲು ಕ್ರಮ ಕೈಗೊಳ್ಳುತ್ತೇವೆ.



ಉ.ಪ್ರ.ದಲ್ಲಿ ಪ್ರಚಂಡ ಮಳೆಗೆ 104 ಬಲಿ

ಬಿರುಗಾಳಿಸಹಿತ ಬಿರುಮಳೆ, ಪ್ರಯಾಗ್‌ರಾಜ್‌ನಲ್ಲೇ 21 ಮಂದಿ ಬಲಿ, ಹಲವು ಜಿಲ್ಲೆಗಳಲ್ಲಿ ಹಾನಿ | ಬುಧವಾರ ಸಂಜೆ ದಿಢೀರ್ ವಾತಾವರಣ ಬದಲು

ಚಂಡಮಾರುತದ ಆರ್ಭಟಕ್ಕೆ ನೆಲಕ್ಕುರುಳಿದ ಮರ | 100ಕ್ಕೂ ಅಧಿಕ ಮನೆಗಳಿಗೆ ಹಾನಿ, 53ಕ್ಕೂ ಅಧಿಕ ಮಂದಿಗೆ ಗಾಯ, ಸಿಡಿಲಿಗೆ ಹಲವು ವ್ಯಕ್ತಿಗಳ ಮರಣ

ಲಖನೌ: ಬುಧವಾರ ಸಂಜೆ ಸುರಿದ ಭಾರೀ ಮಳೆ ಮತ್ತು ಚಂಡಮಾರುತಕ್ಕೆ ಬಹುತೇಕ ಉತ್ತರಪ್ರದೇಶ ನಡುಗಿದೆ. ಬಿರುಗಾಳಿ ಮಳೆಗೆ ಸಾವಿನ ಸಂಖ್ಯೆ 104ಕ್ಕೇರಿದೆ. ಪ್ರಯಾಗ್‌ರಾಜ್‌ನಲ್ಲೇ ಅತ್ಯಧಿಕ 21 ಜನ ಬಲಿಯಾಗಿದ್ದಾರೆ. ಭಾರೀ ಮಳೆಯೊಂದಿಗೆ ಬೀಸಿದ ಪ್ರಬಲ ಚಂಡಮಾರುತ ವ್ಯಾಪಕ ಹಾನಿಯನ್ನುಂಟು ಮಾಡಿದ್ದು, ಭದೋಹಿ, ಫತೇಪುರ, ಬುದಾವುನ್, ಸೋನಭದ್ರಾ, ಕಾನ್ಪುರ ದೇಹತ್, ಹರ್ದೋಯಿ, ಸಂಭಲ್ ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿ ಸಾವುನೋವಗಳಾಗಿವೆ.

ಭದೋಹಿಯಲ್ಲಿ 18, ಮಿರ್ಜಾಪುರದಲ್ಲಿ 15, ಫತೇಪುರದಲ್ಲಿ 10, ಉನ್ನಾವ್ ಮತ್ತು ಬುದಾವುನ್‌ನಲ್ಲಿ ತಲಾ ಆರು, ಪ್ರತಾಪಗಢ ಮತ್ತು ಬರೇಲಿಯಲ್ಲಿ ತಲಾ ನಾಲ್ಕು ಮತ್ತು ಸೀತಾಪುರ, ರಾಯ್ ಬರೇಲಿ ಮತ್ತು ಚಂದೌಲಿಯಲ್ಲಿ ತಲಾ ಇಬ್ಬರು ಸಾವನ್ನಪ್ಪಿದ್ದಾರೆ. ಕಾನಪುರ ದೇಹತ್, ಹರ್ದೋಯಿ ಮತ್ತು ಸಂಭಲ್‌ನಿಂದಲೂ ಎರಡು ಸಾವುಗಳು ವರದಿಯಾಗಿವೆ. ಕೌಶಂಬಿ, ಶಹಜಹಾನಪುರ, ಸೋನಭದ್ರಾ, ಲಖೀಂಪುರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಅಕಾಲಿಕ ಗುಡುಗು ಸಹಿತ ಮಳೆ ಮತ್ತು ಸಿಡಿಲು ಬಡಿದು ಹಾನಿಗೊಳಗಾದ ಜನರಿಗೆ ಪರಿಹಾರ ನೀಡುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ 24 ಗಂಟೆಗಳ ಒಳಗೆ ಪರಿಹಾರ ಕಾರ್ಯಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದ್ದಾರೆ. ಭದೋಹಿಯಲ್ಲಿ, ಹಲವಾರು ಪ್ರದೇಶಗಳಲ್ಲಿ ಮರಗಳು ಉರುಳಿದ್ದು, ವಿದ್ಯುತ್ ಕಂಬಗಳು ಮತ್ತು ಮನೆಗಳು ಹಾನಿಗೊಳಗಾಗಿ ರುವ ಬಗ್ಗೆ ವರದಿಯಾಗಿದೆ ಎಂದು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಕುನ್ವರ್ ವೀರೇಂದ್ರ ಕುಮಾರ್ ಮೌರ್ಯ ಮಾಹಿತಿ ನೀಡಿದರು.

ಚಂಡಮಾರುತದಿಂದಾಗಿ ಮೊಬೈಲ್ ನೆಟ್‌ವರ್ಕ್‌ಗಳು ಕಡಿತವಾಗಿದ್ದು, ಪುನಃಸ್ಥಾಪನೆ ಮತ್ತು ರಕ್ಷಣಾ ಕಾರ್ಯಾಚರಣೆಗಳಿಗೆ ತೊಂದರೆಯಾಗುತ್ತಿವೆ. ಜಿಲ್ಲೆಯ ಮೂರು ತಾಲೂಕುಗಳಲ್ಲಿ ಉಪವಿಭಾಗೀಯ ನ್ಯಾಯಾಧೀಶರು, ತಹಶೀಲ್ದಾರರು, ಇತರ ಜಿಲ್ಲಾ ಅಧಿಕಾರಿಗಳು, ಪೊಲೀಸರು ಪರಿಶೀಲನೆ ನಡೆಸಿ ಪರಿಹಾರ ಕಾರ್ಯಗಳನ್ನು ನಡೆಸುತ್ತಿದ್ದಾರೆ ಎಂದು ಮೌರ್ಯ ತಿಳಿಸಿದ್ದಾರೆ.

ಮಳೆ ಹೊಡೆತಕ್ಕೆ 53 ಜನರಿಗೆ ಗಾಯಗಳಾಗಿವೆ. 100ಕ್ಕೂ ಅಧಿಕ ಮನೆಗಳು ಹಾನಿಗೊಂಡಿವೆ, ರಾಜ್ಯಾದ್ಯಂತ ಇನ್ನೂ ಹಲವು ಮನೆಗಳು ನೆಲಕ್ಕುರುಳಿದ ಮಾಹಿತಿಯಿದೆ. 130 ಜಾನುವಾರುಗಳು ಸಾವಿಗೀಡಾಗಿವೆ. ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ.

ಏನಾಯ್ತು?: ಬುಧವಾರ ಸಂಜೆ ಹಠಾತ್ತನೆ ಹವಾಮಾನ ಬದಲಾಯಿತು. ಉತ್ತರ ಪ್ರದೇಶದ ದೊಡ್ಡ ಭಾಗಗಳಲ್ಲಿ ದಟ್ಟ ಮೋಡಗಳು ಆವರಿಸಿದ್ದವು. ತೀವ್ರ ಬಿರುಗಾಳಿಯು ಹೋರ್ಡಿಂಗ್‌ಗಳು ಮತ್ತು ಟಿನ್ ಶೆಡ್‌ಗಳನ್ನು ನೆಲಸಮ ಮಾಡಿತು. ಮರಗಳು ಬುಡಮೇಲಾದ ಕಾರಣ ಅನೇಕರು ಮರಗಳು ಮತ್ತು ಫ್ಲೈಓವರ್‌ಗಳ ಕೆಳಗೆ ಆಶ್ರಯ ಪಡೆಯಬೇಕಾಯಿತು. ಹಲವಾರು ರಸ್ತೆಗಳು ಮುಚ್ಚಿಹೋಗಿದ್ದವು. ಮರಗಳು ಉರುಳಿಬಿದ್ದ ಕಾರಣ ವಾಹನಗಳು ಜಖಂಗೊಂಡವು. ಬಿರುಗಾಳಿಯಲ್ಲಿ ಅನೇಕ ಮನೆಗಳು ಸಹ ಹಾನಿಗೊಳಗಾದವು. ಸಿಲುಕಿಕೊಂಡಿದ್ದವರನ್ನು ರಕ್ಷಿಸಲು ರಕ್ಷಣಾ ಸಿಬ್ಬಂದಿ ಬರಿ ಕೈಗಳಿಂದಲೇ ಅವಶೇಷಗಳನ್ನು ತೆರವುಗೊಳಿಸಿದರು.

ಭದೋಹಿಯ ರಾಂಪುರದಲ್ಲಿ ತಾತ್ಕಾಲಿಕ ಸೇತುವೆ ಹಾನಿಗೊಳಗಾದ ನಂತರ ಹಲವಾರು ಜನರು ಗಂಗಾ ನದಿಗೆ ಬಿದ್ದಿರುವ ವರದಿಗಳಿವೆ. ಮತ್ತೊಂದು ಘಟನೆಯಲ್ಲಿ, ಮಿರ್ಜಾಪುರದ ಗೌರ ಪ್ರಮಾಣಪುರದಲ್ಲಿ ಇನ್ನೊಂದು ತಾತ್ಕಾಲಿಕ ಸೇತುವೆ ಹಾನಿಗೊಳಗಾಗಿದ್ದು, 20 ಹಳ್ಳಿಗಳ ಸಂಪರ್ಕ ಕಡಿತಗೊಂಡಿದೆ. ಫತೇಪುರದ ಖಾಗಾ ತಾಲೂಕಿನಲ್ಲಿ 8 ಸಾವುಗಳು ಸಂಭವಿಸಿವೆ. ಇದರಲ್ಲಿ ಐವರು ಮಹಿಳೆಯರು ಸೇರಿದ್ದಾರೆ. ಇದಲ್ಲದೆ, ಸದರ್ ತಾಲೂಕಿನಲ್ಲಿ ಗೋಡೆ ಕುಸಿದು ಒಬ್ಬ ಮಹಿಳೆ ಸಾವನ್ನಪ್ಪಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವಿನಾಶ್ ತ್ರಿಪಾಠಿ ತಿಳಿಸಿದ್ದಾರೆ.

ಪ್ರತಾಪಗಢದಲ್ಲಿ ಸಿಡಿಲಿನ ಹೊಡೆತಕ್ಕೆ ಗೋಡೆ ಮತ್ತು ಶೆಡ್ ಕುಸಿದ 2 ಘಟನೆಗಳು ವರದಿಯಾಗಿವೆ. ಇದರಲ್ಲಿ ನಾಲ್ವರು ಮೃತಪಟ್ಟಿದ್ದರೆ, ಕಾನ್ಪುರ ದೇಹತ್ ಜಿಲ್ಲೆಯಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ ಇಬ್ಬರು ಬಲಿಯಾಗಿದ್ದಾರೆ. ಡಿಯೋರಿಯಾದಲ್ಲಿ ಸಿಡಿಲು ಬಡಿದು ಇಬ್ಬರು ಸಾವನ್ನಪ್ಪಿದ್ದಾರೆ.

ಬಿರುಗಾಳಿಗೆ ತರಗೆಲೆಯಂತೆ 50 ಅಡಿ ಎತ್ತರಕ್ಕೆ ಹಾರಿದ ವೃದ್ಧ

ಬಿರುಗಾಳಿಯ ರಭಸಕ್ಕೆ ಶೆಡ್ ಒಂದರ ತಗಡಿನ ಶೀಟ್‌ಗಳು ಹಾರಿಹೋಗಿವೆ. ಅದರ ಜೊತೆಗೆ ವ್ಯಕ್ತಿಯೊಬ್ಬ ಸುಮಾರು 50 ಅಡಿ ಎತ್ತರಕ್ಕೆ ಹಾರಿ ನೆಲಕ್ಕೆ ಅಪ್ಪಳಿಸಿದ ಘಟನೆ ಉತ್ತರಪ್ರದೇಶದ ಬರೇಲಿಯ ಬಾಮಿಯಾನಾ ಗ್ರಾಮದಲ್ಲಿ ನಡೆದಿದೆ. ವ್ಯಕ್ತಿ ಗಾಳಿಯಲ್ಲಿ ಹಾರುವ ವಿಡಿಯೋ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಗಾಳಿಯಲ್ಲಿ ಹಾರಿ ಬಿದ್ದ ವ್ಯಕ್ತಿಯನ್ನು ನಾನ್ಹೆ ಮಿಯಾನ್ ಎಂದು ಗುರುತಿಸಲಾಗಿದೆ. ಅವರ ಕೈಗಳು ಮತ್ತು ಕಾಲುಗಳ ಮೂಳೆ ಮುರಿದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬಿರುಗಾಳಿಯ ಸಮಯ ದಲ್ಲಿ ಅವರು ತಗಡಿಗೆ ಕಟ್ಟಿದ್ದ ಹಗ್ಗವನ್ನು ಹಿಡಿದುಕೊಂಡಿದ್ದರು. ಗಾಳಿಯ ರಭಸಕ್ಕೆ ತಗಡು ಹಾರಿದಾಗ ಅದರ ಜೊತೆಯಲ್ಲೇ ಅವರು ಗಾಳಿಯಲ್ಲಿ ಮೇಲೆ ಹಾರಿದ್ದಾರೆ. ಈ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಿದ ನಾನ್ಹೆ ಮಿಯಾನ್, ಗಾಳಿ ಬೀಸುವಾಗ ಸುರಕ್ಷಿತವಾಗಿರುತ್ತೇನೆ ಎಂದು ಹಗ್ಗ ಹಿಡಿದಿದ್ದೆ. ಆದರೆ ಗಾಳಿಯ ರಭಸಕ್ಕೆ ತಗಡಿನ ಶೀಟ್‌ಗಳು ಹಾರಿ ಹೋದವು. ಅದರ ಜೊತೆ ನಾನು ಸಹ ಹಾರಿ ಹೋದೆ. ನಾನು ಎಲ್ಲಿ ಬಿದ್ದೆನೆಂದು ನನಗೆ ತಿಳಿಯಲಿಲ್ಲ. ಸುಮಾರು 50 ಅಡಿ ಎತ್ತರಕ್ಕೆ ಹಾರಿ, ದೂರದಲ್ಲಿ ಬಿದ್ದಿದ್ದೆ ಎಂದು ಹೇಳಿಕೊಂಡಿದ್ದಾರೆ. ಅಧಿಕಾರಿಗಳು ನಾನೇ ಅವರೊಂದಿಗೆ ಮಾತನಾಡಿ, ಅಗತ್ಯ ಸಹಾಯ ನೀಡುವ ಭರವಸೆ ನೀಡಿದ್ದಾರೆ.

ನೇರಾನೇರ ಮಾತುಕತೆಯಲ್ಲಿ ಚೀನಾ ಅಧ್ಯಕ್ಷ ಜಿನ್‌ಪಿಂಗ್‌ರಿಂದ ಟ್ರಂಪ್‌ಗೆ ಖಡಕ್ ಎಚ್ಚರಿಕೆ
ಟ್ರಂಪ್ ಪ್ರವಾಸಕ್ಕೆ ಮುನ್ನವೇ ನಾಲ್ಕು ಷರತ್ತುಗಳನ್ನು ಹಾಕಿದ ಚೀನಾ ರಾಯಭಾರ ಕಚೇರಿ

ತೈವಾನ್ ಮುಟ್ಟಿದರೆ ಸಂಘರ್ಷ: ಚೀನಾ

ಬೀಜಿಂಗ್: ಇಡೀ ವಿಶ್ವದ ಗಮನ ಸೆಳೆದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾ ಭೇಟಿಯಲ್ಲಿ ನಿರೀಕ್ಷೆಯಂತೆ ತೈವಾನ್ ವಿಚಾರವೇ ದೊಡ್ಡದಾಗಿ ಚರ್ಚೆಯಾಗಿದೆ. ಚೀನಾವನ್ನು ಎದುರು ಹಾಕಿಕೊಂಡು ಸ್ವತಂತ್ರವಾಗುಳಿದಿರುವ ತೈವಾನ್ ಸಮಸ್ಯೆಯನ್ನು ಚೀನಾ ಟ್ರಂಪ್ ಎದುರು ಪ್ರಮುಖವಾಗಿ ಪ್ರಸ್ತಾಪಿಸಿದೆ. ತೈವಾನ್ ಸಮಸ್ಯೆಯನ್ನು ಸರಿಯಾಗಿ ನಿರ್ವಹಿಸದಿದ್ದರೆ ಉಭಯ ದೇಶಗಳ ನಡುವೆ ನೇರ ಚಕಮಕಿ ಅಥವಾ ಘರ್ಷಣೆಯೇ ಸಂಭವಿಸಬಹುದು ಎಂದು ಚೀನಾ ಅಧ್ಯಕ್ಷ ಕ್ಷಿ ಜಿನ್‌ಪಿಂಗ್ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಮ್ಮುಖದಲ್ಲೇ ನೇರ ಎಚ್ಚರಿಕೆ ನೀಡಿದ್ದಾರೆ. ಚೀನಾದ ಈ ಹೇಳಿಕೆಯನ್ನು ತೈವಾನ್ ಬಲವಾಗಿ ಖಂಡಿಸಿದೆ.

ಬೀಜಿಂಗ್‌ನ ಗ್ರೇಟ್ ಹಾಲ್ ಆಫ್ ದಿ ಪೀಪಲ್‌ನಲ್ಲಿ ನಡೆದ ದ್ವಿಪಕ್ಷೀಯ ಶೃಂಗಸಭೆಯಲ್ಲಿ ಮಾತನಾಡಿದ ಜಿನ್‌ಪಿಂಗ್, ತೈವಾನ್ ವಿಷಯವು ಅಮೆರಿಕ-ಚೀನಾ ಸಂಬಂಧಗಳಲ್ಲೇ ಅತ್ಯಂತ ಸೂಕ್ಷ್ಮ ಮತ್ತು ಪ್ರಮುಖವಾದದ್ದು. ಈ ವಿಚಾರದಲ್ಲಿ ತಪ್ಪು ಹೆಜ್ಜೆಯಿಡಬಾರದು. ಅಮೆರಿಕ-ಚೀನಾ ಒಟ್ಟಿಗೆ ಹೆಜ್ಜೆ ಹಾಕುವುದರಿಂದಲೇ ಒಳಿತಿರುವುದು ಎಂದಿದ್ದಾರೆ. ಟ್ರಂಪ್ ಚೀನಾಕ್ಕೆ ಕಾಲಿಡುವ ಮುನ್ನವೇ ಜಿನ್‌ಪಿಂಗ್ 4 ಷರತ್ತುಗಳನ್ನು ಹಾಕಿದ್ದರು. ಅದರ ಮುಖ್ಯವಿಚಾರವೇ ಅಮೆರಿಕ ಚೀನಾದ ಆಂತರಿಕ ವಿಚಾರಗಳಿಗೆ ಕೈಹಾಕಬಾರದು ಎನ್ನುವುದು.

ತೈವಾನಿನ ಸ್ವಾತಂತ್ರ್ಯ ಮತ್ತು ತೈವಾನ್ ಜಲಸಂಧಿಯಲ್ಲಿನ ಶಾಂತಿ ಇವೆರಡೂ 'ಬೆಂಕಿ ಮತ್ತು ನೀರು' ಇದ್ದಂತೆ, ಎಂದಿಗೂ ಜೊತೆಯಾಗಿರಲು ಸಾಧ್ಯವಿಲ್ಲ. ಅಮೆರಿಕವು ತೈವಾನ್‌ಗೆ ನೀಡುತ್ತಿರುವ ಬಿಲಿಯನ್ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಒಪ್ಪಂದಗಳನ್ನು ನಿಲ್ಲಿಸಬೇಕು ಮತ್ತು ಚೀನಾದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂದು ಖಡಕ್ ಆಗಿ ಹೇಳಿದ್ದಾರೆ. ಒಂದು ವೇಳೆ ತೈವಾನ್ ವಿಷಯವನ್ನು ಸರಿಯಾಗಿ ನಿಭಾಯಿಸಿದರೆ ಮಾತ್ರ ಉಭಯ ದೇಶಗಳ ಸಂಬಂಧ ಸ್ಥಿರವಾಗಿರಲು ಸಾಧ್ಯ. ಚೀನಾ ಮತ್ತು ಅಮೆರಿಕ ಸ್ಪರ್ಧಿಗಳಾಗುವ ಬದಲು ಪಾಲುದಾರರಾಗಬೇಕು ಎಂದು ಕ್ಷಿ ಜಿನ್‌ಪಿಂಗ್ ಪ್ರತಿಪಾದಿಸಿದ್ದಾರೆ.

ನೀವೀ ನಾಲ್ಕು ಕೆಂಪು ಗೆರೆಗಳನ್ನು ದಾಟುವಂತಿಲ್ಲ!

ಟ್ರಂಪ್ ಚೀನಾಕ್ಕೆ ಕಾಲಿಡುವ ಮುನ್ನವೇ ಅಮೆರಿಕದಲ್ಲಿರುವ ಚೀನಾ ರಾಯಭಾರ ಕಚೇರಿ 4 ಷರತ್ತುಗಳನ್ನು ಹಾಕಿ, ಈ ನಾಲ್ಕು ಕೆಂಪುಗೆರೆಗಳನ್ನು ದಾಟುವಂತಿಲ್ಲ ಎಂದು ಹೇಳಿತ್ತು. ಅವು ಹೀಗಿವೆ.

1. **ತೈವಾನ್ ಚೀನಾದ ಅವಿಭಾಜ್ಯ ಅಂಗ:** ಇದು ಚೀನಾದ ಅತ್ಯಂತ ಪ್ರಮುಖ ಮತ್ತು ಮೊದಲನೇ ಕೆಂಪು ಗೆರೆಯಾಗಿದೆ. ತೈವಾನ್ ದೇಶವು ಚೀನಾದ ಅವಿಭಾಜ್ಯ ಅಂಗವಾಗಿದ್ದು, ಅಮೆರಿಕ ಅದರ ಸ್ವಾತಂತ್ರ್ಯದ ಹಂಬಲವನ್ನು ಬೆಂಬಲಿಸಬಾರದು ಮತ್ತು ಅದಕ್ಕೆ ಸೇನಾ ಶಸ್ತ್ರಾಸ್ತ್ರಗಳನ್ನು ಪೂರೈಸಬಾರದು.
2. **ಆಂತರಿಕ ಆಡಳಿತದಲ್ಲಿ ಹಸ್ತಕ್ಷೇಪ ಬೇಡ:** ಪಾಶ್ಚಿಮಾತ್ಯ ದೇಶಗಳು ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಹೆಸರಿನಲ್ಲಿ ಚೀನಾದ ಆಂತರಿಕ ಆಡಳಿತವನ್ನು ಟೀಕಿಸುವುದನ್ನು ಚೀನಾ ವಿರೋಧಿಸುತ್ತದೆ. ಹಾಂಕಾಂಗ್, ಕ್ಸಿಂಜಿಯಾಂಗ್ (ಉಯಿಘರ್ ಮುಸ್ಲಿಮರ ವಿಷಯ) ಮತ್ತು ಟಿಬೆಟ್ ವಿಷಯಗಳು ಚೀನಾದ ಆಂತರಿಕ ವಿಚಾರಗಳಾಗಿದ್ದು, ಇದರಲ್ಲಿ ಅಮೆರಿಕ ಹಸ್ತಕ್ಷೇಪ ಮಾಡಬಾರದು.
3. **ರಾಜಕೀಯ ವ್ಯವಸ್ಥೆ ಬದಲಿಸುವ ಯತ್ನ ಬೇಡ:** ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷದ ಏಕಪಕ್ಷೀಯ ಆಡಳಿತವಿದೆ. ಅಮೆರಿಕವು ಚೀನಾದ ರಾಜಕೀಯ ವ್ಯವಸ್ಥೆಯನ್ನು ಅಥವಾ ಕಮ್ಯುನಿಸ್ಟ್ ಪಕ್ಷದ ನಾಯಕತ್ವವನ್ನು ಬದಲಾಯಿಸಲು ಯಾವುದೇ ರೀತಿಯ ಪರೋಕ್ಷ ಪ್ರಯತ್ನಗಳನ್ನು ಮಾಡಬಾರದು.
4. **ಆರ್ಥಿಕ, ತಾಂತ್ರಿಕ ಅಭಿವೃದ್ಧಿ ತಡೆ ಬೇಡ:** ಚೀನಾದ ತಾಂತ್ರಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ತಡೆಯಲು ಅಮೆರಿಕ ಹೇರುತ್ತಿರುವ ನಿರ್ಬಂಧಗಳನ್ನು ಚೀನಾ ವಿರೋಧಿಸಿದೆ. ಚೀನಾದ ತಂತ್ರಜ್ಞಾನ ಕಂಪನಿಗಳ ಮೇಲೆ (ಉದಾಹರಣೆಗೆ ಮೈಕ್ರೋಚಿಪ್ಸ್, ಇವಿ ಕಾರುಗಳು, ಎಐ) ಅಮೆರಿಕ ಅನಗತ್ಯ ವ್ಯಾಪಾರ ನಿರ್ಬಂಧಗಳನ್ನು ಹೇರಬಾರದು ಮತ್ತು ಚೀನಾದ ಅಭಿವೃದ್ಧಿಯ ಹಕ್ಕನ್ನು ಕಸಿದುಕೊಳ್ಳಬಾರದು.

ಚೀನಾ ವಿರುದ್ಧ ತೈವಾನ್ ಕೆಂಡ

ತೈವಾನ್‌ನ ವಿದೇಶಾಂಗ ಸಚಿವಾಲಯವು ಜಿನ್‌ಪಿಂಗ್ ಅವರ ಹೇಳಿಕೆಯನ್ನು ತಿರಸ್ಕರಿಸಿದ್ದು, ತೈವಾನ್ ಜಲಸಂಧಿಯಲ್ಲಿನ ಅಸ್ಥಿರತೆಗೆ ಚೀನಾದ ಸರ್ವಾಧಿಕಾರಿ ಮತ್ತು ಆಕ್ರಮಣಕಾರಿ ಧೋರಣೆಯೇ ಏಕೈಕ ಕಾರಣ ಎಂದು ತಿರುಗೇಟು ನೀಡಿದೆ. ಅಮೆರಿಕವು ತೈವಾನ್‌ಗೆ ತನ್ನ ದೃಢವಾದ ರಕ್ಷಣಾತ್ಮಕ ಮತ್ತು ರಾಜತಾಂತ್ರಿಕ ಬೆಂಬಲವನ್ನು ಮುಂದುವರಿಸಿದೆ ಎಂದು ತೈವಾನ್ ಕೃತಜ್ಞತೆ ಸಲ್ಲಿಸಿದೆ. ಚೀನಾ ತೈವಾನ್ ಅನ್ನು ತನ್ನದೇ ಒಂದು ಪ್ರಾಂತ್ಯವೆಂದು ಪರಿಗಣಿಸುತ್ತದೆ. ತೈವಾನ್ ತನ್ನನ್ನು ತಾನು ಚೀನಾ ಗಣರಾಜ್ಯ ಎಂದು ಕರೆದುಕೊಳ್ಳುತ್ತದೆ. ಅರ್ಥಾತ್ ತಾನೇ ನಿಜವಾದ ಚೀನಾ ಎನ್ನುತ್ತದೆ.

ಆಗ ಬೈತಿದ್ದ ಟ್ರಂಪ್‌ರಿಂದಲೇ ಚೀನಾಕ್ಕೆ ಹೊಗಳಿಕೆ

ಚೀನಾದ ವಿರುದ್ಧ ಬಹಿರಂಗವಾಗಿಯೇ ಆಕ್ರೋಶ ಹೊರಹಾಕುತ್ತಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಗ ಚೀನಾವನ್ನು ಹಾಡಿ ಹೊಗಳಿದ್ದಾರೆ. ಬೀಜಿಂಗ್‌ನ ಗ್ರೇಟ್ ಹಾಲ್ ಆಫ್ ಪೀಪಲ್‌ನಲ್ಲಿ ನಡೆದ ಐತಿಹಾಸಿಕ ಜಿ-2 (ಎ2) ಶೃಂಗಸಭೆಯ ಆರಂಭಿಕ ಮಾತುಕತೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ ಅಧ್ಯಕ್ಷ ಕ್ಷಿ ಜಿನ್‌ಪಿಂಗ್‌ರನ್ನು ಮುಕ್ತವಾಗಿ ಶ್ಲಾಘಿಸಿದ್ದಾರೆ. ಜಿನ್‌ಪಿಂಗ್‌ರನ್ನು ಉದ್ದೇಶಿಸಿ ಮಾತನಾಡಿದ ಟ್ರಂಪ್, ನಿಮ್ಮೊಂದಿಗೆ ಇರುವುದು ಮತ್ತು ನಿಮ್ಮ ಸ್ನೇಹಿತನಾಗಿರುವುದು ನನಗೆ ಹೆಮ್ಮೆಯ ವಿಷಯ. ಚೀನಾ ಮತ್ತು ಅಮೆರಿಕ ನಡುವಿನ ಸಂಬಂಧವು ಹಿಂದೆಂದಿಗಿಂತಲೂ ಉತ್ತಮವಾಗಲಿದೆ. ನಾನು ಜಿನ್‌ಪಿಂಗ್ ಅವರನ್ನು ಒಬ್ಬ ಶ್ರೇಷ್ಠ ನಾಯಕ ಎಂದು ಎಲ್ಲರ ಬಳಿ ಹೇಳುತ್ತೇನೆ. ಕೆಲವರಿಗೆ ನಾನು ಹೀಗೆ ಹೇಳುವುದು ಇಷ್ಟವಾಗುವುದಿಲ್ಲ, ಆದರೆ ಇದು ಸತ್ಯ. ನಾನು ಕೇವಲ ಸತ್ಯವನ್ನಷ್ಟೇ ಹೇಳುತ್ತೇನೆ ಎಂದರು.

ನೀಟ್ ಪ್ರಶ್ನೆ ಸೋರಿಕೆಗೆ ವ್ಯವಸ್ಥಿತ ಷಡ್ಯಂತ್ರ: ಬಿಗಿ ತಂತ್ರಜ್ಞಾನ ಬಳಕೆ

ಎನ್‌ಕ್ರಿಪ್ಟೆಡ್ ಆ್ಯಪ್ ಮೂಲಕ ಹಣ ರವಾನೆ
ವಿದ್ಯಾರ್ಥಿ ಶುಭಂ ಬಂಧನದಿಂದ ಬಹಿರಂಗ

ದೆಹಲಿ: ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಕನಸಿಗೆ ದೊಡ್ಡ ಹೊಡೆತ ನೀಡಿದ ನೀಟ್ ಯುಜಿ 2026 ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ದಿನದಿಂದ ದಿನಕ್ಕೆ ರೋಚಕ ತಿರುವು ಪಡೆಯುತ್ತಿದೆ. ಈ ಹಗರಣದಲ್ಲಿ ಈಗ ಮಹಾರಾಷ್ಟ್ರದ ನಾಸಿಕ್ ಮೂಲದ 30 ವರ್ಷದ ಶುಭಂ ಖೈರ್ನಾರ್‌ರನ್ನು ಬಂಧಿಸಲಾಗಿದೆ. ಈ ವೇಳೆ ಈ ಹಗರಣವನ್ನು ವ್ಯವಸ್ಥಿತವಾಗಿ ನಡೆಸಲಾಗಿದೆ, ಇದು ಕೇವಲ ಪ್ರಶ್ನೆಪತ್ರಿಕೆ ಸೋರಿಕೆ ಮಾತ್ರವಲ್ಲ, ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಡೆಸಿದ ದೊಡ್ಡ ಜಾಲ ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ. ಪೋರ್ಟೇಬಲ್ ಸ್ಕ್ಯಾನರ್‌ಗಳು, ಟೆಲಿಗ್ರಾಮ್ ಗುಂಪುಗಳು, ರಹಸ್ಯ ಸರ್ವರ್‌ಗಳು, ಪತ್ತೆಹಚ್ಚಲು ಸಾಧ್ಯವಾಗದಂತೆ ಎನ್‌ಕ್ರಿಪ್ಟ್ ಮಾಡಿದ ಫೈಲ್‌ಗಳ ಮೂಲಕ ಪ್ರಶ್ನೆ ಪತ್ರಿಕೆಯನ್ನು ಹರಿಬಿಡಲಾಗಿದೆ. ಹಣವನ್ನೂ ಮಾಹಿತಿ ಹೊರ ಬೀಳದಂತಹ ಎನ್‌ಕ್ರಿಪ್ಟೆಡ್ ಆ್ಯಪ್‌ಗಳ ಮೂಲಕ ಕಳುಹಿಸಲಾಗಿದೆ. ಪರೀಕ್ಷೆ ಆರಂಭವಾಗುವ 45 ಗಂಟೆಗಳ ಮುಂಚೆಯೇ ಪ್ರಶ್ನೆಪತ್ರಿಕೆ ಕೆಲವರ ಕೈ ಸೇರಿತ್ತು ಎಂದು ತಿಳಿದುಬಂದಿದೆ.

ವೇಷ ಬದಲಿಸಿದ್ದ ಆರೋಪಿ: ಪ್ರಕರಣ ಬೆಳಕಿಗೆ ಬಂದ ನಂತರ ತಲೆಮರೆಸಿಕೊಂಡಿದ್ದ ನಾಸಿಕ್‌ನ ಶುಭಂ ಖೈರ್ನಾರ್‌ನನ್ನು ಸಿಬಿಐ ಅಧಿಕಾರಿಗಳು ಮಂಗಳವಾರ ಮಧ್ಯಾಹ್ನ ಬಂಧಿಸಿದ್ದಾರೆ. ದೇವಸ್ಥಾನಕ್ಕೆ ತೆರಳುತ್ತಿದ್ದಾಗಲೇ ಆರೋಪಿ ಅಧಿಕಾರಿಗಳ ಬಲೆಗೆ ಬಿದ್ದಿದ್ದಾನೆ. ಬಂಧನದಿಂದ ತಪ್ಪಿಸಿಕೊಳ್ಳಲು ಶುಭಂ ಕೂದಲು ಕತ್ತರಿಸಿಕೊಂಡು ಯಾರಿಗೂ ಗುರುತಿಸಲು ಸಾಧ್ಯವಾಗದಂತೆ ತಲೆಮರೆಸಿಕೊಂಡಿದ್ದ. ಆದರೆ ಹಳೆಯ ಫೋಟೋ ಗಳು ಮತ್ತು ಡಿಜಿಟಲ್ ಟ್ರ್ಯಾಕಿಂಗ್ ಸಹಾಯದಿಂದ ಬಂಧಿಸಲಾಗಿದೆ.

5 ಲಕ್ಷ ಲಾಭಕ್ಕಾಗಿ ಸೋರಿಕೆ: ನಾಸಿಕ್‌ನ ಇಂದಿರಾನಗರ ಪ್ರದೇಶದ ನಿವಾಸಿಯಾದ ಶುಭಂ, ಆಯುರ್ವೇದ ವೈದ್ಯಕೀಯ (ಬಿಎಎಮ್‌ಎಸ್) ವಿದ್ಯಾರ್ಥಿ ಎಂದು ತಿಳಿದು ಬಂದಿದೆ. ಪುಣೆ ಮೂಲದ ಶಂಕಿತ ವ್ಯಕ್ತಿಯಿಂದ ಆತ ಪ್ರಶ್ನೆಪತ್ರಿಕೆಯನ್ನು 10 ಲಕ್ಷ ರುಪಾಯಿಗೆ ಖರೀದಿಸಿದ್ದಾನೆ. ನಂತರ ಅದನ್ನು ಹರಿಯಾಣದ ಖರೀದಿದಾರರಿಗೆ 15 ಲಕ್ಷ ರೂಪಾಯಿಗೆ ಮಾರಾಟ ಮಾಡಿ 5 ಲಕ್ಷ ರುಪಾಯಿ ಲಾಭ ಗಳಿಸಿದ್ದಾನೆ ಎಂದು ಆರೋಪಿಸಲಾಗಿದೆ.

ಟಿವಿಕೆಗೆ ಬೆಂಬಲ: 25 ಶಾಸಕರನ್ನು ಹುದ್ದೆಯಿಂದ ಕಿತ್ತೊಗೆದ ಎಡಿಎಂಕೆ

ಚೆನ್ನೈ: ತಮಿಳುನಾಡಿನ ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ವಿಶ್ವಾಸಮತ ಯಾಚನೆ ವೇಳೆ, ಅವರ ಪರವಾಗಿ ಮತ ಚಲಾಯಿಸಿದ 25 ಶಾಸಕರನ್ನು ಎಡಿಎಂಕೆ ಪಕ್ಷದ ಎಲ್ಲಾ ಹುದ್ದೆಗಳಿಂದ ವಜಾಗೊಳಿಸಿದೆ ಎಂದು ಮುಖ್ಯಸ್ಥ ಕೆ.ಪಳನಿಸ್ವಾಮಿ ತಿಳಿಸಿದ್ದಾರೆ. ಈ ಶಾಸಕರನ್ನು ಪಕ್ಷದಿಂದಲೇ ಉಚ್ಚಾಟಿಸಬಹುದೆಂದು ಅಂದಾಜಿಸಲಾಗಿತ್ತು. ಅಂತಹ ಕಠಿಣ ಕ್ರಮ ತೆಗೆದುಕೊಂಡಿಲ್ಲ. ಎಡಿಎಂಕೆಯ 47 ಶಾಸಕರ ಪೈಕಿ 25 ಮಂದಿ ಸರ್ಕಾರದ ಪರ ಮತ ಚಲಾಯಿಸಿದ್ದರು.

ಇನ್ನು ಮದ್ಯ ಖರೀದಿಗೆ 21 ವರ್ಷ ಕಡ್ಡಾಯ

ವಿಜಯ್ ನೇತೃತ್ವದ ತಮಿಳುನಾಡು ಸರ್ಕಾರ ರಾಜ್ಯದಲ್ಲಿ ಮದ್ಯಪಾನದ ನಿಯಮಗಳನ್ನು ಕಠಿಣಗೊಳಿಸಿದೆ. ಇನ್ನು ಮುಂದೆ ಮದ್ಯ ಖರೀದಿ ಅಥವಾ ಮಾರಾಟ ಮಾಡಲು ಕನಿಷ್ಠ 21 ವರ್ಷ ನಿಗದಿಪಡಿಸಿ ಮಹತ್ವದ ಆದೇಶ ಹೊರಡಿಸಿದೆ. ಮುಖ್ಯಮಂತ್ರಿಯಾಗಿ ಕೆಲವೇ ದಿನಗಳಲ್ಲಿ ವಿಜಯ್ ಸರ್ಕಾರ ಈ ಕ್ರಮ ಜಾರಿಗೆ ತಂದಿದೆ.

ಒಮಾನ್ ಕೊಲ್ಲಿಯಲ್ಲಿ ಮುಳುಗಿದ ಭಾರತದ ಹಡಗು, 14 ಸಿಬ್ಬಂದಿ ರಕ್ಷಣೆ

ದೆಹಲಿ: ಒಮಾನ್ ಕರಾವಳಿ ಬಳಿ ಡ್ರೋನ್ ದಾಳಿಗೆ ತುತ್ತಾಗಿ ಗುಜರಾತ್ ಮೂಲದ 'ಹಾಜಿ ಅಲಿ' ಎಂಬ ಭಾರತೀಯ ಸರಕು ಹಡಗು ಮುಳುಗಡೆಯಾಗಿದೆ. ಹಡಗಿನಲ್ಲಿದ್ದ 14 ಭಾರತೀಯ ನಾವಿಕರನ್ನು ಒಮಾನ್ ಅಧಿಕಾರಿಗಳು ರಕ್ಷಿಸಿದ್ದಾರೆ. ಹಡಗು ಸಂಪೂರ್ಣವಾಗಿ ಮುಳುಗಡೆಯಾಗಿದೆ. ಹಡಗಿನಲ್ಲಿದ್ದ ಎಲ್ಲಾ 14 ಭಾರತೀಯ ನಾವಿಕರನ್ನು ಒಮಾನ್ ಅಧಿಕಾರಿಗಳು ಸುರಕ್ಷಿತವಾಗಿ ರಕ್ಷಿಸಿದ್ದಾರೆ. ಬುಧವಾರ ಮುಂಜಾನೆ 3:30ರ ಸುಮಾರಿಗೆ ಒಮಾನ್‌ನ ಉತ್ತರ ಕರಾವಳಿಯ ಲಿಮಾ ಎಂಬ ಪ್ರದೇಶದ ಬಳಿ ಈ ಘಟನೆ ನಡೆದಿದೆ. ಗುಜರಾತ್‌ನ ದೇವಭೂಮಿ ದ್ವಾರಕಾ ಜಿಲ್ಲೆಯ ಸಲಾಯಾ ಬಂದರಿನಲ್ಲಿ ಈ ಹಡಗು ನೋಂದಣಿಯಾಗಿತ್ತು. 'ಹಾಜಿ ಅಲಿ' ಹಡಗು ಸೊಮಾಲಿಯಾದಿಂದ ಜಾನುವಾರುಗಳನ್ನು ಹೊತ್ತು ಶಾರ್ಜಾಗೆ ಹೊರಟಿತ್ತು. ಪ್ರಯಾಣದ ಮಧ್ಯೆ, ಅಪರಿಚಿತ ಸ್ಫೋಟಕ ವಸ್ತುವೊಂದು ಹಡಗಿಗೆ ಅಪ್ಪಳಿಸಿದೆ. ಇದು ಡ್ರೋನ್ ಅಥವಾ ಮಿಸೈಲ್ ಇರಬಹುದು ಎಂದು ಶಂಕಿಸಲಾಗಿದೆ. ದಾಳಿಯ ನಂತರ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಹಡಗು ಸಂಪೂರ್ಣ

ಸೆ.30ರವರೆಗೆ ಸಕ್ಕರೆ ರಫ್ತಿಗೆ ಕೇಂದ್ರ ಸರಕಾರ ನಿಷೇಧ

ಭಾರತದಲ್ಲಿ ಸಕ್ಕರೆ ಕೊರತೆ ತಡೆಯಲು ಈ ಕ್ರಮ | ಅಮೆರಿಕ, ಯೂರೋಪ್‌ಗಳಿಗೆ ರಫ್ತು ಅಬಾಧಿತ

ದೆಹಲಿ: ದೇಶೀಯ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯನ್ನು ನಿಯಂತ್ರಿಸಲು ಮತ್ತು ದೇಶದೊಳಗೆ ಸಾಕಷ್ಟು ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರಕಾರ ಸಕ್ಕರೆ ರಫ್ತಿನ ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ಸೆಪ್ಟೆಂಬರ್ 30ರವರೆಗೆ ಸಂಪೂರ್ಣ ನಿಷೇಧ ಹೇರಿದೆ. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿ ಬರುವ ವಿದೇಶಿ ವ್ಯಾಪಾರ ನಿರ್ದೇಶನಾಲಯ ಈ ಆದೇಶ ಪ್ರಕಟಿಸಿದೆ. ಸಕ್ಕರೆ ರಫ್ತು ನೀತಿಯನ್ನು ಈ ಹಿಂದೆ ಇದ್ದ ನಿರ್ಬಂಧಿತ ವರ್ಗದಿಂದ ನಿಷೇಧಿತ ವರ್ಗಕ್ಕೆ ಬದಲಾಯಿಸಲಾಗಿದೆ.

ಈ ನಿಷೇಧವು ಕಚ್ಚಾ ಸಕ್ಕರೆ, ಬಿಳಿ ಸಕ್ಕರೆ, ಮತ್ತು ಸಂಸ್ಕರಿಸಿದ ಸಕ್ಕರೆ ಸೇರಿದಂತೆ ಎಲ್ಲಾ ರೀತಿಯ ಸಕ್ಕರೆ ರಫ್ತುಗಳಿಗೂ ಅನ್ವಯಿಸುತ್ತದೆ. ಈ ಕಠಿಣ ನಿಷೇಧದ ನಡುವೆಯೂ ಕೆಲವು ಪ್ರಮುಖ ವಿನಾಯಿತಿಗಳನ್ನು ನೀಡಲಾಗಿದೆ. ನಿಗದಿತ ನಿಯಮದಡಿ ಯುರೋಪಿಯನ್ ಒಕ್ಕೂಟ ಮತ್ತು ಅಮೆರಿಕ ದೇಶಗಳಿಗೆ ಮಾಡುವ ಸಕ್ಕರೆ ರಫ್ತುಗಳಿಗೆ ಈ ನಿಷೇಧ ಅನ್ವಯಿಸುವುದಿಲ್ಲ.

ಭಾರತ ಸರಕಾರದಿಂದ ವಿಶೇಷವಾಗಿ ಅನುಮೋದಿಸಲ್ಪಟ್ಟ ರಫ್ತು ಸರಕುಗಳು ಮತ್ತು ಈಗಾಗಲೇ ಸಾಗಣೆಯಲ್ಲಿರುವ ಆದೇಶಗಳಿಗೆ ವಿನಾಯಿತಿ ಇರಲಿದೆ. ಹವಾಮಾನ ವೈಪರೀತ್ಯ ಹಾಗೂ ಎಲ್ ನಿನೋ ಪ್ರಭಾವದಿಂದಾಗಿ ಕಬ್ಬಿನ ಉತ್ಪಾದನೆ ಕುಂಠಿತಗೊಳ್ಳುವ ಆತಂಕ ಎದುರಾಗಿದೆ. ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘವು ಪ್ರಸಕ್ತ ಹಂಗಾಮಿನ ಒಟ್ಟು ಸಕ್ಕರೆ ಉತ್ಪಾದನಾ ಅಂದಾಜನ್ನು 32 ಮಿಲಿಯನ್ ಟನ್‌ಗಳಿಗೆ ಇಳಿಸಿದೆ. ಉತ್ಪಾದನೆ ಕುಂಠಿತಗೊಂಡಿರುವ ಕಾರಣ ದೇಶೀಯ ಮಾರುಕಟ್ಟೆಯಲ್ಲಿ ಸಕ್ಕರೆ ಚಿಲ್ಲರೆ ದರ ಹೆಚ್ಚಾಗದಂತೆ ತಡೆಯಲು ಈ ನಿರ್ಧಾರ ಕೈಗೊಳ್ಳಲಾಗಿದೆ.

ಪರಿಣಾಮ ಏನು?: ಬ್ರೆಜಿಲ್ ಬಿಟ್ಟರೆ ಭಾರತವೇ ವಿಶ್ವದ ಅತಿ ದೊಡ್ಡ ಸಕ್ಕರೆ ಉತ್ಪಾದಕ ದೇಶವಾಗಿರುವುದರಿಂದ ಈ ನಿರ್ಧಾರವು ಜಾಗತಿಕ ಆಹಾರ ವಲಯದ ಮೇಲೆ ಗಂಭೀರ ಪರಿಣಾಮ ಬೀರಿದೆ. ಭಾರತದ ನಿಷೇಧ ಪ್ರಕಟವಾದ ಬೆನ್ನಲ್ಲೇ ನ್ಯೂಯಾರ್ಕ್ ಕಚ್ಚಾ ಸಕ್ಕರೆ ಮಾರುಕಟ್ಟೆ ಶೇ.2ಕ್ಕಿಂತ ಹೆಚ್ಚು ಮತ್ತು ಲಂಡನ್ ಬಿಳಿ ಸಕ್ಕರೆ ಮಾರುಕಟ್ಟೆ ಶೇ.3ರಷ್ಟು ದುಬಾರಿಯಾಗಿದೆ. ಸಕ್ಕರೆ ಬೆಲೆ ಏರಿಕೆಯಿಂದಾಗಿ ಸಿಹಿತಿಂಡಿ, ಸಾಫ್ಟ್ ಡ್ರಿಂಕ್ಸ್ ಮತ್ತು ಬೇಕರಿ ಉತ್ಪನ್ನಗಳ ಬೆಲೆ ಹೆಚ್ಚಾಗಲಿದೆ.

ಸಮಾಚಾರ ಸಣ್ಣದಲ್ಲ

ಡೇರಿ ಸಂಘಕ್ಕೆ ಸದಸ್ಯರಾಗಿ ನೇಮಕ

ಕೆ.ಆರ್.ನಗರ: ತಾಲೂಕಿನ ದೆಗ್ಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಸರಕಾರದ ನಾಮ ನಿರ್ದೇಶನ ಸದಸ್ಯರನ್ನಾಗಿದೆ ಎಚ್.ಕೆ.ಜ್ಯೋತಿ ಅವರನ್ನು ಶಾಸಕ ಡಿ.ರವಿಶಂಕರ್,ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಅವರುಗಳ ಶಿಫಾರಸ್ಸಿನ ಮೆರೆಗೆ ಸರಕಾರದ ಅಧೀನ ಕಾರ್ಯದರ್ಶಿ ಜಿ.ರಂಗನಾಥ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಹಲಸಿನ ಆಸೆಗಾಗಿ ಗ್ರಾಮದತ್ತ ಗಜಪಡೆ

ಚಾಮರಾಜನಗರ: ಮಲೆ ಮಹದೇಶ್ವರ ವನ್ಯಜೀವಿಧಾಮ ಹಾಗೂ ಕಾವೇರಿ ವನ್ಯಜೀವಿಧಾಮ ವ್ಯಾಪ್ತಿಯಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ. ಬಾಲಕನ ಬಲಿ ಪಡೆದ ಚಿರತೆ ಒಂದೆಡೆಯಾದರೇ ಹಲಸಿನ ಆಸೆಗೆ ಗ್ರಾಮಗಳತ್ತ ಬರುತ್ತಿರುವ ಕಾಡಾನೆಗಳ ಭೀತಿ ಮತ್ತೊಂದೆಡೆಯಾಗಿದೆ. ಮಲೆ ಮಹದೇಶ್ವರ ಬೆಟ್ಟ ಗ್ರಾಪಂ ವ್ಯಾಪ್ತಿಯ ಇಂಡಿಗನತ್ತ ಸುತ್ತಮುತ್ತಲು ಚಿರತೆ ಸೆರೆಗೆ ಕಾರ್ಯಾಚರಣೆ ಮುಂದುವರೆದಿದ್ದರೇ ಹಲಸು ಮತ್ತು ಮಾವಿನ ಆಸೆಗೆ ಇಂಡಿಗನತ್ತ ಗ್ರಾಮಕ್ಕೆ ಕಾಡಾನೆಗಳು ಲಗ್ಗೆ ಇಡುತ್ತಿವೆ. ಇಂಡಿಗನತ್ತವು ಅರಣ್ಯ ಪ್ರದೇಶದೊಳಗಿನ ಗ್ರಾಮವಾಗಿದ್ದು ಚಿರತೆ ಆತಂಕ ಒಂದೆಡೆಯಾದರೇ ಕಾಡಾನೆ ಭೀತಿ ಮತ್ತೊಂದೆಡೆಯಾಗಿದೆ. ಬಾಲಕ ಮೃತಪಟ್ಟ ಬಳಿಕ ಅಲ್ಲಿನ ಗ್ರಾಮದ ಜನರು ಮನೆಯಿಂದ ಹೊರಬರಲಾರದಷ್ಟು ಭಯಭೀತರಾಗಿದ್ದಾರೆ. ಇದರೊಟ್ಟಿಗೆ ಕಳೆದ ಎರಡು ದಿನಗಳಿಂದ ಗ್ರಾಮದಲ್ಲಿ ಕಾಡಾನೆ ಹಾವಳಿಯೂ ಹೆಚ್ಚಾಗಿದೆ. ಗ್ರಾಮದ ಸಿದ್ದರಾಜು ಎಂಬವರ ಮನೆ ಬಳಿ ಇರುವ ಹಲಸಿನ ಮರದಲ್ಲಿ ಹಣ್ಣುಗಳನ್ನು ತಿನ್ನಲು ಇಡೀ ರಾತ್ರಿ ಆನೆ ಬೀಡುಬಿಟ್ಟಿದ್ದರಿಂದ ಗ್ರಾಮಸ್ಥರು ಮತ್ತಷ್ಟು ಚಿಂತೆಗೀಡಾಗಿದ್ದಾರೆ.

ಲೋಕಾ ಅಧಿಕಾರಿಗಳಿಂದ ಅಹವಾಲು ಸ್ವೀಕಾರ

ಮದ್ದೂರು: ನಗರದ ತಾಲೂಕು ಕಚೇರಿಯ ನ್ಯಾಯಾಂಗ ಸಭಾಂಗಣದಲ್ಲಿ ಬುಧವಾರ ಲೋಕಾಯುಕ್ತ ಸಂಸ್ಥೆಯ ಅಧಿಕಾರಿಗಳು ಸಾರ್ವಜನಿಕರಿಂದ ಅಹವಾಲು ಮತ್ತು ದೂರು ಸ್ವೀಕಾರ ಸೇರಿದಂತೆ ಕುಂದು ಕೊರತೆ ಸಭೆ ನಡೆಸಿ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆದರು. ನಗರದ ತಾಲೂಕು ಕಚೇರಿಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಸಾರ್ವಜನಿಕರಿಂದ ಲೋಕಾಯುಕ್ತ ಸಂಸ್ಥೆಯ ಪೋಲೀಸ್ ವರಿಷ್ಠಾಧಿಕಾರಿ ಸುರೇಶ್ಬಾಬು ಅಹವಾಲು ಸ್ವೀಕರಿಸಿ ಅಗತ್ಯ ಮಾಹಿತಿ ಪಡೆದು ಸಾರ್ವಜನಿಕರಿಂದ ಬಂದ ಕೆಲ ಅರ್ಜಿಗಳ ಸಂಬಂಧ ಚರ್ಚಿಸಿ ಕೂಡಲೇ ಪರಿಹಾರ ಒದಗಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ ಕಾಲಮಿತಿಯಲ್ಲಿ ಅರ್ಜಿ ವಿಲೇವಾರಿಗೆ ಕ್ರಮ ವಹಿಸದಿದ್ದಲ್ಲಿ ಕಾನೂನು ರೀತಿಯ ಕ್ರಮ ವಹಿಸುವ ಎಚ್ಚರಿಕೆ ನೀಡಿದರು. ಲೋಕಾಯುಕ್ತ ಪೋಲೀಸ್ ವರಿಷ್ಠಾಧಿಕಾರಿ ಸುರೇಶ್ಬಾಬು ಮಾತನಾಡಿ ಜಿಲ್ಲೆಯ ಮದ್ದೂರು ತಾಲೂಕಿನಲ್ಲೇ ಅತಿಹೆಚ್ಚು ಪ್ರಕರಣಗಳು ಕಂಡುಬರುತ್ತಿದ್ದು ಕರ್ತವ್ಯ ನಿರತ ಅಧಿಕಾರಿಗಳು ಸಮರ್ಪಕವಾಗಿ ಮತ್ತು ಸಕಾಲದಲ್ಲಿ ಕರ್ತವ್ಯ ನಿರ್ವಹಿಸದ ಪರಿಣಾಮವಾಗಿ ಸಾಕಷ್ಟು ಅರ್ಜಿಗಳು ಲೋಕಾಯುಕ್ತ ಸಂಸ್ಥೆಗೆ ದಾಖಲಾಗುತ್ತಿದ್ದು ಸಂಬಂಧಿಸಿದ ಅಧಿಕಾರಿಗಳು ಕಾಲಮಿತಿಯಲ್ಲಿ ಸಾರ್ವಜನಿಕರ ಅರ್ಜಿ ವಿಲೇವಾರಿಗೆ ಕ್ರಮ ವಹಿಸಬೇಕೆಂದು ಸೂಚಿಸಿದರು. ರೈತರು ಸಾರ್ವಜನಿಕರಿಂದ ಅಧಿಕಾರಿಗಳು ಲಂಚಕ್ಕೆ ಬೇಡಿಕೆಯಿಟ್ಟಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ನಿರ್ಧಾಕ್ಷಿಣ ಕ್ರಮ ಜರುಗಿಸುವ ಜತೆಗೆ ಕಾನೂನು ರೀತಿಯ ಪ್ರಕರಣ ದಾಖಲು ಮಾಡುವುದಾಗಿ ಮತ್ತು ರೈತರೊಂದಿಗೆ ಸೌಜನ್ಯದಿಂದ ವರ್ತಿಸಿ ಸರಕಾರದ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕೆಂದರು.

ಅಭಿವೃದ್ಧಿಗೆ ಜಿಬಿಐಟಿ ಯೋಜನೆ ಸಹಕಾರಿ

ರಾಮನಗರ: ಜಿಬಿಡಿಎ ಸ್ಮಾರ್ಟ್ ಸಿಟಿ ಯೋಜನೆ ವಿರುದ್ಧ ಅಪಪ್ರಚಾರ ನಡೆಸಿ ಗೊಂದಲ ಸೃಷ್ಟಿಸುತ್ತಿದ್ದು, ನಮ್ಮ ಗ್ರಾಮಗಳು ಅಭಿವೃದ್ಧಿ ಹೊಂದಲು ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆ ಸಹಕಾರಿಯಾಗಿದೆ. ಈ ಕೂಡಲೇ ಇಂಟಿಗ್ರೇಟೆಡ್ ಸ್ಮಾರ್ಟ್ ಸಿಟಿ ಯೋಜನೆ ತುರ್ತಾಗಿ ಕೈಗೊಳ್ಳಬೇಕು ಎಂದು ಯೋಜನೆ ಪರವಿರುವ ರೈತರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿ ಗಳ ಕಚೇರಿಗೆ ಆಗಮಿಸಿದ ಭೈರಮಂಗಲ ಮತ್ತು ಕಂಚುಗಾರನಹಳ್ಳಿ, ಪಂಚಾಯಿತಿಯ ವ್ಯಾಪ್ತಿಯಲ್ಲಿ 9 ಗ್ರಾಮಗಳ ರೈತರ ನಿಯೋಗ, ಕಳೆದ ಎರಡು ದಶಕದಿಂದ ನಮ್ಮ ಗ್ರಾಮ, ಭೂಮಿಗಳು ಅಭಿವೃದ್ಧಿ ಕಾಣದೆ ಅತಂತ್ರವಾಗಿವೆ. ಇಂತಹ ಪರಿಸ್ಥಿತಿ ಇನ್ನೂ ಮುಂದುವರೆಯುವುದು ಬೇಡ. ಬಿಜಿಡಿಎ ಅನುಷ್ಠಾನಕ್ಕೆ ತರುತ್ತಿರುವ ಗ್ರೇಟರ್‌ಬೆಂಗಳೂರು ಸಮಗ್ರ ಉಪ ನಗರದ ನಿರ್ಮಾಣದ ಭೂಸ್ವಾಧೀನ ಪ್ರಕ್ರಿಯೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕು. ಪರಿಹಾರ ಮತ್ತು ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಬೇಕು ಎಂದು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

{ ಎಚ್.ಡಿ.ಕುಮಾರಸ್ವಾಮಿ } ಕೇಂದ್ರ ಸಚಿವ

ಸುಪ್ರೀಂ ಕೋರ್ಟ್‌ನಲ್ಲಿ ಹಿಜಬ್ ಕೇಸ್ ಇದೆ. ಆ ಕೇಸ್‌ಗ ಕಾಯದೇ ಇವರು ಹೇಗೆ ಹೊಸ ಆದೇಶ ಮಾಡಿದ್ರು. ವಿದ್ಯಾರ್ಥಿಗಳ ಹಿತಕ್ಕಾಗಿ ಅಂತಾರೆ. ಹಾಗಾದರೆ 3 ವರ್ಷ ಆಯ್ತು ಸರಕಾರ ಬಂದು ಇಷ್ಟು ದಿನ ಏನ್ ಮಾಡ್ತಾ ಇದ್ರು? ದಾವಣಗೆರೆ ಎಫೆಕ್ಟ್ ಇದಾ? ಅದಕ್ಕೆ ಹೆದರಿಕೊಂಡು ಈಗ ಮಾಡಿದ್ದಾರೆ.

ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಕುರಿತಂತೆ ಸೆಸ್ಕ್ ಅಧಿಕಾರಿಗಳಿಂದ ಸಂಪೂರ್ಣ ವಿವರ ಪಡೆದ ಸಿದ್ದರಾಮಯ್ಯ

ಯೋಜನೆ ಪ್ರಗತಿ ಪರಿಶೀಲಿಸಿದ ಸಿಎಂ

ವಿಶ್ವವಾಣಿ ಸುದ್ದಿಮನೆ ಮೈಸೂರು

ಖಾಸಗಿ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ವಿವಿಧ ಯೋಜನೆಗಳ ಪ್ರಗತಿ ಕಾರ್ಯಗಳ ಪರಿಶೀಲನೆ ಮಾಡಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಪ್ರಾದೇಶಿಕ ಆಯುಕ್ತರು ಹಾಗೂ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾದ ನಿತೀಶ್ ಪಾಟೀಲ್, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್‌ಆಸೀಫ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್‌ಸೇರಿದಂತೆ ಇತರರಿದ್ದರು.

ಭೂಗತ ಕೇಬಲ್ ಕಾಮಗಾರಿ:

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದಿಂದ ಮೈಸೂರು ನಗರ ವ್ಯಾಪ್ತಿಯಲ್ಲಿ (ರಿಂಗ್ ರೋಡ್ ಒಳ ಭಾಗದಲ್ಲಿ) ಹಾಲಿ ಇರುವ 11 ಕೆ.ವಿ. ಓವರ್ ಹೆಡ್ ವಿದ್ಯುತ್ ಮಾರ್ಗಗಳನ್ನು ಭೂಗತ ಕೇಬಲ್ಗೆ ಬದಲಾಯಿಸುವ ಕಾಮಗಾರಿಯನ್ನು ಪರಿಶೀಲಿಸಿದರು.

ಮೈಸೂರಿನ ಶ್ರೀರಾಂಪುರದಲ್ಲಿ 11 ಕೆ.ವಿ. ಓವರ್ ಹೆಡ್ ವಿದ್ಯುತ್ ಮಾರ್ಗಗಳನ್ನು ಭೂಗತ ಕೇಬಲ್ಗೆ ಬದಲಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸೆಸ್ಕ್ ಅಧಿಕಾರಿಗಳಿಂದ ಕಾಮಗಾರಿಯ ಸಂಪೂರ್ಣ ವಿವರಗಳನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ಸೆಸ್ಕ್ನ ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್‌ಸುನೀಲ್ ಕುಮಾರ್ ಅವರು, ಮೈಸೂರು ನಗರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಭೂಗತ ಕೇಬಲ್ ಅಳವಡಿಸುವ ಕಾಮಗಾರಿಯ ಪ್ರಗತಿ ಕುರಿತಂತೆ ಮಾಹಿತಿ ನೀಡಿದರು.

ಮೈಸೂರು ನಗರ ವ್ಯಾಪ್ತಿಯಲ್ಲಿ(ರಿಂಗ್ ರೋಡ್ ಒಳ ಭಾಗದಲ್ಲಿ) ಒಟ್ಟು 588.24 ಕೋಟಿ ರು. ವೆಚ್ಚದಲ್ಲಿ ಸದರಿ ಕಾಮಗಾರಿ ಕೈಗೊಳ್ಳಲಾಗಿದ್ದು, 871.09 ಕಿ.ಮೀ ವ್ಯಾಪ್ತಿಯಲ್ಲಿನ 11 ಕೆ.ವಿ. ಓವರ್‌ಹೆಡ್ ವಿದ್ಯುತ್ ಮಾರ್ಗಗಳನ್ನು ಭೂಗತ ಕೇಬಲ್ಗೆ ಬದಲಾಯಿಸುವ ಕೆಲಸ ನಡೆಸಲಾಗುತ್ತಿದೆ. ಇದಕ್ಕಾಗಿ 474 ಆರ್.ಎಂ.ಯು ಮತ್ತು 11 ಸಿ.ಎಸ್.ಎಸ್. ಅಳವಡಿಸಲು ಉದ್ದೇಶಿಸಲಾಗಿದ್ದು, ಕಾಮಗಾರಿಯನ್ನು 4 ವಿವಿಧ ಗುತ್ತಿಗೆದಾರರಿಗೆ ವಹಿಸಲಾಗಿದೆ. ಪ್ರಸ್ತುತ 227.12 ಕಿ.ಮೀ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ಮುಗಿದಿದ್ದು, 160 ಆರ್‌ಎಂಯು ಅಳವಡಿಸುವ ಮೂಲಕ ಶೇ. 26.07 ಪ್ರಗತಿ ಸಾಧಿಸಲಾಗಿದೆ. ಕಾಮಗಾರಿ ಮುಗಿಸಲು 2 ವರ್ಷ ಅವಧಿ ನಿಗದಿಪಡಿಸಿದ್ದು, ನಿಗದಿತ ವೇಳೆಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಖಾಸಗಿ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ವಿವಿಧ ಯೋಜನೆಗಳ ಪ್ರಗತಿ ಕಾರ್ಯಗಳ ಪರಿಶೀಲನೆ ನಡೆಸಿದರು.

ಹಾಸ್ಟೆಲ್ ಸೌಲಭ್ಯಕ್ಕಾಗಿ ಯೋಜನೆ ಆರಂಭ

ಮಹಾರಾಣಿ ಕಾಲೇಜು ಮತ್ತು ಹಾಸ್ಟೆಲ್ ಸೌಲಭ್ಯಗಳಿಗಾಗಿ 170 ಕೋಟಿ. ರು.ಗಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿದ್ದು, ಸಿಎಂ ಸಿದ್ದರಾಮಯ್ಯ ಗುರುವಾರ ಪರಿಶೀಲನೆ ನಡೆಸಿದರು.

ನೂತನ ಬಸ್ ನಿಲ್ದಾಣ ಕಾಮಗಾರಿ:

129 ಕೋಟಿ ರು. ವೆಚ್ಚದ ಮೈಸೂರು ನಗರದ ಬನ್ನಿಮಂಟಪದಲ್ಲಿನ ನೂತನ ಬಸ್ ನಿಲ್ದಾಣದ ಕಾಮಗಾರಿಯನ್ನು ಸಿಎಂ ಪರಿಶೀಲಿಸಿದರು.

ಬಸ್ ನಿಲ್ದಾಣದ ನೆಲಮಾಳಿಗೆ (10,538 ಚ.ಮೀ): ಇಲ್ಲಿ ಕೇವಲ ವಾಹನ ನಿಲುಗಡೆಗೆ ಆದ್ಯತೆ ನೀಡಲಾಗಿದ್ದು, ಏಕಕಾಲಕ್ಕೆ 4,000 ದ್ವಿಚಕ್ರ ವಾಹನಗಳು ಮತ್ತು 200 ಕಾರುಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ನೆಲಮಹಡಿ (18,370 ಚ.ಮೀ): ಇದು ಬಸ್ ಟರ್ಮಿನಲ್ ಪ್ರಮುಖ ಭಾಗವಾಗಿದ್ದು, ಪ್ರಯಾಣಿಕರ ಆಗಮನ ಮತ್ತು ನಿರ್ಗಮನ ದ್ವಾರಗಳು, ಟಿಕೆಟ್ ಬುಕ್ಕಿಂಗ್ ಕೌಂಟರ್‌ಹಾಗೂ ಸುಂದರವಾದ ಗಾರ್ಡನ್ ಮತ್ತು ಲ್ಯಾಂಡ್‌ಸ್ಕೇಪಿಂಗ್ ವ್ಯವಸ್ಥೆ ಇರಲಿದೆ.

ಮೊದಲನೇ ಮಹಡಿ (8,478 ಚ.ಮೀ): ಈ ಭಾಗವು ಸಂಪೂರ್ಣವಾಗಿ ಸಿಬ್ಬಂದಿ ವಿಶ್ರಾಂತಿ ಕೊಠಡಿಗಳು, ಡಾರ್ಮಿಟರಿ ಮತ್ತು ಕಚೇರಿಗಳಿಗಾಗಿ ಮೀಸಲಿರಿಸಲಾಗಿದೆ.

ಒಟ್ಟು 75 ಬಸ್ ಅಂಕಣಗಳು ಲಭ್ಯವಿದ್ದು, 35 ಬಸ್ಗಳ ನಿಲುಗಡೆಗೆ ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಲಾಗಿದೆ. ಮಹಿಳೆಯರಿಗಾಗಿ ಪ್ರತ್ಯೇಕ ವಿಶ್ರಾಂತಿ ಗೃಹ ಮತ್ತು ಸಾಮಾನ್ಯ ಪ್ರಯಾಣಿಕರಿಗಾಗಿ ವಿಶಾಲವಾದ ಆಸನ ವ್ಯವಸ್ಥೆ ಇರಲಿದೆ.

ಮಹಿಳೆಯರು ಮತ್ತು ಪುರುಷರಿಗಾಗಿ ತಲಾ 6 ಬ್ಲಾಕ್ಗಳನ್ನು ಶೌಚಾಲಯಗಳಲ್ಲದೆ, ವಿಕಲಚೇತನರು ಮತ್ತು ತೃತೀಯ ಲಿಂಗಿಗಳಿಗಾಗಿ ಪ್ರತ್ಯೇಕ ಶೌಚಾಲಯಗಳ ವ್ಯವಸ್ಥೆ ಮಾಡಲಾಗಿದೆ. ಸುಲಭ ಓಡಾಟಕ್ಕಾಗಿ 4 ಲಿಫ್ಟ್‌ಗಳು ಮತ್ತು 2 ಎಲಿವೇಟರ್‌ಗಳು, ಜ್ಞಾನದಾಹಿಗಳಿಗಾಗಿ ಗ್ರಂಥಾಲಯ, ಉಪಹಾರ ಗೃಹ ಮತ್ತು ನಿರಂತರ ಮಾಹಿತಿ ನೀಡಲು ವಿಚಾರಣಾ ಕೇಂದ್ರಗಳು ಕಾರ್ಯನಿರ್ವಹಿಸಲಿವೆ.

ನಿಲ್ದಾಣದ ಒಳಭಾಗದಲ್ಲಿ ಪ್ರಯಾಣಿಕರಿಗೆ ಬಿಸಿಲು ಮತ್ತು ಮಳೆಯಿಂದ ರಕ್ಷಣೆ ನೀಡಲು ಮೇಲ್ಭಾಗದಲ್ಲಿ ಮುಚ್ಚಳ ಹೊದಿಕೆ ವ್ಯವಸ್ಥೆ ಮಾಡಲಾಗುತ್ತಿದೆ. ನಿಲ್ದಾಣದ ಸಂಪೂರ್ಣ ನಿರ್ವಹಣೆಗಾಗಿ ನಿಲ್ದಾಣಾಧಿಕಾರಿಗಳ ಕೊಠಡಿ ಮತ್ತು ಪ್ರತ್ಯೇಕ ಕಚೇರಿಗೆ ಸ್ಥಳ ನಿಗದಿಪಡಿಸಲಾಗಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ವೈಟ್ ಟಾಪಿಂಗ್ ರಸ್ತೆ ಪರಿಶೀಲನೆ:

ಮೈಸೂರು ನಗರದಲ್ಲಿ 12 ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿ ಮಂಜೂರಾಗಿದ್ದು, ಮಾನಂದವಾಡಿ ರಸ್ತೆ ಎನ್. ಐ ಕಾಲೇಜು ಬಳಿ ಕಾಮಗಾರಿ ಪ್ರಗತಿಯಲ್ಲಿದ್ದು, ಸಿಎಂ ಸಿದ್ದರಾಮಯ್ಯ ಪರಿಶೀಲನೆ ನಡೆಸಿದರು.

ಧರ್ಮಸ್ಥಳ ಸಂಸ್ಥೆಯಿಂದ ಮಹಿಳೆಯರಿಗೆ ಅನುಕೂಲ

ಕೆ.ಆರ್.ನಗರ: ಕಾಂಗ್ರೆಸ್ ಸರಕಾರ ಶ್ರೀ ಶಕ್ತಿ ಮಹಿಳಾ ಸ್ವ-ಸಹಾಯ ಸಂಘಗಳನ್ನು ಆರಂಭಿಸಿ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಅನುಕೂಲ ಮಾಡಿತ್ತು, ಅದೇ ಮಾದರಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯ ನಿರ್ವಹಿಸುತ್ತಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಕಛೇರಿ ಪಟ್ಟಣದ ಸಿ.ಎಂ.ರಸ್ತೆಯಿಂದ ಶ್ರೀರಾಮ ಬಡಾವಣೆಗೆ ಸ್ಥಳಾಂತರಗೊಂಡಿದ್ದು ನೂತನ ಆಡಳಿತ ಕಛೇರಿಯನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

ಮಹಿಳಾ ಸಂಘಗಳು ಅಸ್ತಿತ್ವಕ್ಕೆ ಬಂದ ನಂತರ ಮಹಿಳೆಯರು ಬ್ಯಾಂಕ್ಗಳಲ್ಲಿ ಖಾತೆಗಳನ್ನು ತೆರೆಯಲು ಆರಂಭಿಸಿದ್ದಾರೆ. ಎಸ್.ಎಂ.ಕೃಷ್ಣ ಸರಕಾರ ಸ್ವ-ಸಹಾಯ ಸಂಘಗಳ ಮಾಡುವ ಮೊದಲು ಬ್ಯಾಂಕ್ಗಳಲ್ಲಿ ಖಾತೆಯನ್ನು ಹೊಂದಿರಲಿಲ್ಲ, ಎಂದು ಹೇಳಿದ ದೊಡ್ಡಸ್ವಾಮೇಗೌಡ ಈಗ ಮಹಿಳೆಯರು ಬ್ಯಾಂಕ್ಗಳಲ್ಲಿ ಆರ್ಥಿಕ ವ್ಯವಹಾರ ಮಾಡುತ್ತಿದ್ದಾರೆ ಎಂದರು.

ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಹಿಳೆಯರಿಗೆ ಸಾಲ ಸೌಲಭ್ಯ ನೀಡಿ ಅವರುಗಳು ಆರ್ಥಿಕ ಚಟುವಟಿಕೆ ನಡೆಸಲು ಕಾರಣ ಆಗಿರುವ ಸಂಸ್ಥೆಯು ಗ್ರಾಮೀಣಾ ಭಾಗದಲ್ಲಿ ಕೆರೆ-ಕಟ್ಟೆಗಳನ್ನು ಪುನಶ್ಚೇತನ ಮಾಡಿ ಹಳ್ಳಿಗಾಡಿನ ಜನ-ಜಾನುವಾರುಗಳಿಗೆ ನೀರಿನ ಸೌಲಭ್ಯ ಒದಗಿಸುವ ಕೆಲಸ ಮಾಡಿರುವುದು ಎಲ್ಲರೂ ಮೆಚ್ಚುವಂತಹ ಕಾರ್ಯಕ್ರಮವಾಗಿದೆ ಎಂದರು.

ಲಾಳಂನಹಳ್ಳಿ ಗುರುಮಲ್ಲೇಶ್ವರ ದಾಸೋಹ ಮಠದ ಶರಣೆ ಜಯದೇವಿತಾಯಿ, ಮೈಸೂರು ವಿಭಾಗದ ಯೋಜನಾ ನಿರ್ದೇಶಕ ಯೋಗೇಶ್, ಎಂಐಎಸ್ ಯೋಜನಾಧಿಕಾರಿ ಸತೀಶ್, ತಾಲೂಕು ಯೋಜನಾಧಿಕಾರಿ ಸದಾನಂದ ದೇವಾಡಿಗ ಮಾತನಾಡಿದರು.

ಉದ್ಘಾಟನಾ ಸಮಾರಂಭ ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್ ಪಾಲ್ಗೊಂಡು ಶುಭಕೋರಿದರು, ಮದ್ಯವರ್ಜನಾ ಶಿಬಿರದ ಕಾರ್ಯಕರ್ತರಾದ ಸಂಪತ್ಕುಮಾರ್ ,ಮಹದೇವ್, ಯೋಜನಾ ಕಛೇರಿಯ ಸಿಬ್ಬಂದಿಗಳಾದ ಮಹದೇವಸ್ವಾಮಿ, ರಜಿತ್, ಜಗದಾಂಭ, , ಪ್ರಿಯಾಂಕ, ರಾಜೇಶ್ ಮತ್ತಿತರರು ಇದ್ದರು.

ಕೆ.ಆರ್.ನಗರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ಥಳಾಂತರಗೊಂಡ ಯೋಜನಾ ಕಚೇರಿಯನ್ನು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಉದ್ಘಾಟಿಸಿದರು.

ಆನೆಮಡುವಿನ ಕೆರೆಗೆ ನೀರು ತುಂಬಿಸಲು ಆಗ್ರಹ

ಚಾಮರಾಜನಗರ: ತಾಲೂಕಿನ ಉಡಿಗಾಲ ಆನೆಮಡುವಿನ ಕೆರೆಗೆ ಚಿಕ್ಕಮೋರಿ ಕಾಲುವೆ ಮುಖಾಂತರ ಎರಡನೇ ಹಂತದಲ್ಲಿ ನೀರು ತುಂಬಿಸುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ಉಡಿಗಾಲ ರೈತರು, ಗ್ರಾಮಸ್ಥರು ಗ್ರಾಮದ ಚಿಕ್ಕಮೋರಿ ಕಾಲುವೆ ಸಮೀಪದಲ್ಲಿ ಪ್ರತಿಭಟನೆ ನಡೆಸಿದರು.

ಕೆಲಹೊತ್ತು ಚಾಮರಾಜನಗರ-ಗುಂಡ್ಲುಪೇಟೆ ರಸ್ತೆತಡೆ ನಡೆಸಿದರು. ವಾಹನ ಸಂಚಾರ ಅಸ್ತವ್ಯಸ್ತವಾಯಿತು. ಅಧಿಕಾರಿಗಳು, ಇಂಜಿನಿಯರ್‌ಗಳ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಆಗಮಿಸಿದ ಎಇಇ ಮಹೇಶ್ ಅವರನ್ನು ಕೆರೆ ನೀರು ತುಂಬಿಸುವಂತೆ ಪ್ರತಿಭಟನಾಕಾರರು ಪಟ್ಟು ಹಿಡಿದಾಗ ಕೆರೆ ನೀರು ತುಂಬಿಸುವ ಅಧಿಕಾರ ನನಗಿಲ್ಲ ಎಂದು ಹೇಳಿದಾಗ

ಪ್ರತಿಭಟನಾಕಾರರು ನಿಮಗೆ ಅಧಿಕಾರಿ ಇಲ್ಲವೆಂದ ಮೇಲೆ ನೀವ್ಯಾಕೆ ಬಂದಿದ್ದೀರಿ. ಇಇ ಕರೆಸುವಂತೆ ತರಾಟೆಗೆ ತೆಗೆದುಕೊಂಡರು. ಎಇಇ ಮಹೇಶ್ ನಿರಂತರವಾಗಿ ಇಇ ಪೋನ್ ಮಾಡಿದರು ಇಇ ಕರೆ ಸ್ವೀಕರಿಸದಿರುವುದನ್ನು ಗಮನಿಸಿದ ರೈತರು ಇಂಜಿನಿಯರ್‌ವಿರುದ್ಧ ಘೋಷಣೆ ಕೂಗಿ ಕೆರೆಗೆ ನೀರು ತುಂಬಿ ಇಲ್ಲವೇ ವಿಷಕೊಡಿ ಎಂದು ಒತ್ತಾಯಿಸಿ ಪಟ್ಟು ಹಿಡಿದಾಗ ಡಿವೈಎಸ್ ಪಿ ಸ್ನೇಹರಾಜು ಪ್ರತಿಭಟನಾಕಾರರನ್ನು ಸಮಾಧಾನ ಪಡಿಸಲು ಮುಂದಾದಾಗ ಮೇಡ ನೀನು ಕೆರೆ ನೀರು ತುಂಬಿಸುವ ಜವಾಬ್ದಾರಿ ತೆಗೆದುಕೊಳ್ಳಿ ನಾವು ಪ್ರತಿಭಟನೆ ಕೈ ಬಿಡುವುದಾಗಿ ಪ್ರತಿಭಟನಾಕಾರರು ಹೇಳಿದರು. ಆವಾಗ ಇಂಜಿನಿಯರ್‌ಗೆ ಒಂದು ತೀರ್ಮಾನ ತೆಗೆದುಕೊಳ್ಳಿ ಎಂದು ಸುಮ್ಮನಾದರು. ಕೆರೆಗೆ ನೀರು ಬಿಡುವುದಾಗಿ ಎಇಇ ಮಹೇಶ್ ಒಪ್ಪಿಕೊಂಡ ಮೇಲೆ ಪ್ರತಿಭಟನೆ ಕೈ ಬಿಡಲಾಯಿತು. ರೈತ ಗುರುಪ್ರಸಾದ್ ಮಾತನಾಡಿ, ಆನೆಮಡುವಿನ ಕೆರೆಗೆ ನೀರು ತುಂಬಿಸುವಂತೆ ಮನವಿ ನೀಡಿದರು ಯಾವುದೇ ಪ್ರಯೋಜನವಾಗಿಲ್ಲ .ಕೆರೆ ನೀರು ತುಂಬಿಸುವಲ್ಲಿ ಅಧಿಕಾರಿಗಳು ಸಂಪೂರ್ಣವಾಗಿ ವಿಫಲವಾಗಿದ್ದಾರೆ. ಕೆರೆ ನೀರು ತುಂಬಿ ಇಲ್ಲವೇ ವಿಷಕೊಡಿಸಿ ಇಂಜಿನಿಯರ್ ,ಪೋಲಿಸರನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಗುರುಪ್ರಸಾದ್, ರಘು, ಗುರು, ಸೂರ್ಯ,ರಾಜು, ಕುಮಾರ್,ಅಭಿ, ರೇವಣ್ಣ, ಮಹೇಶ್, ಮಾದೇಶ್, ಮಲ್ಲಿಕ್, ಉಡಿಗಾಲ,ವೀರನಪುರ ಹಾಗೂ ಸುತ್ತ ಮುತ್ತಲಿನ ರೈತರು, ಗ್ರಾಮಸ್ಥರು, ಭಾಗವಹಿಸಿದ್ದರು.



ಚಾಮರಾಜನಗರ ತಾಲೂಕಿನ ಉಡಿಗಾಲ ಆನೆಮಡುವಿನ ಕೆರೆಗೆ ನೀರು ತುಂಬಿಸುವಂತೆ ಒತ್ತಾಯಿಸಿ ಗ್ರಾಮಸ್ಥರು ಗ್ರಾಮದ ಚಿಕ್ಕಮೋರಿ ಕಾಲುವೆ ಸಮೀಪದಲ್ಲಿ ಪ್ರತಿಭಟನೆ ನಡೆಸಿದರು.

ಟ್ರಸ್ಟ್‌ನ ಸಾಮಾಜಿಕ ಕಾರ್ಯ ಶ್ಲಾಘನೀಯ: ಶ್ರೀಗಳು

ಕೆ.ಆರ್.ಪೇಟೆ: ಮೇ 20ರಂದು ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಹುಟ್ಟುಹಬ್ಬದ ಅಂಗವಾಗಿ ಶ್ರೀ ಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ, ಉಚಿತ ಆರೋಗ್ಯ ಶಿಬಿರ, ರಕ್ತದಾನ ಶಿಬಿರ, ರಾಜ್ಯ ಮಟ್ಟದ ರಂಗ ಕುಣಿತ ಸ್ಪರ್ಧೆ, ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ಖ್ಯಾತ ಹಾಸ್ಯ ಕಲಾವಿದರಿಂದ ನಗೆ ಹಬ್ಬ,ಮುಂತಾದ ಕಾರ್ಯಕ್ರಮಗಳು ನಡೆಯುವ ವೇದಿಕೆ ನಿರ್ಮಾಣ ಕಾರ್ಯಕ್ಕೆ ಕಾಪನಹಳ್ಳಿ ಗವಿಮಠದ ಪೀಠಾಧ್ಯಕ್ಷ ಶ್ರೀ ಚನ್ನವೀರ ಮಹಾಸ್ವಾಮಿ ಹಾಗೂ ತೆಂಡೆಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಭೂಮಿ ಪೂಜೆಯನ್ನು ವೇದ ಮಂತ್ರಗಳಿಂದ ಅರ್ಥಪೂರ್ಣವಾಗಿ ನೆರವೇರಿತು.

ಭೂಮಿ ಪೂಜೆ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ತೆಂಡೆಕೆರೆ ಬಾಳೆಹೊನ್ನೂರು ಶಾಖಾಮಠದ ಪೀಠಾಧ್ಯಕ್ಷ ಶ್ರೀ ಗಂಗಾಧರ ಶಿವಾಚಾರ್ಯ ಆಧುನಿಕ ಜಗತ್ತಿನಲ್ಲಿ ಹುಟ್ಟು ಹಬ್ಬದ ನೆಪೋಡ್ಡಿ ಮೋಜು ಮಸ್ತಿ ಮಾಡುವ ಕೆಲ ಜನರ ಮಧ್ಯೆ, ತಾನು ಹುಟ್ಟಿರುವುದೇ ಸಮಾಜ ಸೇವೆಗಾಗಿ ಎಂಬ ನಿಟ್ಟಿನಲ್ಲಿ ಕಳೆದ ಐದು ವರ್ಷಗಳಿಂದ ನಿರಂತರ ಸಮಾಜ ಸೇವೆ ಸಲ್ಲಿಸುವುದರ ಜೊತೆಗೆ ತನ್ನ ಹುಟ್ಟಿದ ದಿನವೂ ಕೂಡ ಪ್ರತಿಭಾವಂತರಿಗೆ, ಸಾಧಕರಿಗೆ, ದೀನದಲಿತರಿಗೆ, ರೋಗಿಗಳಿಗೆ ಸೇರಿದಂತೆ ಅನೇಕ ಬಡ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮೇ 20ರಂದು ತನ್ನ ಹುಟ್ಟುಹಬ್ಬವನ್ನ ಸಮರ್ಪಣೆ ಮಾಡುತ್ತಿರುವ ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಅವರ ಕಾರ್ಯಕ್ಕೆ ನಿಜಕ್ಕೂ ಶ್ಲಾಘನೀಯವಾದಂತದ್ದು ಎಂದರು.

ಇಂತಹ ಅಪರೂಪದ ಕಾರ್ಯಕ್ರಮಕ್ಕೆ ಸಮಸ್ತ ಕೆ.ಆರ್‌ಪೇಟೆ ತಾಲೂಕಿನ ಜನತೆ ಆಗಮಿಸಿ ಸಮಾಜಮುಖಿ ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕೆ.ಆರ್.ಪೇಟೆ ತಾಲೂಕು ಅಧ್ಯಕ್ಷ ಸುಜೇಂದ್ರ ಕುಮಾರ್,ಹಿರಿಯ ಮುಖಂಡ ಸೂರ್ಯ ಪ್ರಕಾಶ್, ಕ್ರೈಸ್ತ ಕಿಂಗ್ ಕಾಲೇಜಿನ ಪ್ರಾಂಶುಪಾಲ ಶಿವರಾಜು, ಶಿಕ್ಷಣ ಇಲಾಖೆ ಅಧಿಕಾರಿ ಮಹೇಶ್, ಶಿಕ್ಷಣ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿಕ್ಷಕ ಅಲಂಬಾಡಿ ಕಾವಲು ದೇವರಾಜು, ಆರ್‌ಟಿ ಒ ಮಲ್ಲಿಕಾರ್ಜುನ್ ಆಪ್ತ ಸಹಾಯಕ ಗಂಜೀಗೆರೆ ಮಹೇಶ್ ಹಾಗೂ ಪತ್ನಿ ರಂಜು ಮಹೇಶ್,ಕಟ್ಟಹಳ್ಳಿ ಸುರೇಶ, ಮಾಡುವಿನಕೋಡಿ ಉಮೇಶ್, ಹೊಸಹೊಳಲು ವಿಜಯ್ ಕುಮಾರ್ ,ಮಾರ್ಗೋನಹಳ್ಳಿ ಯೋಗೇಶ್, ಪ್ರದೀಪ್, ಹಿರೀಕಳಲೆ ಮಧು,ಲಿಂಗಾಪುರ ಯಶವಂತ,ಮಂಜುನಾಥ್ ಸೇರಿದಂತೆ ಉಪಸ್ಥಿತರಿದ್ದರು.

ವೇದಿಕೆ ನಿರ್ಮಾಣ ಕಾರ್ಯಕ್ಕೆ ಕಾಪನಹಳ್ಳಿ ಗವಿಮಠದ ಪೀಠಾಧ್ಯಕ್ಷ ಶ್ರೀ ಚನ್ನವೀರ ಮಹಾಸ್ವಾಮಿ ಭೂಮಿ ಪೂಜೆ ಅರ್ಥಪೂರ್ಣವಾಗಿ ನೆರವೇರಿತು.

ಕಾರ್ಮಿಕ ಕಾಯಿದೆ ರದ್ಧತಿಗೆ ಸಿಐಟಿಯು ಆಗ್ರಹ

ತಿ.ನರಸೀಪುರ: ಕೇಂದ್ರ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ 4 ಕಾರ್ಮಿಕ ಸಂಹಿತೆಗಳು ಕಾರ್ಮಿಕರಿಗೆ ಅತ್ಯಂತ ಮಾರಕವಾಗಿರುವುದರಿಂದ ಆ ಸಂಹಿತೆಗಳನ್ನು ರದ್ದುಪಡಿಸುವಂತೆ ತಾಲೂಕು ಸಿಐಟಿಯು ಘಟಕ ಪ್ರತಿಭಟನೆ ನಡೆಸಿ ಅಗ್ರಹಿಸಿತು.

ಪಟ್ಟಣದ ತಾಲೂಕು ಕಚೇರಿ ಮುಂಭಾಗದಲ್ಲಿರುವ ಅಂಬೇಡ್ಕರ್‌ಪುತ್ಥಳಿ ಮುಂದೆ ಹೊಸ ಕಾರ್ಮಿಕ ಸಂಹಿತೆಯ ಪ್ರತಿಯನ್ನು ಸುಡುವ ಮುಖೇನ ಪ್ರತಿಭಟನೆ ನಡೆಸಿ ಮಾತನಾಡಿದ ಕಾರ್ಮಿಕ ಮುಖಂಡ ಆಲಗೂಡು ಪುಟ್ಟಮಲ್ಲಯ್ಯ, ದೇಶದಲ್ಲಿ ನೂತನ ಕಾರ್ಮಿಕ ಸಂಹಿತೆಗಳ ಜಾರಿಗೆ ಹಲವು ಸಂಘಟನೆಗಳು ವಿರೋಧವಿದ್ದು, ಕಾರ್ಮಿಕರ ವಿರೋಧವನ್ನು ಲೆಕ್ಕಿಸದೆ ಕೇಂದ್ರ ಸರ್ಕಾರ ಹೊಸ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರುತ್ತಿರುವುದು ವಸಾಹತುಶಾಹಿ ವರ್ಗವನ್ನು ಬೆಂಬಲಿಸಿದಂತೆ ಆಗುತ್ತದೆ. ಹೊಸ ಕಾರ್ಮಿಕ ಸಂಹಿತೆಗಳಿಂದ ಕಾರ್ಮಿಕರ ಆಸ್ತಿತ್ವಕ್ಕೆ ಧಕ್ಕೆ ಆಗಲಿದೆ. ಅಲ್ಲದೆ ಕಾರ್ಮಿಕ ಸಂಹಿತೆಗಳು ಸಮವರ್ತಿತ ಪಟ್ಟಿಯಲ್ಲಿ ಬರುವುದರಿಂದ ದೇಶದಲ್ಲಿನ ಎಲ್ಲ ರಾಜ್ಯಗಳು ಹೊಸ ಕಾರ್ಮಿಕ ಸಂಹಿತೆಗಳ ಬಗ್ಗೆ ಅಕ್ಷೇಪ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು.

ಹೊಸ ಕಾರ್ಮಿಕ ಸಂಹಿತೆಗಳಿಂದ ಕಾರ್ಮಿಕರ ಬಹುಪಾಲು ಹಕ್ಕುಗಳ ಶೋಷಣೆಯಾಗಲಿದ್ದು, ಕಾರ್ಮಿಕರ ವೇತನ, ಕೆಲಸದ ಅವಧಿ, ಇಡಿಗಂಟು ಮತ್ತು ಕಾರ್ಮಿಕರ ಶ್ರೇಯೋಭಿವೃದ್ಧಿ ಸೇರಿದಂತೆ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಸಂಹಿತೆಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಹಾಗಾಗಿ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಲೇಬೇಕು ಎಂದು ಒತ್ತಾಯಿಸಿದರು.

ತಾಲೂಕು ರೈತ ಸಂಘದ ಸಂಘಟನಾ ಕಾರ್ಯದರ್ಶಿ ಶಾಂತಮೂರ್ತಿ ಮಾತನಾಡಿ, ದೇಶದಾದ್ಯಂತ ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸುವಂತೆ ಕಾರ್ಮಿಕರು ನಿರಂತರ ಪ್ರತಿಭಟನೆ ನಡೆಸುತ್ತಿದ್ದು, ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸದಿದ್ದರೆ ದೇಶದಾದ್ಯಂತ ಉಗ್ರ ಹೋರಾಟವನ್ನು ನಡೆಸಲಾಗುವುದು ಎಂದರು.

ಕಾಂಗ್ರೆಸ್ ಮುಖಂಡೆ ಮಹದೇವಮ್ಮ, ನೀಲಸೋಗೆ ಸಿದ್ದರಾಜು , ಆಲಗೂಡು ಮುತ್ತುತಾಜ್, ನಾಗಮ್ಮ, ಗಾಯತ್ರಮ್ಮ, ಬಸವರಾಜು, ಪುಟ್ಟಸ್ವಾಮಿ ಇತರರು ಹಾಜರಿದ್ದರು.

ಕೇಂದ್ರ, ಸರಕಾರ ಜಾರಿಗೆ ತರಲು ಉದ್ದೇಶಿಸಿರುವ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸುವಂತೆ ತಾಲೂಕು ಸಿಐಟಿಯು ಘಟಕ ಪ್ರತಿಭಟನೆ ನಡೆಸಿತು.

ಕುಶಾಲನಗರದ ಅನುಗ್ರಹ ಪದವಿ ಕಾಲೇಜಿನಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ | ಕೊಡಗು ವಿವಿ ಕುಲಪತಿ ಹೇಳಿಕೆ

ಬೇರೆ ಭಾಷೆ ಗೌರವಿಸಿ, ನಮ್ಮ ಕನ್ನಡ ಭಾಷೆ ಪೂಜಿಸಬೇಕು

ವಿಶ್ವವಾಣಿ ಸುದ್ದಿಮನೆ ಮಡಿಕೇರಿ

ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಮಾತನಾಡುವುದು, ಈ ನಾಡಿನ ನೆಲ, ಜಲ ಸಂಸ್ಕೃತಿ ಉಪಾಸನೆ ಈ ನಾಡಿನ ಪ್ರತಿಯೊಬ್ಬರ ಉಸಿರಾಗಬೇಕೆಂದು ಕೊಡಗು ವಿಶ್ವವಿದ್ಯಾಲಯದ ಕುಲಪತಿ ಡಾ.ಅಶೋಕ್ ಸಂಗಪ್ಪ ಆಲೂರ ಕರೆಕೊಟ್ಟರು. ಕುಶಾಲನಗರದ ಅನುಗ್ರಹ ಪದವಿ ಕಾಲೇಜಿನಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆ ವತಿಯಿಂದ ದ್ವಿತೀಯ ಪಿಯುಸಿಯ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಾಧಕ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಕನ್ನಡ ಭಾಷೆಯನ್ನು ಮಾತನಾಡುವುದು ಹೆಮ್ಮೆಯ ಸಂಗತಿಯಾಗಬೇಕು. ಇತರೇ ಭಾಷೆಗಳನ್ನು ಗೌರವಿಸಿ ನಮ್ಮ ತಾಯಿ ಭಾಷೆಯನ್ನು ಪೂಜಿಸಬೇಕು. ಕನ್ನಡ ಈ ನೆಲದ ಅಸ್ಮಿತೆ ಹಾಗೂ ಸಂಸ್ಕೃತಿ. ಕನ್ನಡದಲ್ಲಿ ಓದಿ ಪರಿಪೂರ್ಣವಾದ ಜೀವನ ನಡೆಸಿದ ಮಹನೀಯರು ನಮಗೆ ಆದರ್ಶರಾಗಬೇಕು.

ನಮ್ಮಲ್ಲಿನ ವಿದ್ವತ್ತನ್ನು ಬಳಸಲು ಕನ್ನಡ ಪ್ರೇರಕವಾಗಬೇಕು. ಶಿಕ್ಷಣ ಹೊಟ್ಟೆಪಾಡಿನ ಸಾಧನವಾಗದೇ ನಮ್ಮನ್ನು ಎತ್ತರಕ್ಕೆ ಒಯ್ಯುವ ಸಾಧನವಾಗಬೇಕು. ಸಮಾಜ, ಕುಟುಂಬ, ಪರಿಸರಕ್ಕೆ ಪೂರಕವಾಗುವ ಶಿಕ್ಷಣ ನಮ್ಮದಾಗಬೇಕು. ವಿದ್ಯಾರ್ಥಿಗಳಿಗೆ ವೈದ್ಯಕೀಯ, ಇಂಜಿನಿಯರಿಂಗ್ ಎರಡೇ ಆಯ್ಕೆಯಲ್ಲ. ಬಹಳಷ್ಟು ಉಪಯುಕ್ತ ಮಾಹಿತಿಗಳನ್ನು ಪಡೆದು ಸಾಧನೆ ತೋರಬೇಕೆಂದು ಡಾ.ಅಶೋಕ್ ಸಂಗಪ್ಪ ಕರೆನೀಡಿದರು.

ಅನುಗ್ರಹ ಕಾಲೇಜಿನ ಧರ್ಮದರ್ಶಿ ಆರ್.ಕೆ.ನಾಗೇಂದ್ರ ಮಾತನಾಡಿ, ಕನ್ನಡ ಭಾಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಮುಂದಿನ ಶಿಕ್ಷಣಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೂಕ್ತ ಧನಸಹಾಯದೊಂದಿಗೆ ಪ್ರೋತ್ಸಾಹಿಸುವ ಕೆಲಸ ವಾಗಬೇಕಿದೆ. ಸಾಧನೆ ತೋರಿದ ವಿದ್ಯಾರ್ಥಿಗಳು, ಉಪನ್ಯಾಸಕರು,ಹಾಗೂ ಆ ಮಕ್ಕಳನ್ನು ಮೆರವಣಿಗೆ ಮೂಲಕ ಸತ್ಕರಿಸುವ ಕೆಲಸ ಸಾಮೂಹಿಕವಾಗಿ ನಡೆಯ ಬೇಕಿದೆ. ಕನ್ನಡ ಭಾಷೆಯಲ್ಲಿ ಅನುತ್ತೀರ್ಣರಾಗುವ ಮಕ್ಕಳಿಗೆ ಹಾಗೂ ಆ ಶಾಲೆಗಳ ಶಿಕ್ಷಕರುಗಳಿಗೆ ಸರ್ಕಾರ ಸೂಕ್ತ ತರಬೇತಿ ಮಾರ್ಗದರ್ಶನ ನೀಡುವ ಕೆಲಸವಾಗಬೇಕಿದೆ. ಆದರೆ ಶಿಕ್ಷೆಯಿಲ್ಲದ ಶಿಕ್ಷಣದಿಂದಾಗಿ ಸಾಧಿಸುವ ಛಲ ವಿದ್ಯಾರ್ಥಿಗಳಲ್ಲಿ ಮಸುಕಾಗುತ್ತಿದೆ ಎಂದು ನಾಗೇಂದ್ರ ವಿಷಾದಿಸಿದರು. ಕಾಲೇಜು ಪ್ರಾಂಶುಪಾಲೆ ಡಾ.ಬಿ.ಡಿ.ಚೈತ್ರ ಮಾತನಾಡಿ, ಇಡೀ ವಿಶ್ವದಲ್ಲಿಯೇ ಅತ್ಯಂತ ಸುಂದರ ವಾಗಿರುವ ಕನ್ನಡ ಭಾಷೆಯನ್ನು ಬೆಳೆಸುವ ಹಾಗೂ ಗೌರವಿಸುವ ಕೆಲಸ ಇಂದಿನ ಯುವ ಜನಾಂಗದಿಂದ ಆಗಬೇಕಿದೆ.

ಹಾಗೆಯೇ ತಾಯಿ ಹಾಗೂ ತಾಯ್ನಾಡನ್ನು ಪೂಜಿಸುವಂತಾಗಬೇಕು ಎಂದರು.

ಸುಂಟಿಕೊಪ್ಪ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್ ಮಾತನಾಡಿ, ಕನ್ನಡ ಭಾಷೆಗಿರುವ ತಾಕತ್ತು ವಿಶ್ವದ ಬೇರಾವುದೇ ಭಾಷೆಗಳಿಗಿಲ್ಲ. ಕನ್ನಡದಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಗೌರವಿಸುವ ಕೆಲಸ ಕನ್ನಡ ಅಭಿಮಾನಿಗಳಿಗೆ ಹೆಮ್ಮೆಯ ಸಂಗತಿ ಎಂದರು.

ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಕೆ.ಎಸ್. ಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡ ಭಾಷೆಯ ಮೇಲೆ ಯುವ ಜನಾಂಗ ಹೆಚ್ಚು ಸದಭಿಮಾನ ಮೂಡಿಸಲು ಪ್ರೇರಣೆಯಾಗುವ ಉದ್ದೇಶದಿಂದ ಕನ್ನಡದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಗೌರವಿಸಲಾಗುತ್ತಿದೆ ಎಂದರು.

ಕಾಲೇಜಿನ ಅಂತಿಮ ಪದವಿ ವಿದ್ಯಾರ್ಥಿ ದರ್ಶನ್ ಕನ್ನಡ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಕುಶಾಲನಗರ ತಹಸೀಲ್ದಾರ್‌ಕಿರಣ್ ಗೌರಯ್ಯ, ಕಾಲೇಜಿನ ಧರ್ಮದರ್ಶಿಗಳಾದ ಶ್ಯಾಮಲಾ ನಾಗೇಂದ್ರ, ಚಂದ್ರಶೇಖರ್,ಸಾಹಿತ್ಯ ವೇದಿಕೆಯ ಕಾರ್ಯದರ್ಶಿ ಪಾಣತ್ತಲೆ ಗಿರೀಶ್, ಕಾಲೇಜಿನ ಉಪಪ್ರಾಂಶುಪಾಲೆ ಮೇಘನಾ, ಕನ್ನಡ ಭಾಷಾ ಉಪನ್ಯಾಸಕಿ ಲೀಲಾಕುಮಾರಿ ತೊಡಿಕಾನ ಇದ್ದರು.

ಕುಶಾಲನಗರದ ಅನುಗ್ರಹ ಪದವಿ ಕಾಲೇಜಿನಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಇತರೇ ಭಾಷೆಗಳನ್ನು ಗೌರವಿಸಿ ನಮ್ಮ ತಾಯಿ ಭಾಷೆಯನ್ನು ಪೂಜಿಸಬೇಕು. ಕನ್ನಡ ಈ ನೆಲದ ಅಸ್ಮಿತೆ ಹಾಗೂ ಸಂಸ್ಕೃತಿ. ಕನ್ನಡದಲ್ಲಿ ಓದಿ ಪರಿಪೂರ್ಣವಾದ ಜೀವನ ನಡೆಸಿದ ಮಹನೀಯರು ನಮಗೆ ಆದರ್ಶರಾಗಬೇಕು. ನಮ್ಮಲ್ಲಿನ ವಿದ್ವತ್ತನ್ನು ಬಳಸಲು ಕನ್ನಡ ಪ್ರೇರಕವಾಗಬೇಕು.

-ಡಾ.ಅಶೋಕ್ ಸಂಗಪ್ಪ ಆಲೂರ,
ಕೊಡಗು ವಿಶ್ವವಿದ್ಯಾಲಯದ ಕುಲಪತಿ

ಸಮಾಚಾರ ಸಣ್ಣದಲ್ಲ

ಪಾಕ್: ಉಗ್ರ ದಾಳಿಗೆ 11 ಸೈನಿಕರು ಸಾವು

ಪೇಶಾವರ: ಪಾಕಿಸ್ತಾನದಲ್ಲಿ ಮತ್ತೊಂದು ಉಗ್ರ ದಾಳಿಯಾಗಿದೆ. ಬಲೂಚಿಸ್ತಾನದ ಚಮಲಾಂಗ್ ಪ್ರದೇಶದಲ್ಲಿ ಸೇನೆಯ ಬೆಂಗಾವಲು ಪಡೆಯನ್ನು ಗುರಿಯಾಗಿಸಿ ಬಲೂಚಿಸ್ತಾನ್ ಲಿಬರೇಷನ್ ಆರ್ಮಿ(ಬಿಎಲ್ಎ)ಯ ಬಂಡುಕೋರರು ನಡೆಸಿದ ಹೊಂಚು ದಾಳಿಯಲ್ಲಿ ಸೇನೆಯ ಮೇಜರ್ ಹಾಗೂ ಇತರ 10 ಯೋಧರು ಮೃತಪಟ್ಟಿರುವುದಾಗಿ ವರದಿಯಾಗಿದೆ. ಬುಧವಾರ ಸಂಜೆ ಚಮಲಾಂಗ್ ಪ್ರದೇಶದಲ್ಲಿ ಗುಪ್ತಚರ ಮಾಹಿತಿಯನ್ನು ಆಧರಿಸಿ ಸೇನಾಪಡೆ ಕಾರ್ಯಾಚರಣೆ ನಡೆಸುತ್ತಿದ್ದಾಗ ಸುಧಾರಿತ ಸ್ಫೋಟಕ ಸಾಧನ(ಐಇಡಿ) ಎಸೆದ ಬಂಡುಕೋರರು ಬಳಿಕ ಗುಂಡಿನ ದಾಳಿ ನಡೆಸಿದ್ದಾರೆ. ಮೇಜರ್ ತೌಸೀಫ್ ಅಹ್ಮದ್ ಹಾಗೂ ಇತರ 11 ಯೋಧರು ಮೃತಪಟ್ಟಿರುವುದಾಗಿ ವರದಿಗಳು ಹೇಳಿವೆ.

ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಇದೇ ತಿಂಗಳ 24ರಂದು ನಡೆಯಬೇಕಿದ್ದ ಎಂಬಿಎ, ಎಂಸಿಎ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯನ್ನು ಜೂನ್ 14ಕ್ಕೆ ಮುಂದೂಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿದ್ದು, ಮೇ 24ರಂದು ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಇರುವ ಕಾರಣ ಈ ಬದಲಾವಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಜೈಲಲ್ಲಿ ಮೊಬೈಲ್ ಪತ್ತೆ: ಎಫ್‌ಐಆರ್

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಬೀಳುತ್ತಿಲ್ಲ. ಜೈಲಿನ ಅಧಿಕಾರಿಗಳು ನಡೆಸಿದ ದಿಢೀರ್ ದಾಳಿಯ ವೇಳೆ ಕೈದಿಗಳ ಬಳಿ ಮತ್ತೆ ನಿಷೇಧಿತ ಮೊಬೈಲ್ ಫೋನ್‌ಗಳು ಹಾಗೂ ಸಿಮ್ ಕಾರ್ಡುಗಳು ಪತ್ತೆಯಾಗಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ. ಕಳೆದ ಶುಕ್ರವಾರ ಮಧ್ಯಾಹ್ನ ಜೈಲಿನ ಹೈ-ಸೆಕ್ಯೂರಿಟಿ ವಿಭಾಗದಲ್ಲಿ ಕಾರಾಗೃಹದ ಹಿರಿಯ ಅಧಿಕಾರಿಗಳು ಆಕಸ್ಮಿಕ ತಪಾಸಣೆ ನಡೆಸಿದ್ದರು. ಈ ವೇಳೆ ವಿಚಾರಣಾಧೀನ ಕೈದಿಗಳಾದ ಮುಸ್ತಫಾ, ಅಬುಬಕರ್ ರೆಹಮಾನ್, ಸಲ್ಮಾನ್ ಮತ್ತು ಫಜಲ್ ಬಳಿ ಒಟ್ಟು 4 ಮೊಬೈಲ್ ಫೋನ್‌ಗಳು ಹಾಗೂ 7 ಸಕ್ರಿಯ ಸಿಮ್ ಕಾರ್ಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ಜತೆಗೆ ಮೊಬೈಲ್ ಚಾರ್ಜರ್‌ಗಳು ಮತ್ತು ಇಯರ್‌ಫೋನ್‌ಗಳು ಸಹ ಪತ್ತೆಯಾಗಿದೆ.

ಕೇರಳದ ಹೊಸ ಸಿಎಂ ಆಗಿ ಆಯ್ಕೆ ಆಗಿರುವ ಕಾಂಗ್ರೆಸ್ ನಾಯಕ ವಿ.ಡಿ. ಸತೀಶನ್ ಅವರ ರಾಜ್ಯ ರಾಜಕೀಯ ಪ್ರವೇಶ ಅವರ ಹುಟ್ಟೂರು ಪರವೂರ್ ವಿಧಾನಸಭಾ ಕ್ಷೇತ್ರದಿಂದ ಆರಂಭವಾಯಿತು. ಕಳೆದ ಐದು ವರ್ಷಗಳಿಂದ ಆಡಳಿತಾರೂಢ ಎಡಪಕ್ಷ ಸರಕಾರದ ವಿರುದ್ಧದ ಯುಡಿಎಫ್ ಹೋರಾಟವನ್ನು ಅವರು ಟೀಮ್ ಯುಡಿಎಫ್ ಸಂಘಟಿಸಿ ಸಮರ್ಥವಾಗಿ ಮುನ್ನಡೆಸಿದ್ದಾರೆ.

ಕೇರಳದಲ್ಲಿ ಇನ್ನು ಸತೀಶನ್ ರಾಜ್ಯಭಾರ

ತಿರುವನಂತಪುರ: ಕೇರಳಂ ಸಿಎಂ ಆಗಿ ಗುರುವಾರ ಆಯ್ಕೆ ಆಗಿರುವ 61 ವರ್ಷದ ವಿ.ಡಿ ಸತೀಶನ್ ಅವರು 5 ಸಲ ಶಾಸಕರಾಗಿದ್ದರೂ, ಅಲ್ಲಿ ವಿರೋಧ ಪಕ್ಷದ ನಾಯಕನಾಗಿರುವುದನ್ನು ಬಿಟ್ಟರೆ, ಇದುವರೆಗೂ ಅಲ್ಲಿನ ಯುಡಿಎಫ್ ಸರಕಾರದಲ್ಲಿ ಯಾವುದೇ ಸಚಿವ ಹುದ್ದೆಯನ್ನು ಹೊಂದದೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದಾರೆ ಎನ್ನುವುದು ಗಮನಾರ್ಹ.

ಎರ್ನಾಕುಲಂ ಜಿಲ್ಲೆಯ ಮರಡು ಪುರಸಭೆಯ ನೆಟ್ಟೂರಿನಲ್ಲಿ ವಡಶ್ಶೇರಿ ದಾಮೋದರ ಮೆನನ್ ಮತ್ತು ವಿ. ವಿಲಾಸಿನಿ ದಂಪತಿಗಳ ಮಗ, ತಮ್ಮ ಪ್ರಾಥಮಿಕ ಶಿಕ್ಷಣವನ್ನು ನೆಟ್ಟೂರು ಎಸ್‌ವಿಯುಪಿ ಶಾಲೆಯಲ್ಲಿ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಪಣಂಗಾಡ್ ಪ್ರೌಢಶಾಲೆಯಲ್ಲಿ ಪೂರೈಸಿದರು.

ಕಾನೂನು ಪದವೀಧರರೂ ಆಗಿರುವ ವಿ.ಡಿ ಸತೀಶನ್, ವಿದ್ಯಾರ್ಥಿ ಚಳವಳಿಯ ಮೂಲಕ ರಾಜಕೀಯ ಪ್ರವೇಶಿಸಿದವರು. ತೇವರ ಸೇಕ್ರೆಡ್ ಹಾರ್ಟ್ ಕಾಲೇಜಿನ ಆರ್ಟ್ಸ್ ಕ್ಲಬ್‌ನ ಕಾರ್ಯದರ್ಶಿಯಾಗಿದ್ದ ಅವರು, ಕೊಟ್ಟಾಯಂನ ಮಹಾತ್ಮಗಾಂಧಿ ವಿ.ವಿ ಮತ್ತು ಕೇರಳ ವಿಶ್ವವಿದ್ಯಾಲಯಗಳಲ್ಲಿ ಕಾಂಗ್ರೆಸ್ ಬೆಂಬಲಿತ ವಿದ್ಯಾರ್ಥಿ ಯೂನಿಯನ್ ಕೌನ್ಸಿಲರ್ ಆಗಿದ್ದರು. 1986-87ರ ಅವಧಿಯಲ್ಲಿ ಎಂ.ಜಿ. ವಿಶ್ವವಿದ್ಯಾಲಯ ಒಕ್ಕೂಟದ ಅಧ್ಯಕ್ಷರಾಗಿದ್ದರು. ಎನ್.ಎಸ್.ಯು. ರಾಷ್ಟ್ರೀಯ ಸಮಿತಿಯ ಕಾರ್ಯದರ್ಶಿ ಹುದ್ದೆಯನ್ನೂ ಸಹ ಅವರು ಅಲಂಕರಿಸಿದ್ದಾರೆ.

ಸತೀಶನ್ ಅವರ ರಾಜ್ಯ ರಾಜಕೀಯ ಪ್ರವೇಶ ಅವರ ಹುಟ್ಟೂರು ಪರವೂರ್ ವಿಧಾನಸಭಾ ಕ್ಷೇತ್ರದಿಂದ ಆರಂಭವಾಯಿತು. 1996ರ ಚೊಚ್ಚಲ ಚುನಾವಣೆಯಲ್ಲಿ ಅಲ್ಲಿ ಅವರು ಸೋಲು ಕಂಡರು. ಆದರೆ 2001ರ ವಿಧಾನಸಭಾ ಚುನಾವಣೆಯಲ್ಲಿ 7,792 ಮತಗಳ ಅಂತರದಲ್ಲಿ ಗೆದ್ದು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು.

2006, 2011, 2016 ಮತ್ತು 2021ರಲ್ಲಿ ಅದೇ ಕ್ಷೇತ್ರದಲ್ಲಿ ಅವರು ತಮ್ಮ ಗೆಲುವನ್ನು ಪುನರಾವರ್ತಿಸಿದರು. ರಾಜ್ಯ ವಿಧಾನಸಭೆಯಲ್ಲಿ ಕಾಂಗ್ರೆಸ್ ವಿಪ್ ಹುದ್ದೆ, ಎಐಸಿಸಿ ಕಾರ್ಯದರ್ಶಿ, 2014ರಲ್ಲಿ ಕೆಪಿಸಿಸಿ ಉಪಾಧ್ಯಕ್ಷರೂ ಆಗಿದ್ದರು.

ಸಿಎಂ ಪಟ್ಟ ಸತೀಶ್‌ಗೇಕೆ ಒಲಿದಿದೆ?: ಕಳೆದ ಐದು ವರ್ಷಗಳಿಂದ ಆಡಳಿತಾರೂಢ ಎಡಪಕ್ಷ ಸರಕಾರದ ವಿರುದ್ಧದ ಯುಡಿಎಫ್ ಹೋರಾಟವನ್ನು ವಿ.ಡಿ ಸತೀಶನ್ ಸಮರ್ಥವಾಗಿ ಮುನ್ನಡೆಸಿದ್ದಾರೆ. 2021ರಿಂದ ವಿರೋಧ ಪಕ್ಷದ ನಾಯಕರಾಗಿ ಅವರು ಸದನದ ಒಳಗೆ ಮತ್ತು ಹೊರಗೆ ಪಿಣರಾಯಿ ವಿಜಯನ್ ಸರಕಾರದ ವಿರುದ್ಧ ಸತತ ವಾಗ್ದಾಳಿ ನಡೆಸಿದ್ದಾರೆ. 2021ರ ನಂತರ ಅವರು ಕಾಂಗ್ರೆಸ್ ಅನ್ನು ಸಮರ್ಥ ವಿರೋಧ ಪಕ್ಷವನ್ನಾಗಿ ಪರಿವರ್ತಿಸುವಲ್ಲಿ ಅವರು ಸಂಪೂರ್ಣವಾಗಿ ಯಶಸ್ವಿಯಾದರು. 'ಟೀಮ್ ಯುಡಿಎಫ್' ಎಂಬ ಟ್ಯಾಗ್‌ನೊಂದಿಗೆ ಯುಡಿಎಫ್ ಒಕ್ಕೂಟವನ್ನು ಮುನ್ನಡೆಸಿದರು. ಕಾರ್ಯ ಕರ್ತರು ವಿ.ಡಿ ಸತೀಶನ್ ಅವರನ್ನು ತಮ್ಮದೇ ನಾಯಕ ಎಂದು ನೋಡಿದ್ದರಿಂದ, ಹತ್ತು ವರ್ಷಗಳ ನಂತರ ಒಕ್ಕೂಟದ ಗೆಲುವಿ ನೊಂದಿಗೆ ಪಕ್ಷ ಅಧಿಕಾರವನ್ನು ಪಡೆಯಲು ಸಾಧ್ಯವಾಗಿದೆ.

2021ರ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ 21 ಸ್ಥಾನಗಳನ್ನು ಗೆಲ್ಲಲಷ್ಟೇ ಸಾಧ್ಯವಾಯಿತು. ಆದರೆ 2026ರ ವಿಧಾನಸಭಾ ಚುನಾವಣೆಯಲ್ಲಿ ಆ ಸ್ಥಾನಗಳನ್ನೂ ಒಳಗೊಂಡಂತೆ ಕಾಂಗ್ರೆಸ್ ಗೆಲ್ಲಬಹುದಾದ 63 ಸ್ಥಾನಗಳಿಗೆ ತಂತ್ರಗಳನ್ನು ಸಿದ್ಧಪಡಿಸಿದರು. ಹತ್ತು ಸಾವಿರಕ್ಕಿಂತ ಕಡಿಮೆ ಅಂತರದಿಂದ ಕಳೆದುಕೊಂಡ ಸ್ಥಾನಗಳನ್ನು ಗುರುತಿಸಿ ವಿಶೇಷ ಗಮನ ನೀಡಿದರು. ಪಕ್ಷ ಮತ್ತು ಸಂಘಟನೆಯ ವ್ಯವಸ್ಥೆಯನ್ನು ಬೂತ್ ಮಟ್ಟದಿಂದ ಮರು ಸಂಘಟಿಸಿದ ಕಾರಣ ಅದರ ಪ್ರಯೋಜನಗಳನ್ನು ಈ ಚುನಾವಣಾ ಫಲಿತಾಂಶದಲ್ಲಿ ಕಾಣಲು ಸಾಧ್ಯವಾಯಿತು.

ನಿಖರ ಲೆಕ್ಕಾಚಾರದ ಸ್ಪಷ್ಟ ಗುರಿ: 2021ರಿಂದ ನಿಧಾನವಾಗಿ ಪಕ್ಷ ಮುನ್ನಡೆಸುವಲ್ಲಿ ಯಶಸ್ವಿಯಾದ ಸತೀಶನ್, 2022ರಲ್ಲಿ ಅಲ್ಲಿನ ತ್ರಿಕ್ಕಾಕರದಲ್ಲಿ ನಡೆದ ಉಪಚುನಾವಣೆಯಲ್ಲಿ ಪಕ್ಷದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಬಳಿಕ 2024ರ ಲೋಕಸಭಾ ಚುನಾವಣೆಯಲ್ಲಿ ಕೇರಳದ ಒಟ್ಟು 20 ಸ್ಥಾನಗಳ ಪೈಕಿ 18 ಸ್ಥಾನಗಳಲ್ಲಿ ಯುಡಿಎಫ್ ಗೆಲ್ಲುವಲ್ಲಿ ಮಹತ್ತರ ಪಾತ್ರ ವಹಿಸಿದರು. ಬಳಿಕ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಅದನ್ನು ಪುನರಾವರ್ತಿಸಿದ ನಂತರ, ಯುಡಿಎಫ್ ಒಕ್ಕೂಟದ ಮೈತ್ರಿ ಪಕ್ಷದ ಕಾರ್ಯಕರ್ತರೂ ಸಹ ಅವರ ಕಾರ್ಯ ತಂತ್ರವನ್ನು ಒಪ್ಪಿಕೊಳ್ಳುವಂತಾಯಿತು.

ರಾಜಕೀಯ ವನವಾಸದ ಘೋಷಣೆ: ಈ ಬಾರಿ 100 ಸ್ಥಾನಗಳನ್ನು ಪಡೆಯದಿದ್ದರೆ, ತಾನು ರಾಜಕೀಯ ವನವಾಸಕ್ಕೆ ಹೋಗುವು ದಾಗಿ ವಿ.ಡಿ ಸತೀಶನ್ ಪದೇ ಪದೇ ಘೋಷಿಸಿದ್ದು ಯುಡಿಎಫ್‌ನ ಗೆಲುವಿಗೆ ನಿರ್ಣಾಯಕವಾಗಿತ್ತು ಎಂದು ರಾಜಕೀಯ ವಿಶ್ಲೇಷಕರು ನಂಬುತ್ತಾರೆ. ಆ ಘೋಷಣೆ ಯುಡಿಎಫ್ ಕಾರ್ಯಕರ್ತರಿಗೆ ಹೆಚ್ಚಿನ ಆತ್ಮವಿಶ್ವಾಸವನ್ನು ನೀಡಿತು. ತಮ್ಮ ನಾಯಕನ ಮಾತುಗಳನ್ನು ನಂಬಿದ್ದ ಕಾರ್ಯಕರ್ತರು, ನಂತರ ಅಧಿಕಾರವನ್ನು ವಶಪಡಿಸಿಕೊಳ್ಳಲು ನಿರಂತರವಾಗಿ ಶ್ರಮವಹಿಸಿ ಪಕ್ಷ ಸಂಘಟನೆ ಮಾಡಿದರು. ಮತದಾನದ ನಂತರ, ಯುಡಿಎಫ್ 100ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಅಧಿಕಾರಕ್ಕೆ ಬರುತ್ತದೆ ಎಂದು ಸತೀಶನ್ ಮಾಧ್ಯಮಗಳ ಮುಂದೆ ಪದೇ ಪದೇ ಹೇಳಿದರು. ಹಾಗೆಯೇ ಈ ಬಾರಿ ಒಂದು ಡಜನ್‌ಗಿಂತಲೂ ಹೆಚ್ಚು ಎಲ್‌ಡಿಎಫ್ ಸಚಿವರು ಸೋಲುತ್ತಾರೆ ಎಂದೂ ಭವಿಷ್ಯ ನುಡಿದರು. ಫಲಿತಾಂಶಗಳು ಬಂದಾಗ ಅವರ ಊಹೆ ಸರಿಯಾಗಿತ್ತು.

ಕೇರಳ ರಾಜಕೀಯದಲ್ಲಿ ಕೋಮುವಾದದ ವಿರುದ್ಧ ಸತೀಶನ್ ಅವರ ಬಲವಾದ ನಿಲುವು ಅವರ ವ್ಯಕ್ತಿತ್ವದ ಖ್ಯಾತಿ ಹೆಚ್ಚಿಸಿದೆ. ಜಾತಿ ಮತ್ತು ಧಾರ್ಮಿಕ ಸಂಘಟನೆಗಳ ಒತ್ತಡಕ್ಕೆ ಮಣಿಯುವುದಿಲ್ಲ ಎಂಬ ಅವರ ಘೋಷಣೆಗಳು ಮತ್ತು ಹೇಳಿಕೆಗಳು ಕೇರಳಂನಲ್ಲಿ ಉತ್ತಮ ಚರ್ಚೆಗಳಿಗೆ ಕಾರಣವಾಗಿವೆ.

ಸಿಎಂ ಸ್ಥಾನ ದೈವೇಚ್ಛೆ

ಮುಖ್ಯಮಂತ್ರಿ ಪಟ್ಟಕ್ಕೆ ಪಟ್ಟು ಹಿಡಿದಿದ್ದ ಹಿರಿಯ ಕಾಂಗ್ರೆಸ್ ನಾಯಕರಾದ ಕೆ.ಸಿ. ವೇಣು ಗೋಪಾಲ್ ಮತ್ತು ರಮೇಶ್ ಚೆನ್ನಿತ್ತಲ ಅವರನ್ನು ವಿಶ್ವಾಸಕ್ಕೆ ತೆಗೆದುಕೊ ಳ್ಳುವುದಾಗಿ ಕೇರಳ ನಿಯೋಜಿತ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಗುರುವಾರ ಹೇಳಿದ್ದು, ಆಡಳಿತದಲ್ಲಿ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡಿದ್ದಾರೆ. ನಾನು ಸಿಎಂ ಸ್ಥಾನ ಪಡೆದಿರುವುದನ್ನು ವೈಯಕ್ತಿಕ ಸಾಧನೆ ಎಂದು ಭಾವಿಸುವುದಿಲ್ಲ, ಇದು ದೈವಿಚ್ಛೆ ಎಂದುಕೊಳ್ಳುತ್ತೇನೆ. ಎಐಸಿಸಿಯ ಎಲ್ಲಾ ಚಟುವಟಿಕೆಗಳನ್ನು ಸಂಘಟಿಸಿದವರು ಕೆ.ಸಿ. ವೇಣು ಗೋಪಾಲ್. ಅವರ ಬೆಂಬಲ ಅಪಾರವಾಗಿತ್ತು. ರಮೇಶ್ ಚೆನ್ನಿತ್ತಲ ನನ್ನ ನಾಯಕರೂ ಹೌದು. ನಾನು ಅವರೆಲ್ಲರನ್ನೂ ಸಂಪೂರ್ಣ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಕೇರಳದ ಪ್ರತಿಯೊಂದು ವರ್ಗದ ಜನರ ಬೆಂಬಲವನ್ನು ನಾನು ಬಯಸುತ್ತೇನೆ. ಸಾಮೂಹಿಕ ಪ್ರಯತ್ನ ಮಾತ್ರ ಹೊಸ ಕೇರಳವನ್ನು ನಿರ್ಮಿಸಬಲ್ಲದು. ಯಾರೂ ಇದನ್ನು ಒಬ್ಬಂಟಿಯಾಗಿ ಮಾಡಲು ಸಾಧ್ಯವಿಲ್ಲ, ಒಂದು ತಂಡವಾಗಿ ಅದನ್ನು ಸಾಧಿಸಬಹುದು ಎಂದರು. ಈ ಚುನಾವಣೆಯಲ್ಲಿ ಲಕ್ಷಾಂತರ ಯುಡಿಎಫ್ ಕಾರ್ಯಕರ್ತರು ಮತ್ತು ನಾಯಕರು ಶ್ರಮಿಸಿದ್ದಾರೆ. ನಾನು ಅವರಿಗೆ ಕೃತಜ್ಞನಾಗಿದ್ದೇನೆ ಎಂದೂ ಸತೀಶನ್ ಹೇಳಿದ್ದಾರೆ.

ದ.ಕನ್ನಡ, ಉ.ಕನ್ನಡ, ಶಿವಮೊಗ್ಗ, ಯಾದಗಿರಿಯಲ್ಲಿ ಧಾರಾಕಾರ ಮಳೆ | ಉರುಳಿದ ಮನೆಗಳು, ಮರ, ವಿದ್ಯುತ್ ಕಂಬ ನೆಲಸಮ

ರಾಜ್ಯದ 4 ಜಿಲ್ಲೆಗಳಲ್ಲಿ ಮಳೆಯಾರ್ಭಟ

ಬೆಂಗಳೂರು/ಮಂಗಳೂರು: ಕಳೆದ ಕೆಲವು ದಿನಗಳಿಂದ ಸುಡುತ್ತಿರುವ ಬಿಸಿಲಿನಿಂದ ಬೆಂದು ಹೋಗಿದ್ದ ಕರ್ನಾಟಕದ ಜನತೆಗೆ ವರುಣದೇವ ತಂಪೆರೆದಿದ್ದಾನೆ. ಆದರೆ, ರಾಜ್ಯದ ಹಲವೆಡೆ ಮಳೆರಾಯನ ಆರ್ಭಟಕ್ಕೆ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಒಂದೆಡೆ ಮಳೆ ಖುಷಿ ನೀಡಿದರೆ, ಮತ್ತೊಂದೆಡೆ ಅಪಾರ ಹಾನಿ ಉಂಟುಮಾಡಿದೆ. ವಿಶೇಷವಾಗಿ ಮಂಗಳೂರು, ಯಾದಗಿರಿ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಳೆಯ ರೌದ್ರಾವತಾರ ಕಂಡುಬಂದಿದೆ.

ಕರಾವಳಿ ನಗರಿ ಮಂಗಳೂರಿನಲ್ಲಿ ಗುರುವಾರ ಸಂಜೆ ಸುರಿದ ಧಾರಾಕಾರ ಮಳೆಯಿಂದಾಗಿ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. ಹವಾಮಾನ ವೈಪರೀತ್ಯದಿಂದಾಗಿ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಲ್ಯಾಂಡಿಂಗ್ ಸಮಸ್ಯೆಯಾಗಿದೆ. ರನ್ ವೇ ಸರಿಯಾಗಿ ಕಾಣಿಸದ ಹಿನ್ನೆಲೆಯಲ್ಲಿ ಎರಡು ವಿಮಾನಗಳು ಇಳಿಯಲಾಗದೆ ವಿಟ್ಲ ಸಮೀಪದ ಆಕಾಶದಲ್ಲಿ ಸುದೀರ್ಘ ಕಾಲ ಸುತ್ತಾಡಿವೆ.

ಯಾದಗಿರಿಯಲ್ಲಿ ಬಿರುಗಾಳಿ: ಯಾದಗಿರಿ ಜಿಲ್ಲೆಯಾದ್ಯಂತ ಭಾರಿ ಬಿರುಗಾಳಿ ಸಹಿತ ಮಳೆ ಸುರಿದಿದ್ದು, ಹಲವೆಡೆ ಅವಾಂತರ ಸೃಷ್ಟಿಸಿದೆ. ಯಾದಗಿರಿ ನಗರ, ಶಹಾಪುರ ಮತ್ತು ಸುರಪುರ ತಾಲೂಕುಗಳಲ್ಲಿ ವರುಣನ ಆರ್ಭಟ ಜೋರಾಗಿತ್ತು. ಶಹಾಪುರ ತಾಲೂಕಿನ ಸಗರ ಗ್ರಾಮದಲ್ಲಿ ಬಿರುಗಾಳಿಯ ರಭಸಕ್ಕೆ ಮನೆಗಳ ಮೇಲ್ಛಾವಣಿಯ ತಗಡುಗಳು ನೂರಾರು ಅಡಿ ದೂರಕ್ಕೆ ಹಾರಿ ಹೋಗಿವೆ.

ವಿದ್ಯುತ್ ಸಂಪರ್ಕ ಕಡಿತ: ಯಾದಗಿರಿ ಜಿಲ್ಲೆಯಾದ್ಯಂತ ನೂರಾರು ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಸಮವಾಗಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಬಿಸಿಲಿನ ಬೇಗೆಯಿಂದ ಕಂಗಾಲಾಗಿದ್ದ ಜನರಿಗೆ ಮಳೆ ತಂಪು ನೀಡಿದೆಯಾದರೂ, ಬಡ ಕುಟುಂಬಗಳ ಆಸ್ತಿಪಾಸ್ತಿಗೆ ಹಾನಿಯಾಗಿರುವುದು ನೋವು ತಂದಿದೆ.

ಮಲೆನಾಡಿನಲ್ಲೂ ವರುಣನ ಕೃಪೆ: ಶಿವಮೊಗ್ಗದಲ್ಲಿ ಹಲವು ದಿನಗಳ ಸುದೀರ್ಘ ಕಾಯುವಿಕೆಯ ನಂತರ ಮಳೆರಾಯ ಧರೆಗಿಳಿದಿದ್ದಾನೆ. ಸಂಜೆ 6 ಗಂಟೆ ಸುಮಾರಿಗೆ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಇಳೆ ತಂಪಾಗಿದೆ. ಆದರೆ, ದಿಢೀರ್ ಮಳೆಯಿಂದಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ತ ಗೊಂಡು ವಾಹನ ಸವಾರರು ಪರದಾಡು ವಂತಾಯಿತು.

ಉತ್ತರ ಕನ್ನಡದಲ್ಲಿ ಗುಡುಗು-ಮಿಂಚು: ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಗುಡುಗು ಮತ್ತು ಮಿಂಚಿನ ಸಹಿತ ಭಾರಿ ಮಳೆಯಾಗುತ್ತಿದೆ. ಸಂಜೆ 7 ಗಂಟೆಯಿಂದಲೇ ಸುರಿಯುತ್ತಿರುವ ಮಳೆಯಿಂದಾಗಿ ಕರಾವಳಿಯ ಜನರಿಗೆ ಸೆಕೆಯಿಂದ ಮುಕ್ತಿ ಸಿಕ್ಕಿದೆ. ಜಿಲ್ಲೆಯ ಹೊನ್ನಾವರ ಮತ್ತು ಕುಮಟಾ ತಾಲೂಕುಗಳಲ್ಲೂ ಮೋಡ ಕವಿದ ವಾತಾವರಣವಿದ್ದು, ರಾತ್ರಿ ವೇಳೆಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಮುಂಗಾರುಪೂರ್ವ ಮಳೆ ಚುರುಕು: ಒಟ್ಟಾರೆಯಾಗಿ, ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಚುರುಕುಗೊಂಡಿದ್ದು, ಮುಂದಿನ ಕೆಲವು ದಿನಗಳ ಕಾಲ ಇದೇ ರೀತಿಯ ವಾತಾವರಣ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸಾರ್ವಜನಿಕರು ಗುಡುಗು ಸಿಡಿಲಿನ ಸಂದರ್ಭದಲ್ಲಿ ಎಚ್ಚರಿಕೆಯಿಂದಿರಲು ಸೂಚಿಸಲಾಗಿದೆ.

ಕ್ಯಾನ್‌ಫಿನ್ ಸಂಸ್ಥೆಯ ಸಿಎಸ್‌ಆರ್ ಯೋಜನೆಯಲ್ಲಿ ಆಂಧ್ರಪ್ರದೇಶದ ಸಂಗಾರೆಡ್ಡಿ ಜಿಲ್ಲೆಯ ಆಂದೋಲ್ ಮಂಡಲದ ಅಕ್ಕಾಪಳ್ಳಿ ಗ್ರಾಮದಲ್ಲಿರುವ ಸರಕಾರಿ ಶಾಲೆಗೆ ಸುಮಾರು 11.65 ಲಕ್ಷ ಮೌಲ್ಯದ ಮೂಲಸೌಕರ್ಯ ವಸ್ತುಗಳನ್ನು ಒದಗಿಸಲಾಯಿತು.

ಸನಾತನ ಧರ್ಮ ನಿರ್ಮೂಲನೆಗೆಂದೇ ನಾವು ಹುಟ್ಟಿದ್ದು: ನಾಲಿಗೆ ಹರಿ ಬಿಟ್ಟ ಟಿವಿಕೆ ನಾಯಕ

ಸನಾತನ ಧರ್ಮ: ಡಿಎಂಕೆ ಬೆನ್ನಿಗೆ ನಿಂತ ಟಿವಿಕೆ

ಚೆನ್ನೈ: ತಮಿಳುನಾಡಿನಲ್ಲಿ ಸನಾತನ ಧರ್ಮ ಕುರಿತ ಹೇಳಿಕೆಗಳು ರಾಜಕೀಯ ವಾತಾವರಣ ಮತ್ತೊಮ್ಮೆ ಕಾವೇರುವಂತೆ ಮಾಡಿವೆ. ನಟ, ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಸನಾತನ ಧರ್ಮದ ಬಗ್ಗೆ ಮಾತನಾಡಿ, ಜನರನ್ನು ವಿಭಜಿಸುವ ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂದು ಇತ್ತೀಚೆಗೆ ತಮಿಳುನಾಡು ಸದನದಲ್ಲೇ ಹೇಳಿದ್ದರು, ಆ ಬಗ್ಗೆ ಭಾರೀ ಆಕ್ರೋಶ ವ್ಯಕ್ತವಾಗಿತ್ತು. ಇದಕ್ಕೆ ತಮಿಳು ನಟ ಕಟ್ಟಪ್ಪ ಖ್ಯಾತಿಯ ಸತ್ಯರಾಜ್ ಕೂಡ ಬೆಂಬಲ ನೀಡಿದ್ದರು. ಇದೀಗ ಆಡಳಿತ ಪಕ್ಷವಾದ ಟಿವಿಕೆಯ ವಿಎಂಎಸ್ ಮುಸ್ತಫಾ ನೀಡಿದ ಹೇಳಿಕೆ ಹಾಗೂ ಅದಕ್ಕೆ ಬೆಂಬಲವಾಗಿ ವ್ಯಕ್ತವಾದ ಅಭಿಪ್ರಾಯಗಳು ಭಾರೀ ಚರ್ಚೆಗೆ ಕಾರಣವಾಗಿವೆ.

ಟಿವಿಕೆ ಮುಸ್ತಫಾ ಹೇಳಿಕೆಯಿಂದ ವಿವಾದ: ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಶಾಸಕ ವಿ.ಎಂ.ಎಸ್. ಮುಸ್ತಫಾ, ತಮ್ಮ ಪಕ್ಷವು ಪೆರಿಯಾರ್ ಇ.ವಿ ರಾಮಸಾಮಿ ಹಾಗೂ ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳನ್ನು ಅನುಸರಿಸುತ್ತಿದ್ದು ಸನಾತನ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಹೋರಾಟಕ್ಕೆ ನಾವು ಕೂಡ ಪ್ರವೇಶಿಸಿದ್ದೇವೆ. ಸನಾತನ ಧರ್ಮ ನಿರ್ಮೂಲನೆಕ್ಕೆಂದೇ ನಾವು ಹುಟ್ಟಿದ್ದು ಎಂದು ಹೇಳಿಕೆ ನೀಡಿದ್ದಾರೆ. ಮಧುರೈ ಕೇಂದ್ರ ಕ್ಷೇತ್ರದಿಂದ ಆಯ್ಕೆಯಾದ ಮುಸ್ತಫಾ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಸಮಾಜದಲ್ಲಿ

ಅಸಮಾನತೆ ಉಂಟು ಮಾಡುವ ವ್ಯವಸ್ಥೆಗಳ ವಿರುದ್ಧ ಹೋರಾಡುವುದು ನಮ್ಮ ಉದ್ದೇಶ ಎಂದು ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯು ರಾಜಕೀಯ ವಲಯದಲ್ಲಿ ಮಾತ್ರವಲ್ಲ ಇಡೀ ರಾಜ್ಯಾದ್ಯಂತ ಚರ್ಚೆಗೆ ಕಾರಣವಾಯಿತು. ಟಿವಿಕೆ ಪಕ್ಷದ ನಾಯಕ, ತಮಿಳುನಾಡು ಮುಖ್ಯಮಂತ್ರಿ ವಿಜಯ್ ಜೋಸೆಫ್ ಈ ವಿಚಾರದಲ್ಲಿ ಮೌನ ತಾಳಿರುವುದು ಕೂಡ ರಾಜಕೀಯ ಚರ್ಚೆಗೆ ಕಾರಣವಾಗಿದೆ. ಪಕ್ಷದ ಶಾಸಕರು ಇಂತಹ ಹೇಳಿಕೆ ನೀಡು ತ್ತಿರುವಾಗ ವಿಜಯ್ ಏಕೆ ಪ್ರತಿಕ್ರಿಯೆ ನೀಡುತ್ತಿಲ್ಲ? ಹಿಂದೂ ಮತಗಳಿಂದ ಅಧಿಕಾರಕ್ಕೆ ಬಂದ ನಂತರ ಈಗ ಪಕ್ಷದ ನಿಲುವು ಬದಲಾಗಿದೆಯೇ? ಎಂದು ಬಿಜೆಪಿ ನಾಯಕರು ಖಾರವಾಗಿ ಪ್ರಶ್ನಿಸಿದ್ದಾರೆ

ತ.ನಾಡಿನಲ್ಲಿ ಮತ್ತೊಮ್ಮೆ ರಾಜಕೀಯ ಸಂಘರ್ಷ

ಸನಾತನ ಧರ್ಮ ಕುರಿತ ಹೇಳಿಕೆಗಳು ತಮಿಳುನಾಡಿನಲ್ಲಿ ಮತ್ತೊಮ್ಮೆ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿವೆ. ಟಿವಿಕೆ ಹಾಗೂ ಡಿಎಂಕೆ ನಾಯಕರು ತಮ್ಮ ನಿಲುವುಗಳನ್ನು ಸಮರ್ಥಿಸಿಕೊಂಡರೆ, ಬಿಜೆಪಿ ಈ ವಿಷಯವನ್ನು ತೀವ್ರವಾಗಿ ವಿರೋಧಿಸುತ್ತಿದೆ. ಈ ವಿವಾದ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರವಾಗುವ ಸಾಧ್ಯತೆ ಇದ್ದು, ತಮಿಳುನಾಡು ರಾಜ್ಯ ರಾಜಕೀಯದಲ್ಲಿ ಇದರ ಪರಿಣಾಮ ಹೇಗಿರುತ್ತದೆ ಎಂಬುದು ಗಮನಾರ್ಹವಾಗಿದೆ.

ಪುರದಮ್ಮನ ಹರಕೆ ತೀರಿಸಿದ ಶಾಸಕ ಟಿ.ಡಿ.ರಾಜೇಗೌಡ





ಹಾಸನ ತಾಲೂಕಿನ ಬೀಕನಹಳ್ಳಿ ಪುರದಮ್ಮ ದೇವಾಲಯಕ್ಕೆ ಶಾಸಕ ರಾಜೇಗೌಡ ಕುಟುಂಬ ಸಮೇತ ಭೇಟಿ ನೀಡಿ ಹರಕೆ ತೀರಿಸಿದರು.

ಹಾಸನ: ಟಿ.ಡಿ.ರಾಜೇಗೌಡ ಅವರು ಮತ್ತೆ ಶಾಸಕರಾದ ಬೆನ್ನಲ್ಲೇ ಹಾಸನ ತಾಲೂಕಿನ ಬೀಕನಹಳ್ಳಿ ಗ್ರಾಮದ ಇತಿಹಾಸ ಪ್ರಸಿದ್ಧ ಪುರದಮ್ಮ ದೇವಾಲಯಕ್ಕೆ ಭೇಟಿ ನೀಡಿ ಹರಕೆ ತೀರಿಸಿದರು. ದೇವಾಲಯಕ್ಕೆ ಕುಟುಂಬ ಸಮೇತರಾಗಿ ಅವರು ಭೇಟಿ ನೀಡಿದ್ದರು. ಜೊತೆಗೆ ಹತ್ತಾರು ಕಾರ್ಯಕರ್ತರು ಸಹ ಆಗಮಿಸಿದ್ದರು. ಕುಟುಂಬಸ್ಥರು ಹಾಗೂ ಕಾರ್ಯಕರ್ತರ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಹರಕೆ ಸಲ್ಲಿಸಿದರು. ಸುಪ್ರೀಂ ಕೋರ್ಟ್‌ನಲ್ಲಿ ಅಂಚೆ ಮತ ಮರು ಎಣಿಕೆ ಫಲಿತಾಂಶಕ್ಕೆ ತಡೆ ಸಿಕ್ಕ ಹಿನ್ನೆಲೆಯಲ್ಲಿ ಮತ್ತೆ ಶೃಂಗೇರಿ ಶಾಸಕರಾಗಿ ಟಿ.ಡಿ.ರಾಜೇಗೌಡ ಮುಂದುವರಿದಿದ್ದಾರೆ. ಶಾಸಕರಾಗಿ ಮುಂದುವರೆಯುವಂತೆ ಪುರದಮ್ಮ ದೇವಿಗೆ ಶಾಸಕ ಮತ್ತು ಕಾರ್ಯಕರ್ತರು ಹರಕೆ ಕಟ್ಟಿಕೊಂಡಿದ್ದರು.

ಒಮಾನ್‌ನಿಂದ ಭಾರತಕ್ಕೆ ಸಮುದ್ರದಡಿಯ ಗ್ಯಾಸ್‌ಪೈಪ್‌ಲೈನ್‌ಗೆ ಸಿದ್ಧತೆ

₹40,000 ಕೋಟಿ ಗ್ಯಾಸ್ ಪೈಪ್‌ಲೈನ್ ಯೋಜನೆ

ಹೊರ್ಮುಜ್ ಜಲಸಂಧಿ ಸುತ್ತ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿ ಹಾಗೂ ಇಂಧನ ಪೂರೈಕೆಯ ಭದ್ರತೆ ಕುರಿತ ಆತಂಕದ ಹಿನ್ನೆಲೆ, ಭಾರತವು ಒಮಾನ್‌ನಿಂದ ನೇರ ಸಮುದ್ರಾಳದ ಗ್ಯಾಸ್ ಪೈಪ್‌ಲೈನ್ ನಿರ್ಮಾಣ ಯೋಜನೆಗೆ ವೇಗ ನೀಡಿದೆ. ಸುಮಾರು ₹40,000 ಕೋಟಿ ವೆಚ್ಚದ ಈ ಯೋಜನೆಗೆ ಸರಕಾರ ಆದ್ಯತೆ ನೀಡಿದ್ದು, ದೇಶಕ್ಕೆ ನಿರಂತರ ಮತ್ತು ಸುರಕ್ಷಿತ ಅನಿಲ ಪೂರೈಕೆಯನ್ನು ಖಚಿತಪಡಿಸುವ ಉದ್ದೇಶ ಹೊಂದಿದೆ.

ಪೆಟ್ರೋಲಿಯಂ ಸಚಿವಾಲಯದ ಅಧಿಕಾರಿಗಳ ಪ್ರಕಾರ, ಯೋಜನೆಗೆ ಅಂತಿಮ ಅನುಮೋದನೆ ದೊರೆತರೆ ಪೈಪ್‌ಲೈನ್ ನಿರ್ಮಾಣಕ್ಕೆ ಸುಮಾರು ಐದರಿಂದ ಏಳು ವರ್ಷಗಳು ಬೇಕಾಗಬಹುದು. ಈ ಪೈಪ್‌ಲೈನ್ ಒಮಾನ್‌ನಿಂದ ಗುಜರಾತ್ ಕರಾವಳಿವರೆಗೆ ಸಂಪರ್ಕ ಕಲ್ಪಿಸುವ ನಿರೀಕ್ಷೆಯಿದೆ. ಪ್ರಸ್ತುತ, ಭಾರತ ತನ್ನ ಅನಿಲ ಅಗತ್ಯಗಳ ಬಹುಪಾಲನ್ನು ಎಲ್‌ಎನ್‌ಜಿ ಆಮದುಗಳ ಮೂಲಕ ಪೂರೈಸುತ್ತಿದೆ. ಆದರೆ, ಜಾಗತಿಕ ಮಾರುಕಟ್ಟೆಯ ಅಸ್ಥಿರತೆ, ಮಧ್ಯಪ್ರಾಚ್ಯದ ಯುದ್ಧ ಪರಿಸ್ಥಿತಿ ಹಾಗೂ ಹೊರ್ಮುಜ್ ಜಲಸಂಧಿಯ ಭದ್ರತಾ ಸಮಸ್ಯೆಗಳು ಭಾರತಕ್ಕೆ ಇಂಧನ ಭದ್ರತೆ ಕುರಿತ ಚಿಂತೆಯನ್ನು ಹೆಚ್ಚಿಸಿವೆ. ಇದರಿಂದಲೇ ಸಮುದ್ರಾಳದ ನೇರ ಪೈಪ್‌ಲೈನ್ ಯೋಜನೆಯನ್ನು ಕೇಂದ್ರ ಸರಕಾರ ತುರ್ತು ಅಗತ್ಯವೆಂದು ಪರಿಗಣಿಸಿದೆ.

ಹೊರ್ಮುಜ್ ಜಲಸಂಧಿ ವಿಶ್ವದ ಪ್ರಮುಖ ತೈಲ ಮತ್ತು ಅನಿಲ ಸಾಗಣೆ ಮಾರ್ಗಗಳಲ್ಲಿ ಒಂದಾಗಿದೆ. ಈ ಮಾರ್ಗದಲ್ಲಿ ವ್ಯತ್ಯಯ ಉಂಟಾದರೆ ಭಾರತ ಸೇರಿದಂತೆ ಅನೇಕ ದೇಶಗಳ ಇಂಧನ ಪೂರೈಕೆ ಮೇಲೆ ಗಂಭೀರ ಪರಿಣಾಮ ಬೀಳುವ ಸಾಧ್ಯತೆ ಇದೆ. ಇತ್ತೀಚಿನ ಸಂಘರ್ಷಗಳ ನಡುವೆ ಹಲವಾರು ಹಡಗುಗಳ ಸಂಚಾರಕ್ಕೂ ಅಡಚಣೆ ಉಂಟಾಗಿದ್ದು, ಭಾರತಕ್ಕೆ ಬರುತ್ತಿದ್ದ ಎಲ್‌ಪಿಜಿ ಟ್ಯಾಂಕರ್‌ಗಳಿಗೂ ಭದ್ರತಾ ಸವಾಲು ಎದುರಾಗಿದೆ. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಯುಎಇ ಭೇಟಿಯ ಸಂದರ್ಭದಲ್ಲಿ ದೀರ್ಘಾವಧಿಯ ತೈಲ ಮತ್ತು ಅನಿಲ ಪೂರೈಕೆ ಒಪ್ಪಂದಗಳ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಭಾರತ ತನ್ನ ತಂತ್ರಜ್ಞಾನ ಸಂಗ್ರಹಣಾ ಸಾಮರ್ಥ್ಯವನ್ನು ವಿಸ್ತರಿಸಲು ಮತ್ತು ಸ್ಥಿರ ಇಂಧನ ಪೂರೈಕೆಯನ್ನು ಖಚಿತಪಡಿಸಲು ಮಧ್ಯಪ್ರಾಚ್ಯದ ರಾಷ್ಟ್ರಗಳೊಂದಿಗೆ ಸಹಕಾರ ಹೆಚ್ಚಿಸಲು ಪ್ರಯತ್ನಿಸುತ್ತಿದೆ.

ಈ ಯೋಜನೆ ಯಶಸ್ವಿಯಾದರೆ ಭಾರತಕ್ಕೆ ಕಡಿಮೆ ವೆಚ್ಚದಲ್ಲಿ ನಿರಂತರ ಅನಿಲ ಪೂರೈಕೆ ಲಭ್ಯವಾಗುವುದರ ಜತೆಗೆ, ಎಲ್‌ಎನ್‌ಜಿ ಮಾರುಕಟ್ಟೆಯ ಮೇಲಿನ ಅವಲಂಬನೆ ಕಡಿಮೆಯಾಗಲಿದೆ. ಜತೆಗೆ ದೇಶದ ಗ್ಯಾಸ್ ಆಧಾರಿತ ಆರ್ಥಿಕತೆ ಗುರಿಗೂ ಇದು ಪ್ರಮುಖ ಬೆಂಬಲ ನೀಡಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಯೋಜನೆಯ ಪ್ರಮುಖ ಅಂಶಗಳು

1. **ಮಾರ್ಗ ಮತ್ತು ಉದ್ದ:** 'ಮಿಡಲ್ ಈಸ್ಟ್-ಇಂಡಿಯಾ ಡೀಪ್-ವಾಟರ್ ಪೈಪ್‌ಲೈನ್' ಹೆಸರಿನ ಈ ಯೋಜನೆಯು ಒಮಾನ್‌ನಿಂದ ಗುಜರಾತ್ ಕರಾವಳಿಯವರೆಗೆ ಅರಬ್ಬಿ ಸಮುದ್ರದ ಅಡಿಯಲ್ಲಿ 2,000 ಕಿ.ಮೀ. ಉದ್ದ.
2. **ವಿಶ್ವದ ಅತ್ಯಂತ ಆಳದ ಪೈಪ್‌ಲೈನ್:** ಇದು ಸಮುದ್ರದಡಿ ಗರಿಷ್ಠ 3,450 ಮೀಟರ್ ಆಳದಲ್ಲಿ ಹಾದುಹೋಗ ಲಿದ್ದು, ಜಾಗತಿಕ ಮಟ್ಟದ ಅತಿದೊಡ್ಡ ಹಾಗೂ ಅತ್ಯಂತ ಆಳವಾದ ಸಮುದ್ರ ದಡಿಯ ಯೋಜನೆಗಳಲ್ಲಿ ಒಂದು.
3. **ಅನಿಲ ಪೂರೈಕೆ ಸಾಮರ್ಥ್ಯ:** ಪೈಪ್‌ಲೈನ್ ಮೂಲಕ ಪ್ರತಿದಿನ ಅಂದಾಜು 31 ಮಿಲಿಯನ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ ನೈಸರ್ಗಿಕ ಅನಿಲ ಪೂರೈಕೆ.
4. **ನಿರ್ಮಾಣದ ಅವಧಿ:** ಯೋಜನೆಗೆ ಅಧಿಕೃತ ಹಸಿರು ನಿಶಾನೆ ದೊರೆತರೆ, ಮುಂದಿನ 5 ರಿಂದ 7 ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ.

ಸವಾಲುಗಳು?

- ಆಳ ಸಮುದ್ರದಲ್ಲಿ ತಾಂತ್ರಿಕ ನಿರ್ವಹಣೆಯ ಸವಾಲು
- ಭಾರಿ ಹೂಡಿಕೆ ಅಗತ್ಯ
- ಭದ್ರತಾ ಹಾಗೂ ಭೌಗೋಳಿಕ-ರಾಜಕೀಯ ಅಪಾಯಗಳು

ಏನು ಲಾಭ?

- ಕಡಿಮೆ ವೆಚ್ಚದಲ್ಲಿ ಅನಿಲ ಲಭ್ಯ
- ಕೈಗಾರಿಕಾ ಉತ್ಪಾದನೆಗೆ ಉತ್ತೇಜನ
- ಕ್ಲೀನ್ ಎನರ್ಜಿ ಬಳಕೆಗೆ ಸಹಕಾರ
- ಗ್ಯಾಸ್ ಆಧಾರಿತ ಆರ್ಥಿಕತೆ ಗುರಿಗೆ ಬೆಂಬಲ

ಕೈಗೊಂಡಿರುವ ಕ್ರಮಗಳು

ಈ ಬೃಹತ್ ಯೋಜನೆಗೆ ಸಂಬಂಧಿಸಿದಂತೆ ವಿಸ್ತೃತ ಕಾರ್ಯ ಸಾಧ್ಯತಾ ವರದಿಯನ್ನು ಸಿದ್ಧಪಡಿಸುವಂತೆ ಪೆಟ್ರೋಲಿಯಂ ಸಚಿವಾಲಯವು ಸರಕಾರಿ ಸ್ವಾಮ್ಯದ ಕಂಪನಿಗಳಾದ ಗೇಲ್, ಎಂಜಿನಿಯರ್ಸ್ ಇಂಡಿಯಾ ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ಗಳಿಗೆ ಸೂಚನೆ ನೀಡಲಿದೆ. ಈಗಾಗಲೇ ದೆಹಲಿ ಮೂಲದ 'ಸೌತ್ ಏಷ್ಯಾ ಗ್ಯಾಸ್ ಎಂಟರ್‌ಪ್ರೈಸಸ್' ಎಂಬ ಖಾಸಗಿ ಒಕ್ಕೂಟವು ಪ್ರಾಥಮಿಕ ಅಧ್ಯಯನಗ ಳನ್ನು ನಡೆಸಿದ್ದು, ಸಮುದ್ರದ ತಳದ ಪರಿಸ್ಥಿತಿಯನ್ನು ಅರಿಯಲು ಸುಮಾರು 25 ಕೋಟಿ ರು. ವೆಚ್ಚದಲ್ಲಿ 3,000 ಮೀಟರ್‌ಗಳಷ್ಟು ಪ್ರಾಯೋಗಿಕ ಪೈಪ್‌ಲೈನ್ ಅನ್ನು ಅಳವಡಿಸಿ ಪರೀಕ್ಷೆ ನಡೆಸಿದೆ.

ಚೀನಾ ಪ್ರೇರಣೆ!

ಅನಿಲ ಸಂಗ್ರಹಣಾ ಸಾಮರ್ಥ್ಯ ಹಾಗೂ ಪೈಪ್‌ಲೈನ್ ಭದ್ರತೆಯಲ್ಲಿ ಭಾರತವು ಚೀನಾಕ್ಕಿಂತ ಸಾಕಷ್ಟು ಹಿಂದಿದೆ. ಚೀನಾ ಹಲವು ಭೂಮಾರ್ಗದ ಪೈಪ್‌ಲೈನ್ ಹೊಂದಿರುವುದರಿಂದ ಹೊರ್ಮುಜ್ ಬಿಕ್ಕಟ್ಟು ಹೆಚ್ಚು ಬಾಧಿಸಿಲ್ಲ. ಎಚ್ಚೆತ್ತುಕೊಂಡಿರುವ ಭಾರತ, ಈಗ ಭವಿಷ್ಯದ ಇಂಧನ ಭದ್ರತೆಗಾಗಿ ಈ ಐತಿಹಾಸಿಕ ಯೋಜನೆಗೆ ಕೈಹಾಕಿದೆ.



ಭಾವುಕತೆ

ಬದಲಾಗಲು ಬಯಸಿದಾಗ

ಸೂಫಿ ಬಯಾಜಿದ್ ಆತ್ಮಕತೆಯಲ್ಲಿ ಬರೆದುಕೊಂಡ ಕತೆಯಿದು.

ನಾನು ಆಗಿನ್ನೂ ಯುವಕ. ದೇವರನ್ನು ಹೀಗೆ ಪ್ರಾರ್ಥಿಸುತ್ತಿದ್ದೆ– 'ದೇವರೇ, ಈ ಸಂಪೂರ್ಣ ಜಗತ್ತನ್ನೇ ಬದಲಾಯಿಸಲು ನನಗೆ ಶಕ್ತಿ ಕೊಡು.' ಆಗ ನನಗೆ ಎಲ್ಲರೂ ತಪ್ಪಾಗಿ ಕಾಣುತ್ತಿದ್ದರು. ಭೂಮಿಯ ಮುಖವನ್ನೇ ಬದಲಾಯಿಸಬೇಕು ಎಂಬ ಆಸೆ ನನ್ನೊಳಗಿತ್ತು. ನಾನು ಸ್ವಲ್ಪ ಪ್ರೌಢನಾದಾಗ ಹೀಗೆ ಪ್ರಾರ್ಥಿಸಲು ಆರಂಭಿಸಿದೆ– 'ನನ್ನ ಜೀವನದ ಅರ್ಧ ಭಾಗವೇ ಕಳೆದು ಹೋಯಿತು, ಆದರೆ ನಾನು ಒಬ್ಬ ವ್ಯಕ್ತಿಯನ್ನೂ ಬದಲಾಯಿಸಲಿಲ್ಲ. ಇಡೀ ಜಗತ್ತನ್ನು ಬದಲಿಸುವುದು ಅತಿಯಾಗಿ ತೋರುತ್ತದೆ. ಆದ್ದರಿಂದ ನನ್ನ ಕುಟುಂಬವನ್ನಾದರೂ ಬದಲಾಯಿಸಲು ನನಗೆ ಅವಕಾಶ ಕೊಡು.'

ನಾನು ವೃದ್ಧನಾದೆ. ಕುಟುಂಬವನ್ನೇ ಬದಲಿಸುವುದೂ ದೊಡ್ಡ ಕೆಲಸ ಎಂದು ನನಗೆ ಅರಿವಾಯಿತು. ಅವರನ್ನು ಬದಲಿಸಲು ನಾನು ಯಾರು? ಆಗ ನನಗೆ, ನಾನು ನನ್ನನ್ನಷ್ಟೇ ಬದಲಾಯಿಸಿಕೊಳ್ಳಬಲ್ಲೆ, ಅದೇ ಸಾಕು ಎಂದು ಗೊತ್ತಾಯಿತು. ಹೀಗೆ ಪ್ರಾರ್ಥಿಸಿದೆ– 'ದೇವರೇ, ನಾನು ನನ್ನನ್ನೇ ಬದಲಿಸಿಕೊಳ್ಳಬೇಕು. ಕನಿಷ್ಠ ಇದನ್ನಾದರೂ ಮಾಡಲು ಶಕ್ತಿ ಕೊಡು.' ದೇವರು ಉತ್ತರಿಸಿದ– 'ನೀನು ಇದನ್ನು ಆರಂಭದಲ್ಲೇ ಕೇಳಿದ್ದರೆ ಸಾಧ್ಯವಿತ್ತು. ಈಗ ಸಮಯವೇ ಉಳಿದಿಲ್ಲ!

ಹನಿ ಹನಿ ಕವಿತೆ

ಹನಿ

ಅವಳ ಕಣ್ಣುಗಳಲ್ಲಿ ಹನಿ
ಅವನ ಕಣ್ಣುಗಳಲ್ಲಿ ಮನಿ
ಅವನು ಅವಳ ಹನಿ
ಅವಳು ಅವನ ಮನಿ

• ಶಿವೂ

ಸುತ್ತಮುತ್ತ

ನೋಟುಗಳಲ್ಲಿ ಗೆರೆ



ನೀವು ಬಳಸುವ 100, 200, 500 ರೂಪಾಯಿಯ ನೋಟುಗಳನ್ನು ಎಚ್ಚರದಿಂದ ನೋಡಿ. ಅವುಗಳ ಒಂದು ಬದಿಯಲ್ಲಿ ಇರುವ ವಾಲಿದ ಗೆರೆಗಳನ್ನು ಯಾವತ್ತಾದರೂ ಗಮನಿಸಿದ್ದೀರಾ? ಏನದರ ಉದ್ದೇಶ? 100 ರೂಪಾಯಿಯ ಎರಡೂ ತುದಿಯಲ್ಲಿ ನಾಲ್ಕು ವಾಲಿದ ಗೆರೆಗಳಿರುತ್ತವೆ. 200 ನೋಟಿನಲ್ಲಿ ನಾಲ್ಕು ಗೆರೆಗಳು ಹಾಗೂ ಅವುಗಳ ನಡುವೆ ಎರಡು ವೃತ್ತ ಇರುತ್ತವೆ. 500 ನೋಟಿನ ಎರಡೂ ತುದಿಯಲ್ಲೂ ಐದು ಗೆರೆಗಳಿರುತ್ತವೆ. ಅದರ ಉದ್ದೇಶ ಇಷ್ಟೆ– ಅಂಧರಿಗೆ ಅವು ಯಾವ ನೋಟುಗಳು ಎಂದು ಸ್ಪಷ್ಟವಾಗಿ ಗೊತ್ತಾಗಲಿ ಎಂದು. ಮೂರೂ ನೋಟುಗಳ ಗೆರೆಗಳು ಭಿನ್ನವಾಗಿರುವುದು ಇದಕ್ಕೇ.

ಮಾತು-ಗೀತೆ

ಮನಸ್ಸೇ ಮಿತ್ರ-ಶತ್ರು

ಇಂದಿನ ಕಾಲದಲ್ಲಿ ಹಲವರು ಹೊರಗೆ ನಗುತ್ತಾರೆ. ಆದರೆ ಒಳಗೆ ಆತಂಕ, ಭಯದ ಜೊತೆ ಹೋರಾಡುತ್ತಾರೆ. ಅಂತಹ ಮನಸ್ಸಿಗೆ ಗಾಢವಾದ ನೆಮ್ಮದಿ ಕೊಡುವ ಗೀತೆಯ ಮಾತು ಇದು– 'ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ । ಆತ್ಮೈವ ಹಿ ಆತ್ಮನೋ ಬಂಧುರಾತ್ಮೈವ ರಿಪುರಾತ್ಮನಃ' (ಭಗವದ್ಗೀತೆ 6.5). ಅಂದರೆ ಮನಸ್ಸೇ ನಿನ್ನ ಸ್ನೇಹಿತನೂ ಆಗಬಹುದು, ಅದೇ ನಿನ್ನ ಶತ್ರುವೂ ಆಗಬಹುದು. ನಿನ್ನನ್ನು ನೀನೇ ಎತ್ತಿಕೊಳ್ಳಬೇಕು. ನಿನ್ನ ಮನಸ್ಸನ್ನು ನೀನೇ ಕುಗ್ಗಿಸಬಾರದು. ಏಕೆಂದರೆ ನಿನ್ನ ದೊಡ್ಡ ಬೆಂಬಲ ಕೂಡ ನಿನ್ನ ಮನಸ್ಸೇ, ಶತ್ರು ಕೂಡ ಅದೇ. ಅತಿಯಾದ ಚಿಂತನೆ ಮತ್ತು ಚಿಂತೆ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡೋದಿಲ್ಲ, ಕೆಲವೊಮ್ಮೆ ಮೌನ, ಧ್ಯಾನ, ವಿಶ್ರಾಂತಿ ಬೇಕು. ನಿನ್ನ ಮನಸ್ಸಿನ ಜೊತೆ ಯುದ್ಧ ಮಾಡಬೇಡ. ಅದನ್ನು ಅರ್ಥಮಾಡಿಕೊಳ್ಳಲು ಕಲಿತುಕೋ.

ವಿಶ್ವವಾಣಿ ಬೆಂಗಳೂರು 15-5-2026 ಶುಕ್ರವಾರ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಶಾಂತಿಯಿಂದ ಇರಲು ಬಯಸಿ ಸಾಮರಸ್ಯದಿಂದ ಒಟ್ಟಿಗೆ ಬದುಕುವುದನ್ನು ನಾವು ತ್ಯಜಿಸಿದ್ದೇವೆ, ಇದೇ ಇಂದಿನ ಅಶಾಂತಿಗೆ ಮೂಲ ಕಾರಣ.

ಶಾಂತಿಯ ದಿನ, ಸಾಮರಸ್ಯದಿಂದಿರಲಿ ಮನ

• ಮಿರ್ಲೆ ಚಂದ್ರಶೇಖರ

ಜೀವನ ಶ್ರೀಮಂತಿಕೆಯಿಂದ ಕೂಡಿರಬೇಕು ಎಂಬ ಆಸೆಯಿಂದ ಮನುಷ್ಯ ಎಲ್ಲವನ್ನೂ ಕಂಡುಹಿಡಿದುಕೊಂಡು ಅನುಭವಿಸುತ್ತಿದ್ದಾನೆ. ಆದರೆ, ಇವುಗಳ ನಡುವೆ ಶಾಂತಿ, ನೆಮ್ಮದಿ ಹಾಗೂ ಸಂತೋಷದಿಂದ ಇದ್ದಾನೆಯೇ? ಖಂಡಿತ ಇಲ್ಲ! ಐಷರಾಮಿಯಾಗಿ ಇರಲು ಹೋಗಿ ಬದುಕಿಗೆ ಅವಶ್ಯವಾದದ್ದನ್ನೇ ಕಳೆದುಕೊಂಡಿದ್ದಾನೆ. ಒಂದು ಹಂತ ತಲುಪಿದ ಮೇಲೆ ನೆಮ್ಮದಿಯ ಬದುಕಿಗೆ ಹುಡುಕಾಟ ನಡೆಸಲು ಪ್ರಾರಂಭಿಸಿದ್ದಾನೆ. ನೆಮ್ಮದಿಯ ತಳಪಾಯ ಶಾಂತಿ, ಇಡೀ ವಿಶ್ವವೇ ಯುದ್ಧ ಹಾಗೂ ಜಾಗತಿಕ ಮಾರುಕಟ್ಟೆಯ ಪರಿಣಾಮಗಳಿಂದಾಗಿ ಅಶಾಂತಿಯಿಂದ ಕೂಡಿದೆ. ಯಾವಾಗ ಏನಾಗುತ್ತದೆಯೋ ಎಂಬ ಆತಂಕದಿಂದ ದಿನಗಳನ್ನು ದೂಡುತ್ತಿದ್ದಾನೆ.

ಶಾಂತಿಯಿಂದ ಇರಲು ಬಯಸಿ ಸಾಮರಸ್ಯದಿಂದ ಒಟ್ಟಿಗೆ ಬದುಕುವುದನ್ನು ನಾವು ತ್ಯಜಿಸಿದ್ದೇವೆ, ಇದೇ ಇಂದಿನ ಅಶಾಂತಿಗೆ ಮೂಲ ಕಾರಣ. ಮಕ್ಕಳು ತಮ್ಮ ಇಚ್ಛೆಯಂತೆ ನಡೆದುಕೊಳ್ಳಲಿಲ್ಲವೆಂದು ತಂದೆ-ತಾಯಿಯರನ್ನು ಕೊಲ್ಲುತ್ತಿದ್ದಾರೆ, ನಾನು ಬಯಸಿದಂತೆ ಬೆಳೆಯಲಿಲ್ಲವೆಂದು ಮಕ್ಕಳನ್ನು ಹಿಂಸಿಸುವ ಪೋಷಕರು, ಮದುವೆಯ ಆದ ತಕ್ಷಣ ಪ್ರತ್ಯೇಕತೆಯನ್ನು ಬಯಸುವ ಮಕ್ಕಳು, ಕುಟುಂಬವೆಂದರೆ ಗಂಡ–ಹೆಂಡತಿ ಮತ್ತು ಒಂದು ಅಥವಾ ಎರಡು ಮಕ್ಕಳು, ವೃದ್ಧರನ್ನು ಪಾಲನೆ, ಪೋಷಣೆ ಮಾಡದ ಯುವಜನಾಂಗ, ಸುಖಕ್ಕಾಗಿ ಹಣದ ಹಿಂದೆ ಬಿದ್ದಿರುವುದು.... ಇತ್ತೀಚಿಗಳು ಸಮಾಜದಲ್ಲಿ ಶಾಂತಿ ಇಲ್ಲದಂತೆ ಮಾಡಿವೆ. ಜಗತ್ತಿಗೆ ಸಾಫ್ಟ್‌ವೇರ್ ಎಂಬ ಮಹಾಮಾರಿ ಬಂದ ನಂತರ ಹಣದ ಮದವೇರಿ ಜೀವನಶೈಲಿಯು ಸಮತೋಲನ ಕಳೆದುಕೊಂಡಿದೆ.

ಸಮುದಾಯವು ಆಧುನಿಕ ಶೈಲಿಯ ಯಾಂತ್ರಿಕ ಬದುಕಿನಲ್ಲಿ ಶಾಂತಿ ಕಳೆದುಕೊಳ್ಳುವ ದಾರಿಯಲ್ಲಿ ನಡೆದಿದೆ ಅಥವಾ ಜೀವನವು ಬದಲಾವಣೆಯ ಪರ್ವದಲ್ಲಿ ಇದೆ ಎಂಬುದನ್ನು ಮನಗಂಡು ಎಲ್ಲ ಸದಸ್ಯ ದೇಶಗಳನ್ನು ಸಮಾನ ಪ್ರಾತಿನಿಧ್ಯ ಹೊಂದಿರುವ ಏಕೈಕ ಸಂಸ್ಥೆಯಾದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಪ್ರತಿ ವರ್ಷ ಮೇ 16ರಂದು ಅಂತಾರಾಷ್ಟ್ರೀಯ ಶಾಂತಿಯಿಂದ ಒಟ್ಟಿಗೆ ವಾಸಿಸುವ ದಿನ (International day of living together in peace) ಎಂದು ಘೋಷಿಸಿದೆ.

ಸಮುದಾಯಗಳು ನಂಬಿಕೆಯ ನಾಯಕರ ಸಂಘಟನೆಯೊಂದಿಗೆ ಸಮನ್ವಯ ಕ್ರಮಗಳು ಮತ್ತು ಸೇವಾ ಕಾರ್ಯಗಳ ಮೂಲಕ ವ್ಯಕ್ತಿಗಳಲ್ಲಿ ಕ್ಷಮೆ ಮತ್ತು ಸಹಾನುಭೂತಿಯನ್ನು ಪ್ರೋತ್ಸಾಹಿಸುವ ಮೂಲಕ ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಮಾಜದಲ್ಲಿ ಖಾತ್ರಿ ಮಾಡುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತಿದೆ. ಜಗತ್ತಿನಲ್ಲಿ ಯುದ್ಧದ ಭೀತಿಯಿಂದ ಶಾಂತಿಯನ್ನು ಕಳೆದುಕೊಂಡಿರುವ ಇಂಥಹ ಪರಿಸ್ಥಿತಿಯಲ್ಲಿ ಜಾಗೃತಿ ಮೂಡಿಸುವ ದಿನವಾಗಿದೆ, ಸಾರ್ವಜನಿಕರಿಗಿಂತ ಜನನಾಯಕರಿಗೆ ಇದು ಮನವರಿಕೆ ಆಗಬೇಕಾಗಿದೆ. ಒಬ್ಬ ನಾಯಕನಾದವನು ತನ್ನ ಅಹಂಗಾಗಿ ತೆಗೆದುಕೊಳ್ಳುವ ನಿರ್ಧಾರ ಕೋಟ್ಯಾಂತರ ನಾಗರಿಕರ ಅಶಾಂತಿಗೆ ಕಾರಣವಾಗಿದೆ.

ಸಮಾಜದಲ್ಲಿ ಶಾಂತಿ, ಮನುಷ್ಯರಲ್ಲಿ ಸಹಿಷ್ಣುತೆ, ತಿಳಿವಳಿಕೆ ಮತ್ತು ಸಮುದಾಯಗಳ ಒಗ್ಗಟ್ಟನ್ನು ಪ್ರೋತ್ಸಾಹಿಸಲು ಅಂತಾರಾಷ್ಟ್ರೀಯ ಸಮುದಾಯಗಳು ನಡೆಸುವ ಪ್ರಯತ್ನಗಳನ್ನು ಶಿಸ್ತುಬದ್ಧವಾಗಿ ಸಜ್ಜುಗೊಳಿಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಪ್ರತಿ ವರ್ಷ ಮೇ16ರನ್ನು ಅಂತಾರಾಷ್ಟ್ರೀಯ ಶಾಂತಿಯಿಂದ ಒಟ್ಟಿಗೆ ವಾಸಿಸುವ ದಿನವೆಂದು ಘೋಷಿಸಿತು. ಶಾಂತಿ, ಸಾಮರಸ್ಯದ ಸುಸ್ಥಿರ ಜಗತ್ತನ್ನು ನಿರ್ಮಿಸುವುದು ಹಾಗೂ ಸಮುದಾಯಗಳಲ್ಲಿ ಒಗ್ಗಟ್ಟು ಕಾಪಾಡುವ ಸಲುವಾಗಿ ವ್ಯತ್ಯಾಸಗಳು ಮತ್ತು ವೈವಿಧ್ಯತೆಯಲ್ಲಿ ಏಕತೆಯಿಂದ ಇರುವ ಹಾಗೆ ಒಗ್ಗಟ್ಟಿನಿಂದ ಜೀವನವನ್ನು ನಿರ್ವಹಿಸುವ ಹೆಬ್ಬಯಕೆಯ ಗುರಿಯನ್ನು ಹೊಂದಿ ಈ ದಿನವನ್ನು ಆಚರಿಸಲಾಗುತ್ತಿದೆ.

ಜನರಲ್ಲಿ ಇರುವ ಅಸಮತೋಲನ ಹಾಗೂ ವ್ಯತ್ಯಾಸಗಳನ್ನು ಒಪ್ಪುವುದು, ಬೇರೆಯವರ ಅಭಿಪ್ರಾಯಗಳನ್ನು ಕೇಳುವುದು, ಗುರುತಿಸುವುದು, ಗೌರವಿಸುವುದು ಮತ್ತು ಪ್ರಶಂಸಿಸುವ ಗುಣವನ್ನು ಹೊಂದಿರವುದು, ಇದರೊಟ್ಟಿಗೆ ಶಾಂತಿಯುತವಾಗಿ ಮತ್ತು ಒಗ್ಗಟ್ಟಿನಲ್ಲಿ ಬದುಕುವುದು.

2026ನೇ ಸಾಲಿನ ಘೋಷ ವಾಕ್ಯ ''ಶಾಂತಿಯಲ್ಲಿ ಒಟ್ಟಾಗಿ ಬದುಕುವುದು, ಪರಸ್ಪರ ಸಂವಾದ, ಸೇರ್ಪಡೆ ಮತ್ತು ಸಾಮರಸ್ಯಗಳ ಮೂಲಕ ವಿಶ್ವಾಸವನ್ನು ಬೆಳೆಸುವುದು (Living together in peace, Building trust through dialogue, Inclusivon and reconciliation) ಎಂಬುದು ಸಮಯೋಚಿತವಾಗಿದೆ. ಸಾಮರಸ್ಯ ಇಲ್ಲದ ದೇಶಗಳಾದ ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ಭೀಕರ ಯುದ್ಧ ನಡೆಯುತ್ತಿದೆ. ಪರಿಣಾಮ ವಾಗಿ ಇಡೀ ಜಗತ್ತಿಗೆ ಹಾಗೂ ಮನುಕುಲಕ್ಕೇ ಬಾರಿ ಪೆಟ್ಟು ಬಿದ್ದಿದೆ. ಈಗಲಾದರೂ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಪ್ರಮುಖ ವಿಷಯವೆಂದು ಪರಿಗಣಿಸಿ ಪರಸ್ಪರ ಸಂವಾದ ನಡೆಸಿ ವಿಶ್ವಾಸವನ್ನು ದೇಶಗಳ ನಡುವೆ ಮೂಡಿಸಬೇಕಿತ್ತು, ರೂಪಿಸಿದ ಘೋಷ ವಾಕ್ಯಕ್ಕೆ ಗೌರವವಾದರೂ ಸಿಗುತ್ತಿತ್ತು.

ಎರಡನೇ ಮಹಾಯುದ್ಧದ ವಿನಾಶದ ತರುವಾಯ ಮುಂದಿನ ಪೀಳಿಗೆಯನ್ನು ಯುದ್ಧ ಎಂಬ ಮಾನವಕುಲದ ರಾಕ್ಷಸನನ್ನು ಸದೆಬಡಿದು ರಕ್ಷಿಸಲು ವಿಶ್ವಸಂಸ್ಥೆಯನ್ನು ಸ್ಥಾಪಿಸಿದ್ದು ಗೊತ್ತಿದೆ. ಇದು ಜನಾಂಗ, ಲಿಂಗ, ಭಾಷೆ, ಧರ್ಮ ಭೇದವಿಲ್ಲದೆ ಎಲ್ಲರಿಗೂ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳ ಗೌರವವನ್ನು ಪ್ರೋತ್ಸಾಹಿಸುವುದು ಸೇರಿದಂತೆ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಂತಾರಾಷ್ಟ್ರೀಯ ಸಹಕಾರವನ್ನು ಸಾಧಿಸುವುದು ಉದ್ದೇಶಗಳಲ್ಲಿ ಒಂದಾಗಿದೆ. ಆದರೆ, ಈಗ ಈ ಸಂಸ್ಥೆಗೆ ಏನಾಗಿದೆ? ಎಂಬುದು ಸಾರ್ವಜನಿಕರಿಗೆ ಪ್ರಶ್ನೆಯಾಗಿ ಕಾಡುತ್ತಿದೆ.

ಯುದ್ಧಗಳು ನಾಯಕರುಗಳ ಮನಸ್ಸಿನಲ್ಲಿ ಪ್ರಾರಂಭವಾಗಿದೆ. ರಕ್ಷಣೆಯನ್ನು ಹೊರಬೇಕಾದವರೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲಾಗದಿದ್ದರೆ ನಂಬಿದವರನ್ನು ರಕ್ಷಿಸುತ್ತಾರೆಯೇ? ಯುದ್ಧಗಳು ನಿಲ್ಲಬೇಕು, ಮುಂದೆ ನಡೆಯಕೂಡದು, ಯಾವಾಗಲೂ ಶಾಂತಿಯ ಬದುಕು ಕಟ್ಟಿಕೊಳ್ಳಬೇಕು. ಸದ್ಯ ಅಮೆರಿಕ–ಇರಾನ್ ಯುದ್ಧದ ಪರಿಣಾಮ ವಿಶ್ವದಲ್ಲಿ ಶಾಂತಿಯು ದೂರವಾಗಿದೆ. ಅಗತ್ಯವಾಗಿ ಬೇಕಾಗಿರುವುದು ಹಣ ಆಸ್ತಿ ಅಂತಸ್ತುಗಳಲ್ಲ ಅಥವಾ ದೇಶಗಳನ್ನು ನಾಶಮಾಡಿ ಯುದ್ಧ ಗೆಲ್ಲುವುದಲ್ಲ. ಈ ದಿನವು ನಮ್ಮನ್ನು ಒಟ್ಟಾಗಿ ಶಾಂತಿ ಹಾಗೂ ಸಹಭಾಳ್ವೆಯಿಂದ ಬದುಕಲು ಮತ್ತು ಇತರರನ್ನೂ ಶಾಂತಿಯಿಂದ ಬದುಕುವುದಕ್ಕೆ ಪೂರಕ ವಾತಾವರಣ ಸೃಷ್ಟಿಸುವ ಅರಿವು ಮೂಡಿಸಲಿ, ವಿಶ್ವದಲ್ಲಿ ಶಾಂತಿ ನೆಲೆಸಲು ಸಾಮಾಜಿಕ ಒಗ್ಗಟ್ಟು ಮತ್ತು ಸಾಮರಸ್ಯದ ಜೀವನ ಮುಖ್ಯವಾಗಿದೆ.



ಸ್ಪೇನ್‌ನ ಕಲಾವಿದ ಜೋಸೆ ವೆಲಾ ಜನೆಟ್ಟಿ ಅವರು ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ರಚಿಸಿದ ಭಿತ್ತಿಚಿತ್ರವು, ಶಾಶ್ವತ ಶಾಂತಿಗಾಗಿ ಮಾನವಕುಲ ನಡೆಸುತ್ತಿರುವ ನಿರಂತರ ಹೋರಾಟವನ್ನು ಚಿತ್ರಿಸುತ್ತದೆ.

ಟೆನ್ಷನ್ ಪೀಡೆ ತೊಲಗಿಸುವ ಮಹಾಪೀಡೆ ಮಹಾಬ್ಲ್ಲು

• ವಿನಾಯಕ ಒಣಿವಿಘ್ನೇಶ್ವರ

ಪ್ರತಿನಿತ್ಯದ ಸಂಸಾರದ ಜಂಜಾಟದಲ್ಲಿ ಮುಳುಗಿ ರುವ ನಾವು 'ಟೆನ್ಷನ್' ಎಂಬ ಪೀಡೆಯನ್ನು ಸದಾ ಹೊತ್ತುಕೊಂಡೇ ತಿರುಗುತ್ತೇವೆ. ಈ ಪೀಡೆಗೆ ಸಲ್ಪ ಮಟ್ಟಿನ ಉಪಶಮನ ಕೊಡುವ ಶಕ್ತಿ ಇರುವುದು ಹಾಸ್ಯಕ್ಕೆ, ನಗುವಿಗೆ. ನಗುವನ್ನು ಅರಸುವ, ಹಾಸ್ಯ ವನ್ನು ಬಯಸದ ಮನುಷ್ಯರು ವಿರಳವೇ ಸರಿ. ಯಾವುದೊ ಒಬ್ಬ ಮನುಷ್ಯ ಇದರಿಂದ ಹೊರತಾ ಗಿದ್ದಾನೆಂದರೆ ಅವನ ಮಾನಸಿಕ ಸ್ಥಿತಿಯನ್ನು ಅನುಮಾನಾಸ್ಪದವಾಗಿಯೇ ನೋಡಬೇಕಾಗುತ್ತದೆ. ಒಂದೋ ಅವನ ಒಳಗೆ ಆಳವಾದ ನೋವಿದೆ, ಅಥವಾ ಅವನ ಮಾನಸಿಕ ಸ್ಥಿತಿ ಸರಿ ಇಲ್ಲ, ವಿಪರೀತ ಒತ್ತಡದಲ್ಲಿ ಇದ್ದಾನೆಂದೋ ಮನಶಾಸ್ತ್ರಜ್ಞರು ವಿಶ್ಲೇಷಿಸುತ್ತಾರೆ. ಅಂಥಹುದೇ ಒಂದು ಕ್ಲಿಷ್ಟ ಮನಸ್ಥಿತಿ ಯಲ್ಲಿ ಇರುವವನು ಈ ನಾಟಕದ ನಾಯಕ 'ಮಹಾಬ್ಲ್ಲು.'

ಈತನಿಗೆ ಅತಿಯಾದ OCD (Obsessive Compulsive Disorder) ಅಂದರೆ ಶುಚಿತ್ವದ ಹುಚ್ಚು, ಗೀಳು. ಅದರ ಜತೆಗೆ ಹೆಂಡತಿ ಕಳಿಸಿದ ವಿಚ್ಛೇದನ ವಿಚಾರ. ಈ ಎರಡೂ ಸಮಸ್ಯೆ ಗಳೂ ಒಟ್ಟಿಗೆ ಸೇರಿ ಈತನ ಮನಸ್ಥಿತಿ ಕದಡಿಬಿಟ್ಟಿವೆ. ಈ ಮಾನಸಿಕವಾದ ವಿಕ್ಷಿಪ್ತ ಸ್ಥಿತಿಯಲ್ಲಿ ಅವನು ಹೋಗಿ ಸೇರುವುದು ಮತ್ತೊಬ್ಬ ವಿಚಿತ್ರ ಸನ್ನಿವೇಶ ದಲ್ಲಿರುವ ಸ್ನೇಹಿತನ ಮನೆಗೆ. ಅಲ್ಲಿಂದ ಶುರು ವಾಗುತ್ತದೆ ನೋಡಿ ನಗುವಿನ ಅಲೆ. ಅಲ್ಲಿಯವರೆಗೆ ಸಲ್ಪ ಮಟ್ಟಿನ ಕರುಣಾರಸದಲ್ಲಿ ಇದ್ದ ಪ್ರೇಕ್ಷಕರು ಹಾಸ್ಯ ರಸಕ್ಕೆ ಹೋಗ ತೊಡಗುತ್ತಾರೆ.

ಅವನ ಸ್ನೇಹಿತ ರಾಮ್ಕಿನೂ ಅಷ್ಟೇ. ವಿಚ್ಛೇದಿತ. ನಾಲ್ಕು ಬೆಡ್‌ರೂಮಿನ ಫ್ಲಾಟ್‌ನಲ್ಲಿ ಏಕಾಂತ ವಾಸ. ಹೆಂಡತಿ ಇಲ್ಲದ ಮನೆಯಲ್ಲಿ ಅವ್ಯವಸ್ಥಿತ ಬ್ರಹ್ಮಚಾರಿ ಯಂಥ ಜೀವನ. ಶನಿವಾರ ಸ್ನೇಹಿತರೊಂದಿಗಿನ ಮೋಜು ಮಸ್ತಿ ಅವನ ಜೀವನದ ಅವಿಭಾಜ್ಯ ಅಂಗ. ಮನೆಯ ಸ್ವಚ್ಛತೆಯಾಗಲೀ, ಊಟ ತಿಂಡಿ ಆಗಲಿ, ಯಾವುದೇ ವ್ಯವಸ್ಥೆ ಅನ್ನುವುದು ಈ ಮನುಷ್ಯನ ಜೀವನದಲ್ಲೇ ಇಲ್ಲ ಅನ್ನುವಂತೆ ಬದುಕು. ಆದರೂ ಸ್ನೇಹಿತನನ್ನು ಬಿಡದ ಒಳ್ಳೆಯ ಮನಸ್ಸು. ಇಂಥವನ ಮನೆಗೆ ಈ ಒಸಿಡಿ ಇರುವ ಮಹಾಬ್ಲ್ಲು ಬಂದು ಸೇರಿಕೊಳ್ಳುತ್ತಾನೆ. ಒಂದು ಕಡೆ ಶುಚಿತ್ವದ ಗೀಳು ಇರುವ ಮಹಾಬ್ಲ್ಲು. ಮತ್ತೊಂದು ಕಡೆ ವ್ಯವಸ್ಥೆ ಅಂದರೆ ಕಿರುಕುಳ ಅಂದುಕೊಳ್ಳುವ ಅವನ ಸ್ನೇಹಿತ ಇಬ್ಬರೂ ಬದುಕುವುದು ಒಂದೇ ಮನೆಯಲ್ಲಿ. ಇವರ ಮನೆಗೆ ಪ್ರತಿವಾರ ಬರುವ ಸ್ನೇಹಿತರು. ಈ ಮೂರು ವಿವಿಧ ರೀತಿಯ ಮನೋಭಾವದ ಪಾತ್ರಗಳ ನಡುವೆ ನಡೆಯುವ ಘಟನೆಗಳೂ, ಸಂಭಾಷಣೆಗಳೂ ಪ್ರತಿ ಕ್ಷಣಕ್ಕೂ ನಗೆಯನ್ನು ಉಕ್ಕಿಸುತ್ತವೆ. ಆ ಸ್ನೇಹಿತರೂ ಅಷ್ಟೇ. ಒಂದು ಕಡೆ ಇವನ ಸ್ನೇಹವನ್ನೂ ಬಿಡಲಾರರು. ಮತ್ತೊಂದು ಕಡೆ ಇವನ ಶುಚಿತ್ವದ ಗೀಳನ್ನೂ ಸಹಿಸಿಕೊಳ್ಳಲಾರರು. ಇವುಗಳ ನಡುವೆ ಅವರ ಒದ್ದಾಟಗಳಿಗೆ ನಗದೇ ಇರಲು ಸಾಧ್ಯವೇ ಇಲ್ಲ. ಈ ಮಧ್ಯದಲ್ಲಿ ಅದೇ ಅಪಾರ್ಟ್‌ಮೆಂಟಿನ ಇಬ್ಬರು ಒಂಟಿ ಹೆಣ್ಣುಮಕ್ಕಳ ಸಂಪರ್ಕ ಈ ಒಂಟಿ ಪುರುಷರಿಗೆ ಆಗುತ್ತದೆ. ಅವರೊಂದಿಗಿನ ಈ ಗಂಡಸರ ಸಂಬಂಧ ಬೆಸೆಯುವ ಪ್ರಯತ್ನ ಇಡೀ ಕಥೆಗೆ ಹೊಸ ತಿರುವನ್ನು ತಂದು ಕೊಡುತ್ತದೆ. ಸಂಬಂಧಗಳ ತಾಕಲಾಟವನ್ನೂ ಹಾಸ್ಯದ ಮೂಲಕ ಹೇಳುವ ಪ್ರಯತ್ನ ನಿರ್ದೇಶಕರದ್ದು. ಸರಳವಾದ ಸೆಟ್. ಚೆಂದವಾದ ಬೆಳಕಿನ ಸಂಯೋಜನೆ. ಇವುಗಳ ಜತೆಗೆ ಅದ್ಭುತ ಕಲಾವಿದರು ಪ್ರೇಕ್ಷಕರಲ್ಲಿ ನಗೆಯ ಬುಗ್ಗೆಯನ್ನೇ ಹರಿಸುತ್ತಾರೆ. ಮಹಾಬ್ಲ್ಲು ಪಾತ್ರವನ್ನು ನಟಿಸಿರುವ ಖ್ಯಾತ ಕಲಾವಿದ ಸುಂದರ್ ವೀಣಾ ತಮ್ಮ ಎಂದಿನ ಭಾವ ಭಂಗಿಗಳಿಂದ ನಕ್ಕೂ ನಕ್ಕೂ ಸುಸ್ತಾಗಿಸುತ್ತಾರೆ. ನಾಟಕದ ನಿರ್ದೇಶಕ ರಾಜೇಂದ್ರ ಕಾರಂತ್ ಸ್ನೇಹಿತನಾಗಿ ಸಹಜ ಅಭಿನಯದಿಂದ ಇಡೀ ನಾಟಕಕ್ಕೆ ಮೆರುಗು ತಂದಿದ್ದಾರೆ. ಇವರ ಜೋಡಿಯ ಜತೆಗೆ ಸ್ನೇಹಿತರಾಗಿ, ಅಪಾರ್ಟ್‌ಮೆಂಟಿನ ಸೀತಾ–ಗೀತಾ ಆಗಿ ನಟಿಸಿರುವ ಎಲ್ಲ ಕಲಾವಿದರೂ ನಾಟಕದ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಪ್ರತಿಯೊಂದು ಸನ್ನಿವೇಶವೂ, ಸಂಭಾಷಣೆಯೂ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತದೆ. ಟೆನ್ಷನ್ ಎಂಬ ಪೀಡೆಯನ್ನು ಹೊತ್ತು ನಾಟಕಕ್ಕೆ ಹೋದರೆ, ಈ ಮಹಾಪೀಡೆ ಮಹಾಬ್ಲ್ಲು ಅದನ್ನು ನಿವಾರಿಸಿ ಕಳಿಸುತ್ತಾನೆ. ನೋಡಿ, ನಗಿ, ಹಗುರಾಗಿ.

ಬ್ರಾಹ್ಮೀ ಮುಹೂರ್ತದ ಸೌಂದರ್ಯ

• ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

ಯಾವುದೇ ಶುಭ ಕಾರ್ಯ ಆರಂಭಿಸಲು ಶುಭಮುಹೂರ್ತ ನೋಡುತ್ತೇವೆ. ಅದರಲ್ಲೂ ಬ್ರಾಹ್ಮೀ ಮುಹೂರ್ತದಲ್ಲಿ ಮಾಡುವ ಕಾರ್ಯಕ್ರಮಗಳು ಖಂಡಿತ ಶ್ರೇಯಸ್ಕರ. ಬ್ರಾಹ್ಮೀ ಮುಹೂರ್ತವೆಂದರೆ ರಾತ್ರಿ ಕೊನೆಯ ಯಾಮದ ಕಡೆಯ ಮೂರನೇ ಒಂದು ಭಾಗದ ಅವಧಿ ಅಥವಾ ಸೂರ್ಯೋದಯಕ್ಕೆ ಮೊದಲಿನ 1 ಗಂಟೆ 36 ನಿಮಿಷಗಳ (96 ನಿಮಿಷ) ಅವಧಿ.ಇದು ಪ್ರತಿ ದಿನದ ಅತ್ಯಂತ ಸುಂದರ, ಶಾಂತ, ದೈವಿಕ ಶಕ್ತಿಯ, ಪ್ರಶಸ್ತ ಕಾಲ. ಈ ಅವಧಿಯಲ್ಲಿ ದುಂಬಿಗಳ ಝೇಂಕಾರ, ಪುಷ್ಪಗಳ ಅರಳುವಿಕೆ, ಹಕ್ಕಿಗಳ ಚಿಲಿಪಿಲಿ, ತಂಗಾಳಿಯ ತಂಪೆಲರು, ಸೂರ್ಯೋದಯದ ಪ್ರಥಮ ಕಿರಣಗಳ ಆಗಮನ, ಅಗಸದಲ್ಲಿ ಮೋಡಗಳ ನಾನಾ ಚಿತ್ತಾರ ಇವನ್ನೆಲ್ಲ ಗಮನಿಸಬಹುದು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಕಣಿ ಹೇಳುವವಳು ಅಂಜಿಕೆಯಿಲ್ಲದೆ ಬಂದಿದ್ದಾಳೆ (4)
3. ಆರೋಗ್ಯ ಹದಗೆಟ್ಟಾಗ ಭೇಟಿ ಮಾಡಬೇಕಾಗುವ ಆಸ್ಪತ್ರೆಗೆ ಮತ್ತೊಂದು ಹೆಸರಿದು (4)
4. ಮಸ್ತಕ ತುಂಬಲು ಓದ ಬೇಕಾಗುವ ಹೊತ್ತಗೆ (3)
5. ಕಡಿಯುವಾಗ ಇರಬೇಕಾದ ಹತೋಟಿ (4)
7. ಶ್ರೇಷ್ಠವಾದ ನೆಲೆ ಎಂಬರ್ಥದಲ್ಲಿ ಸ್ವರ್ಗಕ್ಕೆ ಹೀಗೆನ್ನಬಹುದು (4)
10. ಪಿಂಗಾಣಿ ಬಟ್ಟಲುಗಳಲ್ಲಿ ನೀರು ತುಂಬಿಟ್ಟು, ಕಡ್ಡಿಯಿಂದ ಬಡಿದು ನುಡಿಸುವ ವಾದ್ಯ (5)
12. ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
14. ರಸಾನುಭವಕ್ಕೆ ಉಂಟಾಗುವ ಅಡ್ಡಿ (4)
15. ದೂರವನ್ನು ಅಳೆಯುವ ಒಂದು ಪ್ರಮಾಣವಿದು (3)
16. ಸಾಮಗ್ರಿ, ಸಲಕರಣೆಗೆ ಮತ್ತೊಂದು ಹೆಸರು (4)
17. ಅಡ್ಡಿ, ಆತಂಕವಿಲ್ಲದ (4)

ಮೇಲಿಂದ ಕೆಳಕ್ಕೆ

2. ಹಣ ಖರ್ಚು ಮಾಡಲು ಹಿಂದೆ-ಮುಂದೆ ನೋಡುವ ಲೋಭಿ (3)
3. ಅಸ್ತವ್ಯಸ್ತವಾಗಿ ಬಂದಿರುವ ಬಿಲ್ಲೆ (3)
5. ಕೋಪವುಂಟಾಗುವುದನ್ನು ಹೇಳುವ ನುಡಿಗಟ್ಟು (5)
6. ನೀರಿನಲ್ಲಿ ಹುಟ್ಟಿದ ತಾವರೆ (3)
8. ವೃಕ್ಷವನ್ನು ಕೊರೆಯುವ ಒಂದು ಪಕ್ಷಿ (5)
9. ಮಹಡಿ ಅಥವಾ ಮಟ್ಟ (3)
11. ತಲೆಕೆಳಗಾದ ಸಲೀಸು (3)
13. ಮತ್ತೊಂದು ಅಂಕೆ (3)
14. ದನಿಯೊಂದಿಗೆ ಬಂದಿರುವ ಆನೆ (3)

ಸರಿಯುತ್ತರಗಳು

[illegible]

ಸಾವನ್ನು ನಗುತ್ತಲೇ ಗೆದ್ದ ಅಪ್ರತಿಮ ವೀರ: ಸ್ಯಾಮ್ ಮಾಣಿಕ್‌ಶಾ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

1942ರಲ್ಲಿ ಎರಡನೇ ಮಹಾಯುದ್ಧದ ಜ್ವಾಲೆ ಇಡೀ ಜಗತ್ತನ್ನು ಆವರಿಸಿತ್ತು. ಬರ್ಮಾದ (ಈಗಿನ ಮ್ಯಾನ್ಮಾರ್) ದಟ್ಟ ಕಾಡುಗಳಲ್ಲಿ ಜಪಾನಿ ಸೈನಿಕರ ಅಬ್ಬರ ಜೋರಾಗಿತ್ತು. ಅಲ್ಲಿನ ಸಿಟ್ಟಾಂಗ್ ಸೇತುವೆಯ ಬಳಿ ನಡೆದ ಆ ಭೀಕರ ಯುದ್ಧ, ಇತಿಹಾಸದ ಪುಟಗಳಲ್ಲಿ ಅಳಿಸಲಾಗದ ಸ್ಮರಣೆಯಾಗಿ ಉಳಿದಿದೆ. ಆ ಯುದ್ಧ ಭೂಮಿಯಲ್ಲಿ ಬ್ರಿಟಿಷ್ ಇಂಡಿಯನ್ ಆರ್ಮಿಯ 4/12 ಫ್ರಾಂಟಿಯರ್ ಫೋರ್ಸ್ ರೆಜಿಮೆಂಟ್‌ನ ಯುವ ಕ್ಯಾಪ್ಟನ್ ಒಬ್ಬರು ಶತ್ರುಗಳ ಎದೆಯಲ್ಲಿ ನಡುಕ ಹುಟ್ಟಿಸುತ್ತಿದ್ದರು. ಅವರೇ 'ಸ್ಯಾಮ್ ಮಾಣಿಕ್‌ಶಾ.'

ಜಪಾನಿ ಪಡೆಗಳು ಮುನ್ನುಗ್ಗುತ್ತಿದ್ದಂತೆ, ಸ್ಯಾಮ್ ಅವರ ತುಕಡಿಯ ಮೇಲೆ ಗುಂಡಿನ ಮಳೆ ಸುರಿಯಲಾರಂಭಿಸಿತು. ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಕಂಡ ಸ್ಯಾಮ್, ಸೈನಿಕರಲ್ಲಿ ಧೈರ್ಯ ತುಂಬಲು ಸ್ವತಃ ರಣರಂಗದ ಮುಂಚೂಣಿಗೆ ಬಂದರು. ತಮ್ಮ ಸಹೋದ್ಯೋಗಿಗಳು ಸುರಕ್ಷಿತವಾಗಿ ಹಿಂದೆ ಸರಿಯಲು ದಾರಿ ಮಾಡಿ ಕೊಡುವ ಸಲುವಾಗಿ ಅವರು ಪ್ರತಿ–ದಾಳಿಯನ್ನ ನಡೆಸಿದರು. ಆದರೆ, ಆ ಭೀಕರ ಹೋರಾಟದ ಮಧ್ಯೆ, ಶತ್ರುಗಳ ಮೆಷಿನ್ ಗನ್‌ನಿಂದ ಸಿಡಿದ ಸರಣಿ ಗುಂಡುಗಳು ನೇರವಾಗಿ ಸ್ಯಾಮ್ ಅವರ ದೇಹವನ್ನು ತೂರಿ ಹೋದವು. ಒಂಬತ್ತು ಗುಂಡುಗಳು ಅವರ ಹೊಟ್ಟೆ, ಶ್ವಾಸಕೋಶ ಮತ್ತು ಯಕೃತ್ತನ್ನು ಛಿದ್ರಗೊಳಿಸಿದ್ದವು. ರಕ್ತದ ಮಡುವಿನಲ್ಲಿ ಕುಸಿದು ಬಿದ್ದ ಸ್ಯಾಮ್ ಅವರನ್ನು ನೋಡಿ, ಜತೆಗಿದ್ದವರು ಅವರು ಬದುಕುವುದು ಅಸಾಧ್ಯವೆಂದೇ ಭಾವಿಸಿದ್ದರು. ಅವರ ಅದಮ್ಯ ಶೌರ್ಯವನ್ನು ಕಣ್ಣಾರೆ ಕಂಡಿದ್ದ ಕಮಾಂಡಿಂಗ್ ಆಫೀಸರ್ ಮೇಜರ್ ಜನರಲ್ ಡೇವಿಡ್ ಕೋವನ್ ಓಡಿ ಬಂದು ಸ್ಯಾಮ್ ಅವರ ಸ್ಥಿತಿಯನ್ನು ಕಂಡರು. ಸತ್ತ ನಂತರ ಯಾರಿಗೂ ಮಿಲಿಟರಿ ಕ್ರಾಸ್ ಪದಕ ನೀಡುವುದಿಲ್ಲ ಎಂದು ಭಾವಿಸಿದ ಕೋವನ್, ತಕ್ಷಣ ತಮ್ಮ ಎದೆಯ ಮೇಲಿದ್ದ 'ಮಿಲಿಟರಿ ಕ್ರಾಸ್' (Military Cross) ಪದಕವನ್ನು ತೆಗೆದು ಸ್ಯಾಮ್ ಅವರ ಎದೆಯ ಮೇಲೆ ತೊಡಿಸಿದರು. ಅದು ಒಬ್ಬ ವೀರನಿಗೆ ಯುದ್ಧಭೂಮಿಯಲ್ಲೇ ಸಿಕ್ಕ ಅತ್ಯುನ್ನತ ಗೌರವವಾಗಿತ್ತು.

ಅರೆಪ್ರಜ್ಞಾವಸ್ಥೆಯಲ್ಲಿದ್ದ ಸ್ಯಾಮ್ ಅವರನ್ನು ಹೇಗೋ ಮಾಡಿ ಫೀಲ್ಡ್ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿನ ಆಸ್ಟ್ರೇಲಿಯನ್ ಸರ್ಜನ್ ಸ್ಯಾಮ್ ಇವರ ದಾರುಣ ಸ್ಥಿತಿಯನ್ನು ನೋಡಿದಾಗ, ಸಾವಿನ ಅಂಚಿನಲ್ಲಿದ್ದರೂ ಸ್ಯಾಮ್ ಅವರಲ್ಲಿನ ಹಾಸ್ಯಪ್ರಜ್ಞೆ ಬತ್ತಿರಲಿಲ್ಲ. ಅವರು ನಿಧಾನವಾಗಿ, 'ನನ್ನನ್ನು ಒಂದು ಕತ್ತೆ ಒದೆಯಿತು!' ಎಂದು ಪಿಸುಗುಟ್ಟಿದ್ದರಂತೆ. ಅಷ್ಟು ನೋವಿನಲ್ಲೂ ತಮಾಷೆ ಮಾಡುತ್ತಿದ್ದ ಆ ಮನುಷ್ಯನ ಬದುಕುವ ಛಲವನ್ನು ಕಂಡ ವೈದ್ಯರು ಆಶ್ಚರ್ಯಚಕಿತರಾದರು. ಯಾವ ಮನುಷ್ಯ ಸಾವು ಹತ್ತಿರವಿದ್ದಾಗಲೂ ಇಷ್ಟು ಧೈರ್ಯದಿಂದ ನಗಬಲ್ಲನೋ, ಅವನು ಖಂಡಿತಾ ಬದುಕುತ್ತಾನೆ ಎಂದು ಹೇಳಿ ಅತ್ಯಂತ ಅಪಾಯಕಾರಿ ಶಸ್ತ್ರಚಿಕಿತ್ಸೆ ನಡೆಸಿ ಸ್ಯಾಮ್ ಅವರನ್ನು ಬದುಕಿಸಿದರು.

ಆದರೆ, ಈ ಘಟನೆ ಅವರ ವೃತ್ತಿಜೀವನದ ಅಂತ್ಯವಾಗಲಿಲ್ಲ, ಬದಲಾಗಿ ಅದೊಂದು ಹೊಸ ಯುಗದ ಆರಂಭವಾಗಿತ್ತು. ಮುಂದೆ ಅವರು ಭಾರತೀಯ ಸೇನೆಯಲ್ಲಿ ಉನ್ನತ ಸ್ಥಾನಕ್ಕೇರುತ್ತಾ ಹೋದರು. ಸುಮಾರು ಮೂರು ದಶಕಗಳ ನಂತರ, 1971ರ ಇಂಡೋ–ಪಾಕ್ ಯುದ್ಧದ ಸಮಯದಲ್ಲಿ ಭಾರತೀಯ ಸೇನಾ ಮುಖ್ಯಸ್ಥರಾಗಿ ಅವರು ತೋರಿದ ಚಾಣಾಕ್ಷತನ ಮತ್ತು ನಾಯಕತ್ವ ಇಡೀ ವಿಶ್ವವೇ ಬೆರಗಾಗುವಂತೆ ಮಾಡಿತು. ಬಾಂಗ್ಲಾದೇಶದ ಉದಯಕ್ಕೆ ಕಾರಣವಾದ ಐತಿಹಾಸಿಕ ಜಯದ ರೂವಾರಿ ಸ್ಯಾಮ್ ಮಾಣಿಕ್‌ಶಾ ಅವರೇ ಆಗಿದ್ದರು. 1973ರಲ್ಲಿ ಅವರು ಭಾರತದ ಮೊದಲ 'ಫೀಲ್ಡ್ ಮಾರ್ಷಲ್' ಆಗಿ ಗೌರವಿಸಲ್ಪಟ್ಟರು. ಬರ್ಮಾದ ಕಾಡಿನಲ್ಲಿ ಹೆಣವಾಗಿ ಬೀಳಬೇಕಿದ್ದ ಒಬ್ಬ ಯುವ ಅಧಿಕಾರಿ, ತನ್ನ ಅಪ್ರತಿಮ ಆತ್ಮವಿಶ್ವಾಸ ಮತ್ತು ಧೈರ್ಯದಿಂದ ದಕ್ಷಿಣ ಏಷ್ಯಾದ ಇತಿಹಾಸವನ್ನೇ ಬದಲಿಸಿದರು. ಬದುಕುವ ಛಲ ಮತ್ತು ಪರಿಸ್ಥಿತಿಯನ್ನು ಎದುರಿಸುವ ಸಮಯಪ್ರಜ್ಞೆ ಇದ್ದರೆ, ಸಾವಿನ ಹೊಸ್ತಿಲಿನಿಂದಲೂ ಮರಳಿ ಬಂದು ಬದುಕಲ್ಲಿ ಗೆದ್ದು ತೋರಿಸಬಹುದು. ಇಂತಹ ನೂರಾರು ಉದಾಹರಣೆ ನಮ್ಮ ಸುತ್ತಲೂ ಸಿಗುತ್ತದೆ. ಜೀವನೋತ್ಸಾಹ ನಮ್ಮೊಳಗೆ ಹುಟ್ಟಬೇಕು ಅಷ್ಟೇ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	12	8	4	16
ಗುಜರಾತ್	12	8	4	16
ಹೈದರಾಬಾದ್	12	7	5	14
ಪಂಜಾಬ್	12	6	5	13
ಚೆನ್ನೈ	11	6	5	12
ರಾಜಸ್ಥಾನ್	11	6	5	12
ಡೆಲ್ಲಿ	12	5	7	10
ಕೋಲ್ಕತಾ	11	4	4	9
ಮುಂಬೈ	12	4	8	8
ಲಖನೌ	11	3	8	6

ಪಂಜಾಬ್‌ಗೆ ಸತತ 5ನೇ ಸೋಲು

ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್ | ಶಾರ್ದುಲ್‌ಗೆ 4 ವಿಕೆಟ್ | ಗೆದ್ದು ಬೀಗಿದ ಮುಂಬೈ

ಧರ್ಮಶಾಲಾ: ಶಾರ್ದುಲ್ ಠಾಕೂರ್ ಅವರ ಮಾರಕ ಬೌಲಿಂಗ್ ಹಾಗೂ ತಿಲಕ್ ವರ್ಮಾ ಅವರ ಸ್ಫೋಟಕ ಅರ್ಧಶತಕದ ಬಲದಿಂದ ಮುಂಬೈ ಇಂಡಿಯನ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 6 ವಿಕೆಟ್‌ಗಳ ಗೆಲುವು ಪಡೆಯಿತು. ಆ ಮೂಲಕ ಸತತ ಐದನೇ ಸೋಲು ಅನುಭವಿಸಿದ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡದ ಪ್ಲೇಆಫ್ಸ್ ಹಾದಿ ಇನ್ನಷ್ಟು ಕಠಿಣವಾಗಿದೆ. ಈಗಾಗಲೇ ಪ್ಲೇಆಫ್ ರೇಸ್‌ನಿಂದ ಹೊರ ಬಿದ್ದಿರುವ ಮುಂಬೈಗೆ ಈ ಗೆಲುವು ಸ್ವಲ್ಪ ಸಮಾಧಾನ ಕೊಟ್ಟಿತು.

ಗುರುವಾರ ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಪಂಜಾಬ್ ಕಿಂಗ್ಸ್ ನೀಡಿದ 201 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಮುಂಬೈ ಇಂಡಿಯನ್ಸ್ ತಂಡಕ್ಕೆ ರೋಹಿತ್ ಶರ್ಮಾ ಹಾಗೂ ರಯಾನ್ ರಿಕೆಲ್ಟನ್ 61 ರನ್‌ಗಳ ಜತೆಯಾಟದ ಮೂಲಕ ಉತ್ತಮ ಆರಂಭ ತಂದುಕೊಟ್ಟರು. 23 ಎಸೆತಗಳಲ್ಲಿ 48 ರನ್ ಗಳಿಸಿದ ಬಳಿಕ ರಿಕೆಲ್ಟನ್ ಔಟ್ ಆದರು, ಆದರೆ ರೋಹಿತ್ ಶರ್ಮಾ 25 ರನ್‌ಗೆ ಔಟ್ ಆದರೆ, ನಮನ್ ಧಿರ್ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲಿಲ್ಲ.

ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್: 88 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ವೇಳೆ ಕ್ರೀಸ್‌ಗೆ ಬಂದ ತಿಲಕ್ ವರ್ಮಾ ಆಕ್ರಮಣಕಾರಿ ಆಟ ಪ್ರದರ್ಶಿಸಿದರು. ರುಥರ್‌ಫೋರ್ಡ್ ಜತೆಗೆ 42 ಎಸೆತಗಳಲ್ಲಿ 61 ರನ್‌ಗಳ ನಿರ್ಣಾಯಕ ಜತೆಯಾಟವನ್ನು ಆಡಿದರು. 20 ರನ್ ಗಳಿಸಿದ್ದ ವೇಳೆ ರುಥರ್‌ಫೋರ್ಡ್ ಔಟ್ ಆದರು. ಆದರೆ ಒಂದು ತುದಿಯಲ್ಲಿ ತಿಲಕ್ ವರ್ಮಾ ಕೇವಲ 33 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 6 ಬೌಂಡರಿಗಳೊಂದಿಗೆ ಅಜೇಯ 75 ರನ್ ಗಳಿಸುವ ಮೂಲಕ ಮುಂಬೈ ಇಂಡಿಯನ್ಸ್ ತಂಡಕ್ಕೆ ಗೆಲುವು ತಂದುಕೊಟ್ಟರು. ಕೊನೆಯಲ್ಲಿ ತಿಲಕ್ ಜೊತೆ 56 ರನ್‌ಗಳ ಜತೆಯಾಟವನ್ನು ಆಡಿದ ವಿಲ್ ಜ್ಯಾಕ್ಸ್ 10 ಎಸೆತಗಳಲ್ಲಿ ಅಜೇಯ 25 ರನ್‌ಗಳನ್ನು ಗಳಿಸಿದರು. ಅಂತಿಮವಾಗಿ ಮುಂಬೈ ತಂಡ 19.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿ ಗೆದ್ದು ಬೀಗಿತು.

ತಿಲಕ್ ವರ್ಮಾ ಬಿರುಸಿನ ಬ್ಯಾಟಿಂಗ್

4 ವಿಕೆಟ್ ಪಡೆದ ಶಾರ್ದುಲ್ ಠಾಕೂರ್

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಪಂಜಾಬ್ ಕಿಂಗ್ಸ್ ತಂಡವು ಶಾರ್ದುಲ್ ಠಾಕೂರ್ ಅವರ ಮಾರಕ ಬೌಲಿಂಗ್ ಹೊರತಾಗಿಯೂ ಪ್ರಭ್‌ಸಿಮ್ರನ್ ಸಿಂಗ್ ಹಾಗೂ ಒಮರ್ಜೈ ಅವರ ಬ್ಯಾಟಿಂಗ್ ಬಲದಿಂದ ತನ್ನ ಪಾಲಿನ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 200 ರನ್‌ಗಳನ್ನು ಕಲೆ ಹಾಕಿ, ಮುಂಬೈ ಇಂಡಿಯನ್ಸ್ ತಂಡಕ್ಕೆ 201 ರನ್‌ಗಳ ಗುರಿ ನೀಡಿತು.

ಪಂಜಾಬ್ ಉತ್ತಮ ಆರಂಭ: ಇನ್ನಿಂಗ್ಸ್ ಆರಂಭಿಸಿದ ಪ್ರಭ್‌ಸಿಮ್ರನ್ ಸಿಂಗ್ ಹಾಗೂ ಪ್ರಿಯಾಂಶ್ ಆರ್ಯ ಜೋಡಿ ಮುರಿಯದ ಮೊದಲನೇ ವಿಕೆಟ್‌ಗೆ 50 ರನ್‌ಗಳನ್ನು ಕಲೆ ಹಾಕಿತು. 17 ಎಸೆತಗಳಲ್ಲಿ 22 ರನ್ ಗಳಿಸಿ ಆಡುತ್ತಿದ್ದ ಪ್ರಿಯಾಂಶ್ ಆರ್ಯ ಅವರನ್ನು ದೀಪಕ್ ಚಹರ್ ಬೌಲ್ಡ್ ಮಾಡಿದರು, ನಂತರ ಕೂಪರ್ ಕನೋಲಿ 21 ರನ್ ಗಳಿಸಿದರು. ದೊರೆತ ಜೀವದಾನವನ್ನು ಸದುಪಯೋಗಪಡಿಸಿಕೊಂಡ ಪ್ರಭ್‌ಸಿಮ್ರನ್ 32 ಎಸೆತಗಳಲ್ಲಿ 4 ಸಿಕ್ಸರ್, 6 ಬೌಂಡರಿಗಳೊಂದಿಗೆ 57 ರನ್ ಗಳಿಸಿದ ಬಳಿಕ ಶಾರ್ದುಲ್ ಠಾಕೂರ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ನಾಯಕ ಶ್ರೇಯಸ್ ಅಯ್ಯರ್ ಹಾಗೂ ಸೂರ್ಯಾಂಶ್ ಶೆಡ್ಗೆ ಅವರನ್ನು ಶಾರ್ದುಲ್ ಠಾಕೂರ್ ಔಟ್ ಮಾಡಿದರು. ಶಶಾಂಕ್ ಸಿಂಗ್ ಅವರನ್ನು ಕೂಪರ್ ಕನೋಲಿ ಔಟ್ ಮಾಡಿದರು. ಓಮರ್ಜೈ ಅವರು ಕೊನೆಯಲ್ಲಿ ಅಬ್ಬರಿಸಿ 17 ಎಸೆತಗಳಲ್ಲಿ 38 ರನ್‌ಗಳನ್ನು ಗಳಿಸಿದರು. ವಿಷ್ಣು ವಿನೋದ್ ಹಾಗೂ ಕ್ಸೇವಿಯರ್ ಬಾರ್ಲೆಟ್ ಅವರು ಕ್ರಮವಾಗಿ 15 ರನ್ ಹಾಗೂ 18 ರನ್‌ಗಳನ್ನು ಕಲೆ ಹಾಕಿದರು. ಮುಂಬೈ ಪರ ಶಾರ್ದುಲ್ ಠಾಕೂರ್ 4 ವಿಕೆಟ್ ಪಡೆದರೆ, ದೀಪಕ್ ಚಹರ್ ಎರಡು ವಿಕೆಟ್ ಗಳಿಸಿದರು

ಸ್ಕೋರ್ ಬೋರ್ಡ್

ಪಂಜಾಬ್ 200/8 20 ಓವರ್

		ರನ್	ಎಸೆತ	4s	6s
ಪ್ರಿಯಾಂಶ್	ಬಿ ಚಾಹರ್	22	17	4	0
ಪ್ರಭ್‌ಸಿಮ್ರನ್	ಸಿ ಬಾಷ್, ಬಿ ಶಾರ್ದುಲ್	57	32	6	4
ಕೊನೊಲಿ	ಬಿ ಬಾವಾ	21	22	2	1
ಶ್ರೇಯಸ್	ಬಿ ಶಾರ್ದೂಲ್	4	2	1	0
ಸೂರ್ಯಾಂಶ್	ಸಿ ಬಾವಾ, ಬಿ ಶಾರ್ದೂಲ್	8	5	0	1
ಶಶಾಂಕ್	ಎಲ್‌ಬಿಡಬ್ಲ್ಯು, ಬಿ ಬಾಷ್	2	3	0	0
ಅಜ್ಮತುಲ್ಲಾ	ಸಿ ಜ್ಯಾಕ್ಸ್, ಬಿ ಚಾಹರ್	38	17	2	4
ಜಾನ್ಸೆನ್	ಬಿ ಶಾರ್ದೂಲ್	2	7	0	0
ವಿಷ್ಣುವಿನೋದ್	ನಾಟ್ ಔಟ್	15	8	1	1
ಕ್ಸೇವಿಯರ್	ನಾಟ್ ಔಟ್	18	7	2	1

ಬೌಲಿಂಗ್ ಮುಂಬೈ

	ಓವರ್	ಮೇಡನ್	ರನ್	ವಿಕೆಟ್
ಚಾಹರ್	4	0	36	2
ಬುಮ್ರಾ	4	0	35	0
ಶಾರ್ದುಲ್	4	0	39	4
ಕಾರ್ಬಿನ್	4	0	42	1
ರಘುಶರ್ಮಾ	2	0	22	0
ವಿಲ್‌ಜ್ಯಾಕ್ಸ್	1	0	9	0

ವಿಕೆಟ್ ಪತನ : 1/50, 2/107, 3/111, 4/111, 5/123, 6/135, 7/140, 8/166

ಮುಂಬೈ 205/4 19.5 ಓವರ್

		ರನ್	ಎಸೆತ	4s	6s
ರೋಹಿತ್	ಬಿ ಚಾಹಲ್	25	26	0	2
ರಿಕಲ್ಟನ್	ಸಿ ಆರ್ಯ, ಬಿ ಒಮರ್ಜೈ	48	23	4	4
ನಮನ್	ಸಿ ಅರ್ಶ್‌ದೀಪ್, ಬಿ ಜಾನ್ಸೆನ್	9	6	0	1
ತಿಲಕ್	ನಾಟ್ ಔಟ್	75	33	6	6
ರುದರ್ಫೋರ್ಡ್	ಸಿ ಬಾರ್ಟ್ಲೆಟ್, ಬಿ ಒಮರ್ಜೈ	20	21	1	1
ವಿಲ್‌ಜ್ಯಾಕ್ಸ್	ನಾಟ್ ಔಟ್	25	10	2	2

ಬೌಲಿಂಗ್ ಪಂಜಾಬ್

	ಓವರ್	ಮೇಡನ್	ರನ್	ವಿಕೆಟ್
ಅರ್ಶ್‌ದೀಪ್	4	0	29	0
ಒಮರ್ಜೈ	4	0	36	2
ಜಾನ್ಸೆನ್	4	0	55	1
ಬಾರ್ಟ್ಲೆಟ್	3.5	0	53	0
ಚಾಹಲ್	4	0	32	1

ವಿಕೆಟ್ ಪತನ : 1/61, 2/81, 3/88, 4/149

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ತಿಲಕ್ ವರ್ಮಾ (ಮುಂಬೈ)

ವಿರಾಮ
ಪ್ರತಿ ಭಾನುವಾರ

ಸಮಾಚಾರ ಸಣ್ಣದಲ್ಲ

ಭಾರತ ಎ ತಂಡಕ್ಕೆ ತಿಲಕ್ ನಾಯಕ

ದೆಹಲಿ: ಶ್ರೀಲಂಕಾದಲ್ಲಿ ನಡೆಯಲಿರುವ ಮುಂಬರುವ ತ್ರಿಕೋನ ಏಕದಿನ ಸರಣಿಗೆ ಬಿಸಿಸಿಐ ಭಾರತ-ಎ ತಂಡವನ್ನು ಪ್ರಕಟಿಸಿದೆ. ಈ ಸರಣಿಯಲ್ಲಿ ಭಾರತ ಆತಿಥೇಯ ರಾಷ್ಟ್ರದ ಶ್ರೀಲಂಕಾ-ಎ ತಂಡ ಮತ್ತು ಅಫಘಾನಿಸ್ತಾನ-ಎ ತಂಡಗಳ ವಿರುದ್ಧ ಸ್ಪರ್ಧಿಸಲಿದೆ. ತಿಲಕ್ ವರ್ಮಾ ಅವರಿಗೆ ಈ ತಂಡದ ನಾಯಕತ್ವ ವಹಿಸಲಾಗಿದೆ. **ತಂಡ ಹೀಗಿದೆ:** ತಿಲಕ್ ವರ್ಮಾ (ನಾಯಕ), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ (ಉಪ ನಾಯಕ), ಆಯುಷ್ ಬಧೋನಿ, ನಿಶಾಂತ್ ಸಿಂಧು, ಹರ್ಷ್ ದುಬೆ, ಸೂರ್ಯಾಂಶ್ ಶೆಡ್ಗೆ, ಪ್ರಭ್‌ಸಿಮ್ರನ್ ಸಿಂಗ್ (ವಿಕೆಟ್‌ಕೀಪರ್), ಕುಮಾರ್ ಕುಶಾಗ್ರಾ (ವಿಕೆಟ್ ಕೀಪರ್), ಯಶ್ ಠಾಕೂರ್, ಯಧ್ವೀರ್ ಸಿಂಗ, ವಿಪ್ರಝ್ ನಿಗಮ್, ಅರ್ಷದ್ ಖಾನ್.

ಓವರ್ಟನ್ ಸ್ಥಾನಕ್ಕೆ ಫರೆಸ್ಟರ್ ಆಯ್ಕೆ

ದೆಹಲಿ: ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಗಾಯಾಳು, ಇಂಗ್ಲೆಂಡ್ ಆಲ್‌ರೌಂಡರ್ ಜೇಮಿ ಓವರ್ಟನ್ ಅವರ ಸ್ಥಾನಕ್ಕೆ ಟೂರ್ನಿಯ ಇನ್ನುಳಿದ ಭಾಗಕ್ಕೆ ದಕ್ಷಿಣ ಆಫ್ರಿಕಾ ಆಲ್‌ರೌಂಡರ್ ಡಿಯಾನ್ ಫರೆಸ್ಟರ್ ಅವರನ್ನು ಸಿಎಸ್‌ಕೆ ತಂಡ ಸೇರಿಸಿಕೊಂಡಿದೆ. ಬಲ ತೊಡೆ ಗಾಯಕ್ಕೆ ತುತ್ತಾದ ಕಾರಣ ಜೇಮಿ ಓವಟರ್ನ್ ಅವರು ಟೂರ್ನಿ ಉಳಿದ ಭಾಗದಿಂದ ಹೊರ ಬಿದ್ದಿದ್ದಾರೆ. ಹಾಗಾಗಿ ಅವರ ಸ್ಥಾನಕ್ಕೆ ಫರೆಸ್ಟರ್ ಅವರು 75 ಲಕ್ಷ ರು. ಗಳಿಗೆ ಚೆನ್ನೈ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಜೇಮಿ ಓವರ್ಟನ್ ಅವರು ಗಾಯದ ನಂತರ ಹೆಚ್ಚಿನ ವೈದ್ಯಕೀಯ ಪರಿಶೀಲನೆ ಮತ್ತು ಚಿಕಿತ್ಸೆಗಾಗಿ ಇಂಗ್ಲೆಂಡ್‌ಗೆ ಮರಳಿದ್ದಾರೆ ಎಂದು ಫ್ರಾಂಚೈಸಿ ತಿಳಿಸಿದೆ.

ಚೆನ್ನೈಗಿಂದು ಮಾಡು ಇಲ್ಲವೇ ಮಡಿ ಪಂದ್ಯ

ಲಖನೌ: ಇಲ್ಲಿನ ಏಕಾನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ಶುಕ್ರವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಲಖನೌ ಸೂಪರ್ ಜೈಂಟ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ಸವಾಲನ್ನು ಎದುರಿಸಲಿದೆ. ಪ್ಲೇಆಫ್ ಪ್ರವೇಶಿಸುವ ಕನಸಿನಲ್ಲಿರುವ ಚೆನ್ನೈಗೆ ಈ ಪಂದ್ಯದಲ್ಲಿ ಗೆಲ್ಲಬೇಕಾದುದು ಅನಿವಾರ್ಯವಾಗಿದೆ.

ಲಖನೌ ತಂಡವು ಈಗಾಗಲೇ ಈ ಆವೃತ್ತಿಯ ಐಪಿಎಲ್ ಟೂರ್ನಿಯಿಂದ ಹೊರಬಿದ್ದಿದೆ. ಈ ಋತುವಿನ ಆರಂಭದಲ್ಲಿ ಸಿಎಸ್‌ಕೆ ತಂಡದ ವಿರುದ್ಧ ಅದು ಸೋಲು ಕಂಡಿತ್ತು. ಲಖನೌ ತಂಡವು ಇದುವರೆಗೆ 11 ಪಂದ್ಯಗಳನ್ನಾಡಿದ್ದು, ಕೇವಲ 3 ಪಂದ್ಯಗಳನ್ನು ಮಾತ್ರ ಗೆಲ್ಲುವಲ್ಲಿ ಸಫಲವಾಗಿದೆ.

8 ಪಂದ್ಯ ಸೋತು ಕೇವಲ 6 ಅಂಕಗಳನ್ನು ಸಂಪಾದಿಸಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ.

ಮತ್ತೊಂದೆಡೆ ಸಿಎಸ್‌ಕೆ 11 ಪಂದ್ಯಗಳಿಂದ ಆರು ಗೆಲುವುಗಳೊಂದಿಗೆ 12 ಅಂಕಗಳನ್ನು ಸಂಪಾದಿಸಿ ಅಂಕಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ. ಈ ಐಪಿಎಲ್ ಋತುವಿನ ಆರಂಭದ ಮೂರ್‍ನಾಲ್ಕು ಪಂದ್ಯದಲ್ಲಿ ಚೆನ್ನೈ ತಂಡವು ಕಳಪೆ ಸಾಧನೆ ಮಾಡಿತ್ತು. ಆದರೆ ಆ ಬಳಿಕ ಚೇತರಿಸಿದ ಋತುರಾಜ್ ಗಾಯಕ್ವಾಡ್ ನೇತೃತ್ವದ ತಂಡವು ಸದ್ಯ ಉತ್ತಮ ಪ್ರದರ್ಶನ ತೋರಿಸುತ್ತಿದ್ದು, ಪ್ಲೇಆಫ್ ಸ್ಥಾನ ಗಿಟ್ಟಿಸಲು ತೀವ್ರವಾಗಿ ಹೋರಾಡುತ್ತಿದೆ.

ಧೋನಿ ಲಖನೌಗೆ ತೆರಳಿಲ್ಲ: ಶುಕ್ರವಾರದ ಪಂದ್ಯದಲ್ಲಿ ಚೆನ್ನೈ ತಂಡದ ಹಿರಿಯ ಆಟಗಾರ ಎಂಎಸ್ ಧೋನಿ ಈ ಐಪಿಎಲ್‌ನಲ್ಲಿ ಮೊದಲ ಬಾರಿಗೆ ಮೈದಾನಕ್ಕಿಳಿಯ ಬಹುದು ಎಂದು ಅವರ ಅಭಿಮಾನಿಗಳು ನಿರೀಕ್ಷಿಸಿದ್ದರು. ಆದರೆ ಅವರು ಲಖನೌಗೆ ತೆರಳಿಲ್ಲ ಎಂದು ಮಾಧ್ಯಮ ವರದಿಗಳು ದೃಢಪಡಿಸಿವೆ.

ಪಿಚ್ ರಿಪೋರ್ಟ್: ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಈ ಬಾರಿ ಕೇವಲ ಬೌಲರ್‌ಗಳಿಗಷ್ಟೇ ನೆರವಾಗಿದೆ. ಆಡಿದ ಎಲ್ಲ ಪಂದ್ಯಗಳು ಲೋ ಸ್ಕೋರ್ ಆಗಿದ್ದು, ಪಿಚ್ ಕಡಿಮೆ ಬೌನ್ಸ್ ಹೊಂದಿದೆ. ಹಾಗಾಗಿ ಬ್ಯಾಟರ್‌ಗಳಿಗೆ ಕಷ್ಟಕರವಾಗಿರುತ್ತದೆ.

ಒಟ್ಟು ಮುಖಾಮುಖಿ

- ಆಡಿದ ಪಂದ್ಯಗಳು: 7
- ಲಖನೌ ಜಯ: 3
- ಚೆನ್ನೈ ಜಯ: 03
- ಫಲಿತಾಂಶ ರಹಿತ: 01

ಇಂದಿನ ಪಂದ್ಯ

ಲಖನೌ-ಚೆನ್ನೈ

- ಸ್ಥಳ:ಏಕಾನಾ ಕ್ರೀಡಾಂಗಣ, ಲಖನೌ
- ಸಮಯ: ರಾತ್ರಿ 7.30
- ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
- ಲೈವ್ ಸ್ಟ್ರೀಮಿಂಗ್: ಜಿಯೋ ಸ್ಪೋರ್ಟ್ಸ್

ವಿಟಾಕೀಸ್

ವಿದೇಶಕ್ಕೆ ಲಗ್ಗೆ ಇಟ್ಟ ಹೊಂಬಾಳೆ

ಕನ್ನಡದ ಖ್ಯಾತ ನಿರ್ಮಾಣ ಸಂಸ್ಥೆ ಹೊಂಬಾಳೆ ಫಿಲಂಸ್ ಕನ್ನಡ, ತೆಲುಗು, ಮಲೆಯಾಳಂ ಸಿನಿಮಾಗಳನ್ನು ನಿರ್ಮಾಣ ಮಾಡಿದೆ. ಜತೆಗೆ ಬಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿದೆ. ಈ ನಡುವೆಯೇ ಹೊಂಬಾಳೆ ಫಿಲಂಸ್ ವಿದೇಶಕ್ಕೂ ಲಗ್ಗೆ ಇಟ್ಟಿದೆ. ಹೊಂಬಾಳೆ ಫಿಲಂಸ್ ವಿದೇಶಿ ವಿತರಣೆ ಕ್ಷೇತ್ರಕ್ಕೆ ಕಾಲಿಡುವುದಾಗಿ ಘೋಷಿಸಿತ್ತು. ಇದೀಗ ಆ ಮಹತ್ವದ ಪ್ರಯಾಣಕ್ಕೆ ಮೊದಲ ಚಿತ್ರವಾಗಿ ಪೆದ್ದಿ ಆಯ್ಕೆಯಾಗಿದೆ. ಭಾರತೀಯ ಸಿನಿಮಾವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಹೊಂಬಾಳೆ ಫಿಲಂಸ್ ಇದೀಗ ಮತ್ತೊಂದು ದೊಡ್ಡ ಹೆಜ್ಜೆಯಾಗಿ ಅಂತಾರಾಷ್ಟ್ರೀಯ ವಿತರಣಾ ಕ್ಷೇತ್ರಕ್ಕೆ ಪ್ರವೇಶಿಸಿದೆ. 2026ರ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಚಿತ್ರ, ಪೆದ್ದಿ ಸಿನಿಮಾದ ವಿದೇಶಿ ವಿತರಣೆಯ ಹಕ್ಕುಗಳನ್ನು ಸಂಸ್ಥೆ ತನ್ನದಾಗಿಸಿಕೊಂಡಿದೆ. ಖ್ಯಾತ ನಿರ್ದೇಶಕ ಬುಚ್ಚಿ ಬಾಬು ಸನ ನಿರ್ದೇಶನದ ಪೆದ್ದಿ ಪೋಸ್ಟರ್, ಟೀಸರ್‌ನಲ್ಲಿಯೇ ಮತ್ತು ಹಾಡುಗಳಲ್ಲಿಯೇ ಮನಗೆದ್ದಿದೆ. ಗ್ರಾಮೀಣ ಭಾಗದ ಹಿನ್ನೆಲೆಯಲ್ಲಿ ಸಾಗುವ ಈ ಸಿನಿಮಾದಲ್ಲಿ ಕ್ರಿಕೆಟ್ ಕಥೆಯೂ ಇದ್ದು ಅದರ ಜತೆಗೆ ಕುಸ್ತಿ ಪಂದ್ಯಾವಳಿಯೂ ಗಮನಸೆಳೆಯುತ್ತದೆ. ರಾಮ್ ಚರಣ್ ಈ ಚಿತ್ರಕ್ಕಾಗಿ ಸಾಕಷ್ಟು ಶ್ರಮವಹಿಸಿದ್ದು, ರಗಡ್ ಆಗಿ ಕಂಗೊಳಿಸಿದ್ದಾರೆ. ಭರ್ಜರಿ ದೃಶ್ಯ ವೈಭವ ಮತ್ತು ರಾಮ್ ಚರಣ್ ಅವರ ವಿಭಿನ್ನ ಅವತಾರದಿಂದ ಪೆದ್ದಿ ಭರ್ಜರಿ ಕುತೂಹಲ ಮೂಡಿಸಿದೆ. ಜಾನ್ವಿ ಕಪೂರ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ.ಆಸ್ಕರ್ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಚಿತ್ರಕ್ಕೆ ಸಂಗೀತ ಸಂಯೋಜಿಸಿರುವುದು ಪೆದ್ದಿಗೆ ಶಕ್ತಿತುಂಬಿದೆ. ಪೆದ್ದಿ ಜೂನ್ 4ರಂದು ವಿಶ್ವದಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

ಡಿ..ಡಿ..ಡಿಕ್ಕಿ

ಇದು ಹಳ್ಳಿಬೇರು ಸಿಟಿ ಚಿಗುರು

ಪ್ರಶಾಂತ್.ಟ.ಆರ್

ಕಾಟೇರನಿಗೆ ಕಥೆ ಹೆಣೆದು, ಚಂದನವನಕ್ಕೆ ಲ್ಯಾಂಡ್ ಲಾರ್ಡ್ ಕರೆತಂದ ನಿರ್ದೇಶಕ ಜಡೇಶ್ ಕುಮಾರ್ ಹಂಪಿ ಈಗ ನಿರ್ಮಾಪಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ತಮ್ಮದೇ ಹಂಪಿ ಪಿಕ್ಚರ್ಸ್‌ನಲ್ಲಿ ಡಿ..ಡಿ..ಡಿಕ್ಕಿ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ವಿಭಿನ್ನ ಶೀರ್ಷಿಕೆಯ ಈ ಸಿನಿಮಾದಲ್ಲಿ ಹೊಸತನದ ಕಥೆಯೂ ಇದೆ. ತಮ್ಮ ಚೊಚ್ಚಲ ನಿರ್ಮಾಣದ ಚಿತ್ರದ ಬಗ್ಗೆ ಜಡೇಶ್ ಕುಮಾರ್ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಏನಿದು ಡಿ..ಡಿ...ಡಿಕ್ಕಿ?

ಜಡೇಶ್ ಕುಮಾರ್: ಡಿ..ಡಿ.. ಅಂದರೆ ಒಂದು ಫನ್, ಡಿಕ್ಕಿ ಎಂದರೆ ಸಂಘರ್ಷ ಅನ್ನಬಹುದು. ಸಿದ್ಧಾಂತಗಳ ನಡುವಿನ ಜಗಳ ಅಂದುಕೊಳ್ಳಬಹುದು, ಮಾತಿನಲ್ಲಿ ಮೂಡುವ ಮನಸ್ತಾಪ ಅನ್ನಬಹುದು. ಇಲ್ಲಿ ಎಮೋಷನ್ ಹೆಚ್ಚಾಗಿ ಬೆರೆತಿದೆ. ತಂದೆ ಮಕ್ಕಳು, ತಾತ ಮೊಮ್ಮಕ್ಕಳ ಬಾಂಧವ್ಯ, ಗಂಡ ಹೆಂಡಿರ ನಡುವಿನ ಮುನಿಸು ಎಲ್ಲವೂ ಚಿತ್ರದಲ್ಲಿದೆ. ಸದ್ಯ ಶೂಟಿಂಗ್ ಮುಕ್ತಾಯವಾಗಿದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ.

ವಿ.ಸಿ: ಈ ಕಥೆ ಆಯ್ದುಕೊಂಡಿದ್ದು?

ಜಡೇಶ್: ನಾನು ಹಿಂದೆ ನಡೆದಿರುವ ನೈಜಘಟನೆಗಳನ್ನು ಆಯ್ದುಕೊಂಡು ಸಿನಿಮಾ ನಿರ್ದೇಶನ ಮಾಡಿದ್ದೇನೆ. ಅವೆಲ್ಲವೂ ಬಹುತೇಕ ಕ್ರಾಂತಿಕಾರಿ ಕಥೆಗಳೇ ಆಗಿವೆ. ಅಂತೆಯೇ ರಂಜನಿ ಅವರು ಮನೆಯಲ್ಲಿ ನಡೆಯುವ ಕ್ರಾಂತಿಕಾರಿ ಕಥೆಯನ್ನು ಆಯ್ದುಕೊಂಡಿದ್ದರು. ಅದು ಕೌಟುಂಬಿಕ ಕಥನವಾದರೂ ಅಲ್ಲೊಂದು ಫನ್ ಇತ್ತು, ಮನರಂಜನೆಯೂ ಬೆರೆತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಎಮೋಷನ್ ಇತ್ತು. ಹಾಗಾಗಿ ಕಥೆ ಕೇಳಿದಾಕ್ಷಣ ಖುಷಿಯಾಯಿತು. ಮರುಮಾತನಾಡದೆ ನಿರ್ಮಾಣ ಮಾಡಲು ಒಪ್ಪಿದೆ. ಇದು ಇಂದಿನ ಕಾಲಘಟ್ಟಕ್ಕೆ ಹೊಂದುವ ಕಥೆ. ನಾವೆಲ್ಲರೂ ಹಳ್ಳಿಗಳಿಂದ ಬದುಕು ಕಟ್ಟಿಕೊಳ್ಳಲು ಮಹಾನಗರಕ್ಕೆ ಬಂದವರು. ನಗರದ ತೊಳಲಾಟ, ಸಿಟಿಯಲ್ಲಿಯೇ ಇರಬೇಕು ಎಂಬ ಮಡದಿಯ ಹಠ. ಅದರಿಂದ ನಮಗೆ ಎದಿರಾಗುವ ಸಂಕಷ್ಟ ಇದೆಲ್ಲವೂ ಸ್ಟೋರಿಯಲ್ಲಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಹಳ್ಳಿ ಬೇರು ಸಿಟಿಯ ಚಿಗುರು ಎನ್ನಬಹುದು. ಹಳ್ಳಿಯಿಂದ ಬಂದವರಿಗೆ ಈ ಕಥೆ ತುಂಬಾ ಕನೆಕ್ಟ್ ಆಗುತ್ತದೆ.

ಸೈಬರ್ ಕ್ರೈಂ ಕಥೆಯ ಗೀಕ್

ಸೈಬರ್ ಕ್ರೈಂ ಜಾನರ್‌ನ ಕಥೆಗಳು ಪ್ರೇಕ್ಷಕರನ್ನು ಸೆಳೆಯುತ್ತವೆ. ಈಗ ಅಂತಹದ್ದೇ ಕಥೆಯನ್ನು ಒಳಗೊಂಡಿರುವ ಗೀಕ್ ತೆರೆಗೆ ಸಿದ್ಧವಾಗಿದೆ. ಗೀಕ್ ಶೀರ್ಷಿಕೆಯಲ್ಲಿಯೇ ಕುತೂಹಲ ಮೂಡಿಸಿದೆ. ಡಿ.ಹರಿ ಪ್ರಕಾಶ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಸಿನಿಮಾ ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಗೀಕ್ ಟೀಸರ್ ಕೂಡ ರಿಲೀಸ್ ಆಗಿದ್ದು ಸಿನಿಮಾದ ಬಗೆಗಿನ ಕುತೂಹಲವನ್ನು ದುಪ್ಪಟ್ಟುಗೊಳಿಸಿದೆ. ಚಂದನವನದ ಐವತ್ತಕ್ಕೂ ಹೆಚ್ಚು ಸೆಲೆಬ್ರಿಟಿಗಳು ಟೀಸರ್ ಬಿಡುಗಡೆ ಮಾಡಿ ಚಿತ್ರದ ಕಥೆಯನ್ನು ಕೇಳಿ ಮೆಚ್ಚಿಕೊಂಡಾಡಿದ್ದಾರೆ.

ಇತ್ತೀಚೆಗೆ ಮೊಬೈಲ್ ಸಂಬಂಧಿತ ಆಪ್‌ಗಳು ಹಾಗೂ ಡೇಟಾ ದುರುಪಯೋಗಪಡಿಸಿಕೊಳ್ಳುತ್ತಿರುವ ಕುರಿತ ಕಥಾಹಂದರ ಈ ಚಿತ್ರದಲ್ಲಿದೆ. ಅದಕ್ಕೆ ಸೈಬರ್ ಕ್ರೈಂ, ಸಸ್ಪೆನ್ಸ್-ಥ್ರಿಲ್ಲರ್ ಅಂಶವನ್ನು ಬೆರೆಸಲಾಗಿದೆ. ಕಂಟೆಂಟ್ ಜತೆಗೆ ಸಸ್ಪೆನ್ಸ್, ಥ್ರಿಲ್ ನೀಡಬೇಕು ಎಂಬ ನಿಟ್ಟಿನಲ್ಲಿ ಈ ಸಿನಿಮಾ ತಯಾರಾಗಿದೆ. ಮೂಲತಃ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಹರಿಪ್ರಕಾಶ್, ಈ ಹಿಂದೆ ಕಿರುಚಿತ್ರ ನಿರ್ದೇಶಿಸಿದ್ದರು, ಅದಕ್ಕೆ ಸಾಕಷ್ಟು ಮೆಚ್ಚುಗೆಯೂ ವ್ಯಕ್ತವಾಗಿತ್ತು. ಈಗ ಗೀಕ್ ಚಿತ್ರವನ್ನು ನಿರ್ದೇಶಿಸುವ ಮೂಲಕ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಪ್ರವೀಣ್ ತೇಜ್, ಚೈತ್ರಾ, ಆಚಾರ್, ಕಿರಣ್ ಶ್ರೀನಿವಾಸ್, ವಿರಾನಿಕಾ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಎಸ್.ವಿ.ಎಂ ಪ್ರೊಡಕ್ಷನ್ಸ್ ಹಾಗೂ ಹರಿಪ್ರಕಾಶ್ ಫಿಲಂಸ್ ಬ್ಯಾನರ್‌ನಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಕೀರ್ತನ್ ಪೂಜಾರಿ ಛಾಯಾಗ್ರಹಣ, ಜೋ ಕೋಸ್ಟಾ ಸಂಗೀತ ನಿರ್ದೇಶನ, ಶಶಾಂಕ್ ನಾರಾಯಣ್ ಸಂಕಲನ ಈ ಚಿತ್ರಕ್ಕಿದೆ. ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಶೀಘ್ರದಲ್ಲಿಯೇ ಗೀಕ್ ತೆರೆಗೆ ಬರಲಿದೆ.

ಜನ್-ಜಗಳ ಡಿಂಚಕ್ ಡಿಂಚಕ್

ಜತೆಯಾಗಿ ಹಿತವಾಗಿ ಚಿತ್ರದ ಮೂಲಕ ಸಿನಿಪ್ರಿಯರ ಮನಸೆಳೆದ ನಟ ಅಗಸ್ತ್ಯ ಮತ್ತೊಂದು ಚಿತ್ರದ ಮೂಲಕ ಪ್ರೇಕ್ಷಕರನ್ನು ರಂಜಿಸಲು ಬರುತ್ತಿದ್ದಾರೆ. ಸದ್ಯ ಈ ಚಿತ್ರದ ಶೀರ್ಷಿಕೆ ಅನಾವರಣಗೊಂಡಿದ್ದು,

ಡಿಂಚಕ್ ಡಿಂಚಕ್ ಎಂಬ ವಿಶಿಷ್ಟ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಜನ್-ಜಗಳ ಗಮನ ಸೆಳೆಯಲು ಹೊರಟಿರುವ ಚಿತ್ರತಂಡ ಈ ಬಾರಿ ಹೊಸದೊಂದು ಹುರುಪಿನೊಂದಿಗೆ ಸಿದ್ಧವಾಗಿದೆ. ಇತ್ತೀಚೆಗೆ ಬರುತ್ತಿರುವ ಸಾಕಷ್ಟು ಸಿನಿಮಾಗಳ ಶೀರ್ಷಿಕೆಗಳನ್ನು ಗಮನಿಸಿದರೆ ವಿಚಿತ್ರ ಎನಿಸಿದರೂ ಪ್ರಸ್ತುತ ಸಂದರ್ಭಕ್ಕೆ ಹೇಳಿ ಮಾಡಿಸಿದಂತಿವೆ. ಜನ್-ಜಗಳ ಕಥೆಯನ್ನು ಹೊತ್ತ ಹಲವು ಸಿನಿಮಾಗಳು ಗೆದ್ದಿವೆ. ಈ ನಿಟ್ಟಿನಲ್ಲಿ ಯುವ ಸಮೂಹದ ಜತೆಗೆ ಕೌಟುಂಬಿಕ ಪ್ರೇಕ್ಷಕರಿಗೆ ಹಿಡಿಸುವ ಕಥಾಹಂದರ ಈ ಚಿತ್ರದಲ್ಲಿದೆ.

ಅತ್ಯಂತ ಸವಾಲಿನಿಂದ ಕೂಡಿರಬಹುದಾದ ಪಾತ್ರವನ್ನು ಆರಿಸಿಕೊಂಡಿರುವ ಅಗಸ್ತ್ಯ ಸಿನಿಮಾಗೆ ಚಿತ್ರಕಥೆ ಬರೆದಿದ್ದು ನಿರ್ದೇಶನದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಶ್ರೀರತ್ನ ಫಿಲಂ ಬ್ಯಾನರ್ ನಲ್ಲಿ ಚಿತ್ರ ನಿರ್ಮಾಣವಾಗಿತ್ತಿದ್ದು, ಚಿತ್ರದ ಹಾಡುಗಳಿಗೆ ಆನಂದ್ ರಾಜ ವಿಕ್ರಮ ಸಂಗೀತ ಸಂಯೋಜಿಸುತ್ತಿ ದ್ದಾರೆ. ಸಿನಿಮಾದ ಹಾಡುಗಳು ಒಂದಕ್ಕಿಂತ ಒಂದು ವಿಭಿನ್ನವಾಗಿ ಮೂಡಿಬರಲಿವೆ. ಚಿತ್ರವನ್ನು ತಾಂತ್ರಿಕವಾಗಿ ಶ್ರೀಮಂತ ಗೊಳಿಸಲು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಕ್ಯಾಮೆರಾ ಮತ್ತಿತರ ಸಲಕರಣೆಗಳನ್ನು ಉಪಯೋಗಿಸಲಾಗುವುದು ಎಂದು ಚಿತ್ರತಂಡ ಹೇಳಿದೆ.